ಸಂಪುಟ: ೦೬/ ಸಂಚಿಕೆ: ೨೨೮/ಗುರುವಾರ ದಿನಾಂಕ: ೦೭-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 228 / THURSDAY Date : 07-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ಸೌಂದರ್ಯಕ್ಕೆ ಬಹಳ ಬೇಗ ಮರುಳಾಗಿ ಬಿಡುತ್ತೇವೆ. ಆದರೆ ನಾವು ಬಾಳಬೇಕಾಗಿರುವುದು ವ್ಯಕ್ತಿತ್ವದ ಜೊತೆಗೆ ಎಂಬ ವಾಸ್ತವದ ಅರಿವು ನಮಗೆ ಇರುವುದಿಲ್ಲ.

ಧಾರ್ಮಿಕ ಮಾರ್ಗದರ್ಶಕ
ಸಂತೋಷ ಆಚಾರ್ಯ, ಉಡುಪಿ

## ರುದ್ರಣ್ಣ ಸಾವಿನ ಪ್ರಕರಣ: ನಿಷ್ಪಕ್ಷಪಾತವಾಗಿ ತನಿಖೆ ಆಗಲಿ- ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್



ಬೆಳಗಾವಿ : ಬೆಳಗಾವಿಯ ತಹಸೀಲ್ದಾರ್ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ ಸಾವಿನ ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಆಗಲಿ, ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರುದ್ರಣ್ಣ ಯಡವಣ್ಣವರ ಸಾವಿನ ವಿಷಯ ಅತ್ಯಂತ ದುಃಖ ತರುವಂತಹದು. ಇದೊಂದು ದುರದೃಷ್ಟಕರ ಘಟನೆ. ಇಂತಹ ಘಟನೆಗಳು ನಡೆಯಬಾರದು. ರುದ್ರಣ್ಣವರ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂದು ಅವರು ಹೇಳಿದರು.

ರುದ್ರಣ್ಣ ಸಾವಿನ ಘಟನೆ ಬಗ್ಗೆ ಮಾಧ್ಯಮಗಳಿಂದ ನಾನು ತಿಳಿದಿದ್ದೇನೆ. ಈ ಬಗ್ಗೆ ನನಗೂ ಹೆಚ್ಚೇನು ಮಾಹಿತಿ ಇಲ್ಲ. ಈ ಸಾವಿನ ಹಿಂದೆ ಲಕ್ಷ್ಮೀ ಹೆಬ್ಬಾಳಕರ್ ಪಾತ್ರವಿಲ್ಲವೆಂದು ಅವರೇ ಹೇಳಿದ್ದಾರೆ. ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಏನೂ ಗೊತ್ತಿಲ್ಲ ಎಂದಿರುವ ವಿಡೀಯೋವನ್ನು ಮಾಧ್ಯಮಗಳ ಮೂಲಕ ಗಮನಿಸಿದ್ದೇನೆ. ಈ ಬಗ್ಗೆ ಸತ್ಯಾಸತ್ಯತೆ ಜನರಿಗೆ ತಿಳಿಯಬೇಕು. ಆ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂದರು.

ರುದ್ರಣ್ಣವರ ಸಾವಿನ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ಪ್ರತಿಭಟನೆ ಮಾಡುತ್ತಿದ್ದಾರೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯವರಿಗೆ ಪ್ರತಿಭಟನೆ ಮಾಡಬೇಡಿ ಎಂದು ಹೇಳಲು ಆಗುವುದಿಲ್ಲ. ಆದರೆ ಈ ವಿಷಯವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡಬಾರದು. ಸ್ವತಹ ರುದ್ರಣ್ಣನವರೇ ಹೇಳಿದ್ದಾರೆ ಈ ಬಗ್ಗೆ ಮೇಡಂ ಅವರ ಪಾತ್ರವಿಲ್ಲವೆಂದು. ಆದರೂ ವ್ಯರ್ಥ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳಿದರು

ಈ ಹಿಂದಿನ ಈಶ್ವರಪ್ಪನವರ ಪ್ರಕರಣಕ್ಕೂ ಮತ್ತು ಈ ಪ್ರಕರಣಕ್ಕೂ ಬಹಳ ವ್ಯತ್ಯಾಸವಿದೆ. ಈ ಸಾವಿನ ಪ್ರಕರಣ ಆದಷ್ಟು ಬೇಗ ತನಿಖೆಯಾಗಲಿ. ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂದು ಪೊಲೀಸ್ ತನಿಖಾಧಿಕಾರಿಗಳಿಗೂ ಮನವಿ ಮಾಡುತ್ತೇನೆ. ಸಾವಿಗೀಡಾದ ನೌಕರನ ಕುಟುಂಬಕ್ಕೆ ನ್ಯಾಯ ದೊರಕಬೇಕು ಎಂದು ಹೇಳಿದರು.

## ಕುಡಚಿ ರೈಲು ನಿಲ್ದಾಣದಲ್ಲಿ ವಂದೇ ಭಾರತ ರೈಲು ನಿಲುಗಡೆಗೆ ಸಂಸದೆ ಪ್ರಿಯಾಂಕಾ ಮನವಿ



ಬೆಳಗಾವಿ: ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಕುಡಚಿ ರೈಲು ನಿಲ್ದಾಣದಲ್ಲಿ ವಂದೇ ಭಾರತ್ ರೈಲನ್ನು (ನಂ.20669) ನಿಲುಗಡೆ ಮಾಡಬೇಕೆಂದು ಕೇಂದ್ರ ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಮನವಿ ರವಾನಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ತಿಳಿಸಿದ ಅವರು, ಹುಬ್ಬಳ್ಳಿಯಿಂದ ಪುಣೆಗೆ ತೆರಳುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು (ನಂ.20669) ರಾಯಬಾಗ ತಾಲೂಕು ಕುಡಚಿ ರೈಲು ನಿಲ್ದಾಣದಲ್ಲಿ ನಿಲುಗಡೆ ನೀಡಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈ ತಾಲೂಕಿನಿಂದ ಪುಣೆಗೆ ತೆರಳುವವರು, ಇಲ್ಲವೇ ಅಲ್ಲಿಂದ ಬೆಳಗಾವಿ ಜಿಲ್ಲೆಗೆ ಬರುವವರಿಗೆ ಅನುಕೂಲವಾಗುತ್ತದೆ ಎಂದು ಕೇಂದ್ರ ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ತಿಳಿಸಿದ್ದಾರೆ.

ಸದ್ಯ ಹುಬ್ಬಳ್ಳಿಯಿಂದ ಪುಣೆಗೆ ತೆರಳುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಕುಡಚಿ ರೈಲು ನಿಲ್ದಾಣದಲ್ಲಿ ನಿಲುಗಡೆ ನೀಡುವಂತೆ ಜನರಿಂದ ಒತ್ತಾಯ ಕೇಳಿ ಬಂದಿದೆ.

ಅದರಲ್ಲೂ ಮುಖ್ಯವಾಗಿ ರಾಯಬಾಗ ತಾಲೂಕಿನ ಕುಡಚಿ ರೈಲು ನಿಲ್ದಾಣ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ಇಲ್ಲಿರುವ ಜನರಿಗೆ ತಮ್ಮ ದೈನಂದಿನ ಕೆಲಸಕ್ಕಾಗಿ ಬೆಳಗಾವಿ ನಗರಕ್ಕೆ ತೆರಳಲು ಕ್ಷೇತ್ರದ ಜನರಿಂದ ಭಾರಿ ಬೇಡಿಕೆಯಿದ್ದು, ಶೀಘ್ರವೇ ಕೇಂದ್ರ ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಅವರು ರಾಯಬಾಗ ತಾಲೂಕಿನ ಕುಡಚಿ ರೈಲು ನಿಲ್ದಾಣದಲ್ಲಿ ವಂದೇ ಭಾರತ ರೈಲು ನಿಲುಗಡೆಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ; ಜಿಲ್ಲಾ ಮಟ್ಟದ ಸಮನ್ವಯ/ಪ್ರಗತಿ ಪರಿಶೀಲನಾ ಸಭೆ

# ಮಹಿಳೆಯರ ಮೇಲಿನ ದೌರ್ಜನ್ಯತಡೆಗಟ್ಟಲು ಜಿಲ್ಲಾಧಿಕಾರಿ ಸೂಚನೆ

ಬೆಳಗಾವಿ : ಮಹಿಳೆಯರ ಸುರಕ್ಷತೆ-ಸಬಲೀಕರಣಕ್ಕೆ ವಿಶೇಷ ಗಮನ ನೀಡಬೇಕು. ಮಹಿಳಾ ಸುರಕ್ಷತಾ ಕ್ರಮಗಳನ್ನು ಕೈಗೊಂಡು, ಸಹಾಯವಾಣಿ, ಬಾಲ್ಯ ವಿವಾಹ, ಮತ್ತು ಪೋಕ್ಸೋ ಕಾಯ್ದೆಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿ ಸಭಾಂಗಣದಲ್ಲಿ ಬುಧವಾರ (ನ.06) ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ/ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯನಿರ್ವಹಿಸಬೇಕು. ನ್ಯಾಯಾಲಯ ಹಂತದಲ್ಲಿರುವ ಪ್ರಕರಣಗಳನ್ನು ಇತ್ಯರ್ಥಕ್ಕೆ ಕೂಡಲೇ ಕ್ರಮ ವಹಿಸಬೇಕು ಎಂದು ಹೇಳಿದರು.

ಸಖಿ ಒನ್ ಸ್ಟಾಫ್ ಸಹಾಯವಾಣಿ ಸಂಖ್ಯೆ ನಿರಂತರ ಚಾಲ್ತಿಯಲ್ಲಿರಬೇಕು. ಮಹಿಳೆಯರಮೇಲಾಗುತ್ತಿರುವ ದೌರ್ಜನ್ಯ ತಡೆಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಬೆಂಬಲ ತೆಗೆದುಕೊಳ್ಳಬೇಕು ಎಂದರು.



ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕರೆ ಮಾಡಲು ಸಖಿ ಒನ್ ಸ್ಟಾಫ್ ಸಹಾಯವಾಣಿ ಸಂಖ್ಯೆ ನಿರಂತರ ಚಾಲ್ತಿಯಲ್ಲಿರುವಂತೆ ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು. ಭದ್ರತೆ, ಉದ್ಯೋಗ, ಶೈಕ್ಷಣಿಕ ಸೌಲಭ್ಯ, ಚಿಕಿತ್ಸೆ ಕಲ್ಪಿಸುವಂತೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಿರಾಶ್ರಿತ ಕೇಂದ್ರಗಳಲ್ಲಿ ಮಹಿಳೆಯರಿಗೆ ವಸತಿ ಸೌಲಭ್ಯ ಕಲ್ಪಿಸಲು ಪೊಲೀಸ್ ಇಲಾಖೆಯಿಂದ ಉಲ್ಲೇಖ ಪತ್ರ ನೀಡಲಾಗುವುದು ಅದರ ಅನ್ವಯ ವಸತಿ ಸೌಲಭ್ಯ ನೀಡಬೇಕು. ಒಂದುವೇಳೆ ಆಶ್ರಯ ಕೇಂದ್ರಗಳಲ್ಲಿ ಯಾವುದೇ ರೀತಿಯ ತೊಂದರೆ ಎದುರದಲ್ಲಿ 112 ಪೊಲೀಸ್ ಸಹಾಯವಾಣಿಗೆ ಕರೆ ಮಾಡಬೇಕು. ಅದೇ ರೀತಿಯಲ್ಲಿ ಅಂತಹ ಸೂಕ್ಷ್ಮ ಪ್ರಕರಣಗಳು ಇದ್ದಲ್ಲಿ, ಪೊಲೀಸ್ ಭದ್ರತೆ ಕೂಡ ಒದಗಿಸಲಾಗುವುದು ಎಂದು ಹೇಳಿದರು.

**ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಭೆ ಕಡ್ಡಾಯ:** ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ ತಾಲೂಕುಗಳಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳಾ ದೌರ್ಜನ್ಯ ನಿಯಂತ್ರಣ ಸಮಿತಿಯ ಸಭೆಗಳಾಗುತ್ತಿವೆ. ಆದರೆ ಸವದತ್ತಿ, ಹುಕ್ಕೇರಿ, ಖಾನಾಪೂರ ತಾಲೂಕಿನಲ್ಲಿ ನಿಯಮಾನುಸಾರ ಸಭೆಗಳು ಆಗಬೇಕಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ದೌರ್ಜನ್ಯ ನಿಯಂತ್ರಣ ಸಮಿತಿ ಸಭೆಗಳನ್ನು ಕಡ್ಡಾಯವಾಗಿ ಆಯೋಜನೆ ಮಾಡಬೇಕು ಎಂದು ತಿಳಿಸಿದರು.

ಅಗತ್ಯವಿರುವ ಪ್ರದೇಶಗಳ ಶಾಲಾ ಕಾಲೇಜುಗಳಲ್ಲಿ ಜಾಗೃತಿ, ಅರಿವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಬೇಕು.

ವಿದ್ಯಾರ್ಥಿನಿಯ ವಸತಿ ನಿಲಯಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ ಕಡ್ಡಾಯವಾಗಿದೆ. ಕುಡಿಯುವ ನೀರು, ಶೌಚಾಲಯ ಸ್ವಚ್ಚತೆ, ಕಿಟ್ ವಿತರಣೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಸಖಿ ಒನ್ ಸ್ಟಾಫ್ ಸೆಂಟರ್ ಮೂಲಕ ಕಾನೂನು ಸಲಹೆ, ಆಪ್ತ ಸಮಾಲೋಚಕರಿಂದ ಸಮಾಲೋಚನೆ, ಸಖಿ ಕೇಂದ್ರದ ಕುರಿತು ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳಾಗುತ್ತಿವೆ ಎಂದು ಅಧಿಕಾರಿಗಳು ವಿವರಿಸಿದರು.

ಎನ್.ಜಿ. ಓ ಸಂಸ್ಥೆಗಳಲ್ಲಿ ಪೋಲಿಸ್ ಪ್ರಕರಣಗಳ ಮೂಲಕ ತಾತ್ಕಾಲಿಕವಾಗಿ ಉಳಿದುಕೊಳ್ಳಲು ನಿರಾಶ್ರಿತ ಮಹಿಳೆಯರನ್ನು ಆಧಾರ್ ಕಾರ್ಡ್ ಮಾಹಿತಿ ಪಡೆದು ಪ್ರವೇಶ ನೀಡಲಾಗುವುದು.

ಇಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸೌಲಭ್ಯ ಅಗತ್ಯವಿದೆ ಎಂದು ಎನ್.ಜಿ.ಓ ಸಂಸ್ಥೆಯ ನಿರ್ವಾಹಕರು ಹೇಳಿದರು.

ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ ಬಸರಗಿ, ಪ್ರೊಬೇಷನರಿ ಐಎಎಸ್ ದಿನೇಶ್ ಕುಮಾರ ಮೀನಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಆರ್. ನಾಗರಾಜ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾ ನಿರ್ದೇಶಕ ಗಂಗಾಧರ ದಿವಿಟರ, ಎಸಿಪಿ ಸದಾಶಿವ ಕಟ್ಟಿಮನಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಅಧಿಕಾರಿ ಅಬ್ದುಲ್ ರಶೀದ್ ಮಿರಜನ್ನವರ್, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಎನ್.ಜಿ.ಓ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಇಂದು ದಿಲ್ಲಿಯಲ್ಲಿ ಕೇಂದ್ರದ ವಿರುದ್ಧ ಪ್ರತಿಭಟನಾ ಸಭೆ

ಬೆಂಗಳೂರು: ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ಸಿಎಂ ಸಿದ್ದರಾಮಯ್ಯ ವಿಚಾರಣೆ ಮಾಡಲಾಗಿದೆ. ತಾಳ್ಮೆಯಿಂದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದಾರೆ ಎನ್ನಲಾಗುತ್ತಿದೆ. ಈ ಮಧ್ಯೆ ಸಿದ್ದರಾಮಯ್ಯ ವಿರುದ್ಧ ಇಡಿ ಮತ್ತು ಸಿಬಿಐ ದುರ್ಬಳಕೆ ಆರೋಪ ಹಿನ್ನೆಲೆ ದೆಹಲಿಯಲ್ಲಿ ಕೇಂದ್ರದ ವಿರುದ್ಧ ಪ್ರತಿಭಟನಾ ಸಭೆ ನಡೆಯಲಿದೆ.

ದೆಹಲಿಯ ಕರ್ನಾಟಕ ಸಂಘದಲ್ಲಿ ಹಿಂದುಳಿದ ವರ್ಗಗಳ ವೇದಿಕೆಯಿಂದ ಪ್ರತಿಭಟನಾ ಸಭೆ ನಡೆಯಲಿದ್ದು, ಎಲ್. ಹನುಮಂತಯ್ಯ, ಎಸ್. ಜಿ ಸಿದ್ದರಾಮಯ್ಯ, ಕಾಳೆಗೌಡ ನಾಗವಾರ ಸೇರಿದಂತೆ ಹಲವು ಗಣ್ಯರು ಭಾಗಿಯಾಗಲಿದ್ದಾರೆ. ಮುಡಾ ಹಗರಣ ಸಂಬಂಧ ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲ ಥಾವರ್ ಚಂದ್



ಗೆಹ್ಲೋಟ್ ನಡೆ ಸಂವಿಧಾನಬಾಹಿರ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದ್ದರು. ಅನೇಕ ರಾಜ್ಯಗಳಲ್ಲಿ ಇದೇ ರೀತಿ ಮಾಡಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಎಲ್ಲ ಸೇರಿಕೊಂಡಿದ್ದಾರೆ. ನಾನು ಕಾನೂನು ಹೋರಾಟ ಮಾಡುತ್ತೇವೆ ಎಂದಿದ್ದರು. ಸಿಎಂ ಸಿದ್ದರಾಮಯ್ಯ ಅವರ ಪತ್ನಿಯ ಹೆಸರು ಕೇಳಿಬಂದಿದ್ದು ವಿಪಕ್ಷ ಬಿಜೆಪಿಗೆ ಅಸ್ತ್ರವಾಗಿತ್ತು. ಬಿಜೆಪಿ ನಾಯಕರು ಬೀದಿಗಿಳಿದು ಪ್ರತಿಭಟನೆ ಕೂಡ ಮಾಡಿದ್ದರು. ಇದೇ ವೇಳೆ ಇಡಿ ಮತ್ತು ಸಿಬಿಐಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪ ಕೂಡ ಕೇಳಿಬಂದಿತ್ತು. ಹೀಗಾಗಿ ಇದೀಗ ನಾಳೆ ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಾ ಸಭೆ ನಡೆಯಲಿದೆ. ಇನ್ನು ಮೈಸೂರು ಇಂದು ದೊಡ್ಡ ಹಂಗಾಮಕ್ಕೆ ಸಾಕ್ಷಿಯಾಗಿತ್ತು. ಕೇಸರಿ ಪಡೆ ಬೀದಿಗಿಳಿದಿತ್ತು. ಒಂದ್ಕಡೆ ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಸಿಎಂ ವಿಚಾರಣೆ ನಡೀತಿದ್ದರೆ, ಇದೇ ಹೊತ್ತಿನಲ್ಲೇ ಬಿಜೆಪಿ ನಾಯಕರು ರಸ್ತೆಗಿಳಿದಿದ್ದರು. ಪ್ರತಿಭಟನಾಕಾರರನ್ನ ನಿಯಂತ್ರಿಸುವುದಕ್ಕೆ ಪೊಲೀಸರು ಹರಸಾಹಸವೇ ಪಟ್ಟಿದ್ದಾರೆ. ದೊಡ್ಡ ಹೈಡ್ರಾಮಾವೇ ನಡೆದಿದೆ. ಲೋಕಾಯುಕ್ತ ವಿಚಾರಣೆ ನನಗೆ ಕಪ್ಪು ಮಸಿ ಅಲ್ಲ ಅಂತಾ ಬಿಜೆಪಿ ನಾಯಕರ ಆರೋಪಕ್ಕೆ ಸಿಎಂ ಕಿಡಿಕಾರಿದ್ದಾರೆ.


## ಬಣಗಾರ ಗಲ್ಲಿ ಶಂಕರಲಿಂಗ ದೇವಸ್ಥಾನದ ಜಾತ್ರಾ ಮಹೋತ್ಸವ

ಗೋಕಾಕ : ಬಣಗಾರ ಗಲ್ಲಿಯ ಶಂಕಲಿಂಗ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ರಾಜ್ಯೋತ್ಸವದ ಕಾರ್ಯಕ್ರಮದ ಸಮಾರಂಭವು ಸೋಮವಾರ ನ 11ರಿಂದ ನ15 ರ ಶುಕ್ರವಾರದ ವರಗೆ ವಿಜ್ರಂಭಣೆಯಿಂದ ಜರುಗಲಿದೆ ಎಂದು ಬಣಗಾರ ಸಮಾಜದ ಅಧ್ಯಕ್ಷ ಬಾಲಚಂದ್ರ ಕುಬಸದ ತಿಳಿಸಿದ್ದಾರೆ,

ನೆ 11ರಂದು ಮುಂಜಾನೆ 6 ಗಂಟಗೆ ದೇವಸ್ಥಾನದಲ್ಲಿ ಶಂಕರಲಿಂಗ ದೇವರಿಗೆ ರುದ್ರಾಭಿಷೇಕ ಜರುಗುವದು ಮುಂಜಾನೆ 9 ಗಂಟೆಗೆ ಗೌರಿದೇವಿಯ ಪ್ರತಿಷ್ಠಾಪನೆ ಮತ್ತು 69ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 15ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರದ ಉದ್ಘಾಟನಾ ಸಮಾರಂಭ ಜರುಗುವದು

ಸಮಾರಂಭದ ಪಾವನ ಸಾನಿದ್ಯ ದೇವಸ್ಥಾನದ ಪ್ರಧಾನ ಅರ್ಚಕ ಪಪೂ ವೇದಮೋರ್ತಿ ಶ್ರೀ ಸಾತಯ್ಯಾ ಮಹಾಸ್ವಾಮಿಜಿಗಳು ವಹಿಸುವರು ಶ್ಯೂನ ಸಂಪಾದನಾಮಠದ ಪೀಠಾಧಿಪತಿ ಪಪೂ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಜಿಗಳು ಉದ್ಘಾಟಿಸುವರು,ಸಮಾರಂಭ ಅದ್ಯಕ್ಷತೆಯನ್ನು ಬಣಗಾರ ಸಮಾಜದ ಅಧ್ಯಕ್ಷ ಬಾಲಚಂದ್ರ ಕುಬಸದ ವಹಿಸುವರು ಹಲವು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಶಂಕರಲಿಂಗ ಸಂಸ್ಥೆಯ ಅಧ್ಯಕ್ಷ ಡಾ,ರಾಜಶೇಖರ ಗುಣಕಿ ತಿಳಿಸಿದ್ದಾರೆ,

ಸಂಜೆ 6ಗಂಟೆಗೆ ಡಾ ಶಂಕರ ಎಸ್ ತೇರದಾಳ ಅವರ ಅಧ್ಯಕ್ಷತೆಯಲ್ಲಿ ಜಾಗೃತಿಮಹಿಳಾ ಸದಸ್ಯರಿಂದ ಜನಪದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ ಡಾ ಶಶಿಕಲಾ ಕಾಮೋಜಿ,ಡಾ ಆಶಾಲತಾ ತೇರದಾಳ,ಶೈಲಾ ಮೊರ್ತೆಲಿ,ಶಶಿಕಲಾ ಕೌತನಾಳಿ ಸಮಾರಂಭದಲ್ಲಿ ಭಾಗವಹಿಸುವರು, ನೆ 12ರಂದು ಮಂಗಳವಾರ ಆದರ್ಶ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಮತ್ತು ಪ್ರೌಡಶಾಲಾ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ರಾಮಚಂದ್ರ ಕಾಕಡೆ ನಿರ್ದೆಶನದಲ್ಲಿ ಜರುಗುತ್ತವೆ ಬಸವರಾಜ ಹಿಂಡಿಹೊಳಿ ಅಧ್ಯಕ್ಷತೆ ವಹಿಸುವರು, ನೆ 13 ಬುಧವಾರ ರಂದು ಶತಮಾನ ಸಂತ ನಡೆದಾಡುವ ದೇವರು ಪೂಜ್ಯ ಸಿದ್ದೇಶ್ವರ ಸ್ವಾಮಿಜಿಗಳ ಬದುಕು ಮತ್ತು ತತ್ವಾದರ್ಶಗಳು ಕುರಿತು ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮ ಹಿರಿಯ ಸಾಹಿತಿ ಚಂದ್ರಶೇಖರ ಅಕ್ಕಿ ಅಧ್ಯಕ್ಷತೆಯಲ್ಲಿ ಸೋಮಶೇಖರ ಮಗದುಮ್, ರಮೇಶ ಮಿರ್ಜಿ,ಬಸವರಾಜ ಮುರಗೋಡ ಭಾಗವಹಿಸುವರು, ನೇ 14 ಗುರುವಾರರಂದು ಜಾಗೃತಿ ಮಹಿಳಾ ಸಮಾಜ ಇವರ




ಸಂಯೋಜನೆಯಲ್ಲಿ ಬಿ ಎನ್ ಮಟ್ಟಿಕಲ್ಲಿ ಕಲ್ಯಾಣ ಮಂಟಪ್ಪದಲ್ಲಿ ಮಹಿಳೆಯರಿಗಾಗಿ ಮೋಜಿನ ಆಟಗಳು ವಸ್ತು ಪ್ರದರ್ಶನ ಮತ್ತು ಆಹಾರ ಮೇಳ.ರಾತ್ರಿ 9.30ಕ್ಕೆ ಜಾನಪದ ಕಾರ್ಯಕ್ರಮಗಳು

ನೇ 15ರಂದು ಶುಕ್ರವಾರ ಮುಂಜಾನೆ 8ಗಂಟೆಗೆ ಶಂಕರಲಿಂಗ ದೇವರ ಗೌರಿದೇವಿಯ ಅಲಂಕಾರ,ಮದ್ಯಾನ್ಹ ಶಂಕರಲಿಂಗ ದೇವರ ರಥದ ಕಳಸವನ್ನು ರಥದಲ್ಲಿ ಪ್ರತಿಷ್ಠಾಪನೆ,ಸಂಜೆ 6.30ಕ್ಕೆ ಅರಭಾಂವಿಯ ದುರದುಂಡೇಶ್ವರ ಮಠದ ಪಪೂ ಶ್ರೀ ಗುರುಬಸವಲಿಂಗ ಮಹಾಸ್ವಾಮಿಜಿಗಳು ಸಾನಿದ್ಯದಲ್ಲಿ ಮುಖಂಡ ಅಶೋಕ ಪೂಜೇರಿ ಅಧ್ಯಕ್ಷತೆಯಲ್ಲಿ ಮುಖ್ಯ ಅಥಿತಿ ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಸಮುಖದಲ್ಲಿ ಮೂಡಲಗಿ ಬಣಗಾರ ಸಮಾಜದವರಿಗೆ ಹಾಗೂ ವಿವಿಧ ಗಣ್ಯರಿಗೆ ಸನ್ಮಾನ ಸಮಾರಂಭ ಜರುಗುವದು.

7.45 ಗಂಟೆಗೆ ಶಂಕರಲಿಂಗ ದೇವರ ಭವ್ಯ ರಥೋತ್ಸವ ಜರುಗುವದು,ರಾತ್ರಿ 9ಗಂಟೆಗೆ ದೀಪೋತ್ಸವ ಮಂಗಲೋತ್ಸವ ಹಾಗೂ ಪ್ರಸಾದ ವಿತರಣೆ 10.30ಕ್ಕೆ ಕಾಸಿನಾಥ ಸವಸುದ್ದಿ ನೇತೃತ್ವದಲ್ಲಿ ಮೆಲೋಡಿಸಿ ರಸ ಮಂಜರಿ ಕಾರ್ಯಕ್ರಮ ಜರುಗುವದು, ಎಲ್ಲ ಕಾರ್ಯಕ್ರಮಗಳಲ್ಲಿ ಶಂಕರಲಿಂಗ ಸಂಸ್ಥೆ,ಪಾರನಟ್ಟಿಮಠ ಟ್ರಸ್ಟ,ಬಣಗಾರ ಸಮಾಜ ಗೋಕಾಕ ಹಾಗೂ ಎಲ್ಲ ಅಂಗ ಸಂಸ್ಥೆಗಳ ಆಡಳಿತ ಮಂಡಳಿ ಪಧಾಧಿಕಾರಿಗಳು ಸಮಾಜದ ಹಿರಿಯರು,ಗಣ್ಯ ವ್ಯಕ್ತಿಗಳು ಪಾಳ್ಗೋಳುವರು ಎಂದು ಸಂಘಟಕರು ತೀಳಿಸಿದ್ದಾರೆ

## ಲೋಕಾಯುಕ್ತ ವಿಚಾರಣೆ: ಸುಳ್ಳು ಆರೋಪಕ್ಕೆ ಸತ್ಯವನ್ನು ತಿಳಿಸಿದ್ದೇನೆ : ಮುಖ್ಯಮಂತ್ರಿ

ಮೈಸೂರು : ಮುಡಾಕ್ಕೆ ಸಂಬಂಧಿಸಿದಂತೆ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸ ಲಾಗಿದ್ದು, ಲೋಕಾಯುಕ್ತ ವಿಚಾರಣೆಯಲ್ಲಿ ಸತ್ಯವನ್ನು ತಿಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಚಾರಣೆ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಲೋಕಾಯುಕ್ತ ವಿಚಾರಣೆಗೆ ಇಂದು ಹಾಜರಾಗಿದ್ದು, ಅವರ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಿದ್ದೇನೆ ಎಂದರು.

ಬಿಜೆಪಿಯವರು ಗೋಬ್ಯಾಕ್ ಸಿಎಂ ಎಂಬ ಪ್ರತಿಭಟನೆ ನಡೆಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಸ್ನೇಹಮಯಿ ಕೃಷ್ಣ ಅವರು ಕೋರಿದಂತೆ, ರಾಜ್ಯಪಾಲರು ಆದೇಶದಂತೆ ಲೋಕಾಯುಕ್ತ ವಿಚಾರಣೆಯನ್ನು ನಡೆಸಲಾಗಿದೆ. ಬಿಜೆಪಿಯವರು ವಿಚಾರಣೆಯ ವಿರುದ್ಧವಾಗಿದ್ದಾರೆ ಎಂಬ ಅರ್ಥವಲ್ಲವೇ ಇದರಿಂದ ಈ ಆರೋಪ ಸುಳ್ಳು ಎಂದು ಸ್ಪಷ್ಟವಾಗುತ್ತದೆ ಎಂದರು. ವಿಚಾರಣೆ ನಡೆಸುವ ಲೋಕಾಯುಕ್ತದ ಮೇಲೆ ನಂಬಿಕೆಯಿಲ್ಲ, ತನಿಖೆಯನ್ನು ಸಿಬಿಐನವರು ನಡೆಸಬೇಕೆಂಬ



ಬಿಜೆಪಿಯವರ ಬೇಡಿಕೆಯ ಬಗ್ಗೆ ಪ್ರತಿಕ್ರಿಯೆ ನೀಡಿ, ಕೇಂದ್ರ ಸರಕಾರದಲ್ಲಿ ಸಿಬಿಐ ಇದೆ. ಬಿಜೆಪಿಯವರು ಇದುವರೆಗೆ ಯಾವುದಾದರೂ ಹಗರಣವನ್ನು ಸಿಬಿಐ ಗೆ ವಹಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

**ಬಿಜೆಪಿಯವರಿಗೆ ಕಾನೂನಿನ ಬಗ್ಗೆ ಗೌರವವಿಲ್ಲ :** ಲೋಕಾಯುಕ್ತ ಒಂದು ಸ್ವತಂತ್ರ ತನಿಖಾ ಸಂಸ್ಥೆ. ಲೋಕಾಯುಕ್ತದ ನಂಬಿಕೆಯಿಲ್ಲದ ಬಿಜೆಪಿಯವರಿಗೆ ಕಾನೂನಿನ ಬಗ್ಗೆ ಗೌರವವಿಲ್ಲ. ಬಿಜೆಪಿಯವರು ಯಾವುದೇ ಪ್ರಕರಣವನ್ನು ಇದುವರೆಗೆ ಸಿಬಿಐ ಗೆ ನೀಡಿಲ್ಲ. ರಾಜ್ಯಪಾಲರು ಕೂಡ ಲೋಕಾಯುಕ್ತದಲ್ಲಿಯೇ ತನಿಖೆಯಾಗಬೇಕೆಂದು ಸೂಚಿಸಿದ್ದು, ಅದರಂತೆ ವಿಚಾರಣೆ ನಡೆಯುತ್ತಿದೆ ಎಂದರು.

**ಸುಳ್ಳು ಆರೋಪಗಳಿಗೆ ನ್ಯಾಯಾಲಯದಲ್ಲಿ ತಕ್ಕ ಉತ್ತರ :** ನಿವೇಶನ ಹಂಚಿಕೆ ಕಾನೂನೂ ಬದ್ಧವಾಗಿಯೇ ಆಗಿದೆ. ಬಿಜೆಪಿ ಜೆಡಿಎಸ್ ನವರು ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಈ ಸಂಬಂಧ ಲೋಕಾಯುಕ್ತ ವಿಚಾರಣೆಯಲ್ಲಿ ಇಂದು ಉತ್ತರವನ್ನು ನೀಡಿದ್ದು, ತನಿಖೆಯನ್ನು ಕಾನೂನುರೀತ್ಯ ಮುಂದುವರೆಸಲಿದ್ದಾರೆ. ನನ್ನ ಮೇಲೆ ಬಂದ ಸುಳ್ಳು ಆರೋಪಗಳ ಮಾಡಲಾಗಿದ್ದರಿಂದ ನನ್ನ ಪತ್ನಿ ನಿವೇಶನಗಳನ್ನು ವಾಪಸ್ಸು ನೀಡಿದರೇ ಹೊರತು, ತಪ್ಪು ಮಾಡಿದ್ದಕ್ಕಾಗಿ ನಿವೇಶನಗಳನ್ನು ವಾಪಸ್ಸು ನೀಡಲಾಗಿಲ್ಲ. ಈ ಮುಡಾ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ನನ್ನ ಬಳಿಯಿಲ್ಲ ಹಾಗೂ ನನ್ನಿಂದ ಯಾವುದೇ ದಾಖಲೆ ಕೇಳಲಾಗಿಲ್ಲ. ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೆ ನನ್ನ ರಾಜಕೀಯ ಜೀವನಕ್ಕೆ ಯಾವುದೇ ಕಪ್ಪು ಮಸಿ ಇಲ್ಲ. ನನ್ನ ಮೇಲೆ ಮಾಡಲಾಗಿರುವ ಸುಳ್ಳು ಆರೋಪಗಳಿಗೆ ನ್ಯಾಯಾಲಯದಲ್ಲಿ ತಕ್ಕ ಉತ್ತರವನ್ನು ನೀಡಲಿದ್ದೇವೆ ಎಂದರು.

## 2026ರ ವೇಳೆಗೆ 175 ಕಿ.ಮೀ ನೂತನ ಮೆಟ್ರೋ ಮಾರ್ಗ ಸಾರ್ವಜನಿಕರ ಸೇವೆಗೆ: ಡಿ.ಕೆ.ಶಿವಕುಮಾರ್

ಬೆಂಗಳೂರು: 2025ರ ವೇಳೆಗೆ ಸುಮಾರು 30 ಕಿ.ಮೀ ಹಾಗೂ 2026ರ ವೇಳೆಗೆ 175 ಕಿ.ಮೀ ನೂತನ ಮೆಟ್ರೋ ಮಾರ್ಗ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಮೆಟ್ರೋ ಹಸಿರು ಮಾರ್ಗದಲ್ಲಿಂದು ನಾಗಸಂದ್ರದಿಂದ ತುಮಕೂರು ರಸ್ತೆಯ ಮಾದಾವರದ ತನಕ ವಿಸ್ತರಣೆ ಆಗಿರುವ ನೂತನ ಮಾರ್ಗದಲ್ಲಿ ಪ್ರಾಯೋಗಿಕ ಮೆಟ್ರೋ ರೈಲು ಸಂಚಾರವನ್ನು ಪರಿಶೀಲನೆ ಮಾಡಿ ಅವರು ಮಾತನಾಡಿದರು.

ಈಗಾಗಲೇ 1,130 ಕೋಟಿ ವೆಚ್ಚದಲ್ಲಿ 21 ಹೊಸ ರೈಲುಗಳಿಗೆ ಹರಾಜು ಪ್ರಕ್ರಿಯೆ ನಡೆಸಿ ಹಣ ಕಟ್ಟಲಾಗಿದೆ. ಇದರಿಂದ ಹೊಸ ರೈಲುಗಳು ಆದಷ್ಟು ಬೇಗ ಸೇವೆಗೆ ಲಭ್ಯವಾಗಲಿವೆ. ಮೆಟ್ರೋ ಮಾರ್ಗದ ಒಂದು ಹಾಗೂ ಎರಡನೇ ಹಂತಗಳನ್ನು ಪೂರ್ಣಗೊಳಿಸಿದ್ದು, ಮೂರನೇ ಹಂತಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದರು.

ಮಂಜುನಾಥ ನಗರ ನಿಲ್ದಾಣದಲ್ಲಿ ರಸ್ತೆ ದಾಟಲು ಪಾದಚಾರಿ ಮೇಲ್ಸೇತುವೆ ಅನುಕೂಲ



ಮಾಡಿಕೊಡಲಾಗುತ್ತಿದೆ. ಯಶವಂತಪುರ ನಿಲ್ದಾಣದಲ್ಲಿ ಸಾರ್ವಜನಿಕರು ಯಾವುದೇ ಅಡಚಣೆಯಿಲ್ಲದೇ ಸಂಚರಿಸಲು ಭಾರತೀಯ ರೈಲ್ವೆ ಹಾಗೂ ನಮ್ಮ ಮೆಟ್ರೋ ಸಂಸ್ಥೆ ಪಾದಚಾರಿ ಮೇಲ್ಸೇತುವೆ ಸೇರಿದಂತೆ ಇತರ ಅನುಕೂಲಗಳನ್ನು ಮಾಡಲು ಜಂಟಿಯಾಗಿ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿಸಿದರು.

ಚಿಕ್ಕಬಿದರಕಲ್ಲು ನಿಲ್ದಾಣದ ಬಳಿ ರಾಷ್ಟ್ರೀಯ ಹೆದ್ದಾರಿ ಸಂಸ್ಥೆಯೊಟ್ಟಿಗೆ ಸೇರಿ ಅಂಡರ್ ಪಾಸ್ ನಿರ್ಮಾಣ ಮಾಡುವ ಯೋಜನೆ ರೂಪಿಸಲಾಗಿದೆ. ಮಾದಾವರ ಮೆಟ್ರೋ ನಿಲ್ದಾಣದ ಬಳಿಯೂ ಅಂಡರ್ ಪಾಸ್ ನಿರ್ಮಾಣಕ್ಕಾಗಿ ಎನ್.ಎಚ್ ಸಂಸ್ಥೆಯವರ ಬಳಿ ಮಾತುಕತೆ ನಡೆಸಲಾಗುತ್ತಿದೆ ಎಂದರು.

ವಿಸ್ತರಣೆಯಾದ ಮಾರ್ಗದಿಂದ ತುಮಕೂರು ಮಾರ್ಗವಾಗಿ ಬೆಂಗಳೂರಿಗೆ ಬರುವವರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಮೈದಾನದಲ್ಲಿ ವಾಹನ ನಿಲುಗಡೆ ಮಾಡಿ ಸಂಚಾರ ದಟ್ಟಣೆ ರಹಿತವಾಗಿ ನಗರ ಪ್ರದಕ್ಷಿಣೆ ಮಾಡಬಹುದು ಹಾಗೂ ಅವರ ಕೆಲಸಗಳನ್ನು ತ್ವರಿತವಾಗಿ ಮುಗಿಸಿಕೊಳ್ಳಬಹುದು ಎಂದು ಹೇಳಿದರು.

ನಾಗಸಂದ್ರದಿಂದ ಮೂರು ಕಿ.ಮೀ ದೂರವಿರುವ ಮಾದಾವರದ ಬೆಂಗಳೂರು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ ವರೆಗೆ ವಿಸ್ತರಿತ ನೂತನ ಮಾರ್ಗವನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಾಯೋಗಿಕವಾಗಿ ಉದ್ಘಾಟನೆ ಮಾಡಲಾಗಿದೆ. ಈ ಹಿಂದೆ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಈ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ ಯೋಜನೆಗೆ ಒಪ್ಪಿಗೆ ನೀಡಿದ್ದೆ. ಮುಂದಿನ ದಿನಗಳಲ್ಲಿ ಎಲ್ಲ ಸಂಸದರು ಹಾಗೂ ಇತರ ಜನಪ್ರತಿನಿಧಿಗಳನ್ನು ಆಹ್ವಾನಿಸಿ ವಿಸ್ತರಿತ ಮೆಟ್ರೋ ಮಾರ್ಗವನ್ನು ಅಧಿಕೃತವಾಗಿ ಉದ್ಘಾಟನೆ ಮಾಡಲಾಗುವುದು ಎಂದರು.

ಪ್ರಸ್ತುತ ಮೆಟ್ರೋ ಹಸಿರು ಮಾರ್ಗವು 33.46 ಕಿ.ಮೀ ಉದ್ದವಿದೆ. ನೇರಳೆ ಮಾರ್ಗ 40.5 ಕಿ.ಮೀ ಉದ್ದವಿದೆ. ಈ ಮಹತ್ತರವಾದ ಕಾರ್ಯ ಸಾಕಾರಗೊಳ್ಳಲು ಸಹಕಾರ ನೀಡಿದ ಕೇಂದ್ರ ಸರ್ಕಾರಕ್ಕೆ ಹಾಗೂ ಕೈ ಜೋಡಿಸಿದ ಎಲ್ಲರಿಗೂ ಹಾಗೂ ವಿಶೇಷವಾಗಿ ಬೆಂಗಳೂರಿನ ಜನತೆಗೆ ಅಭಿನಂದನೆ ತಿಳಿಸಿದರು.

ದೇಶದಲ್ಲಿಯೇ ಹೆಚ್ಚು ಪ್ರಯಾಣಿಕರ ಸಂಚಾರ: ದೆಹಲಿ, ಮುಂಬೈ ಸೇರಿದಂತೆ ದೇಶದ ಇತರಡೆಗಳಲ್ಲಿ ಇರುವ ಮೆಟ್ರೋಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗಿಂತ ಬೆಂಗಳೂರಿನಲ್ಲಿರುವ 76.95 ಕಿ.ಮೀ ಉದ್ದದ ಮೆಟ್ರೋ ಮಾರ್ಗದಲ್ಲಿ ನಿತ್ಯ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿದ್ದಾರೆ. ನಮ್ಮ ಮೆಟ್ರೋದಿಂದ ಬೆಂಗಳೂರಿನ ನಾಗರಿಕರಿಗೆ ಉತ್ತಮ ಸೇವೆ ದೊರೆಯುತ್ತಿದೆ ಎಂಬುದಕ್ಕೆ ಇದು ಸಾಕ್ಷಿ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ಈ ವೇಳೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ನೆಲಮಂಗಲ ಶಾಸಕ ಶ್ರೀನಿವಾಸಯ್ಯ, ದಾಸರಹಳ್ಳಿ ಶಾಸಕ ಮುನಿರಾಜು ಉಪಸ್ಥಿತರಿದ್ದರು.

# ವಕ್ಫ್ ಆಸ್ತಿ ಖಂಡಿಸಿ ಬಿಜೆಪಿ ಕಿಸಾನ್ ಮೋರ್ಚಾ ಪ್ರತಿಭಟನೆ

**ರಬಕವಿ-ಬನಹಟ್ಟಿ:** ರಾಜ್ಯ ಆಡಳಿತದಲ್ಲಿರುವ ಕಾಂಗ್ರೆಸ್ ವಕ್ಫ್ ಮಂಡಳಿಯ ಮೂಲಕ ಜನರನ್ನು ಆತಂಕದ ಸ್ಥಿತಿಗೆ ತಳ್ಳುವದಕ್ಕೆ ಮುಂದಾಗಿದ್ದು, ಜೊತೆಗೆ ಸರ್ಕಾರಿ ಅಧೀನದಲ್ಲಿರುವ ಆಸ್ತಿಯನ್ನು ತನ್ನದೆಂದು ವಕ್ಫ್ ಬೋರ್ಡ್ ಹೇಳುತ್ತಿರುವದನ್ನು ವಿರೋಧಿಸಿ ಬನಹಟ್ಟಿ ನಗರದಲ್ಲಿ ಬಿಜೆಪಿ ಹಾಗು ಕಿಸಾನ್ ಮೋರ್ಚಾ ವತಿಯಿಂದ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ಗ್ರೇಡ್-2 ತಹಶೀಲ್ದಾರಿಗೆ ಮನವಿ ಸಲ್ಲಿಸಿದರು.

ಈ ವೇಳೆ ವಿದ್ಯಾಧರ ಸವದಿ ಮಾತನಾಡಿ, ಒಂದು ಸಮುದಾಯದ ಓಲೈಕೆಯ ದುರ್ವರ್ತನೆಯಿಂದ ಸರ್ವ ಜನಾಂಗಕ್ಕೆ ಅಪಮಾನ ಮಾಡಿದ ನೀಚ ಸರ್ಕಾರಕ್ಕೆ ಧಿಕ್ಕಾರ. ವಕ್ಫ್ ಕಾನೂನು ರದ್ದುಪಡಿಸುವವರೆಗೂ ಹೋರಾಟ ನಿಲ್ಲುವದಿಲ್ಲವೆಂದು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಪಕ್ಷವು ದುಷ್ಟ ಕಾರ್ಯಗಳಿಂದ ದೂರವಿದ್ದು, ಅಮಾಯಕ ರೈತರ ಮೇಲೆ ನಡೆಯುತ್ತಿರುವ ಗದಾಪ್ರಹಾರವನ್ನು ರೈತರು ರೊಚ್ಚಿಗೇಳುವ ಮೊದಲೇ ನಿಲ್ಲಿಸಬೇಕೆಂದರು.

ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಮಾತನಾಡಿ, ಅಧಿಕಾರಿಗಳನ್ನು ಕೈಗೊಂಬೆಯನ್ನಾಗಿಸಿಕೊಂಡು ಜನಸಾಮಾನ್ಯರ ವಿರೋಧಿ ನೀತಿಗಳನ್ನು ತರುವಲ್ಲಿ ಸಿಎಂ ಸಿದ್ರಾಮಯ್ಯ ಹಾಗು ಸಚಿವ ಜಮೀರ್ ಅಹ್ಮದ್ ಮುಂದಾಗಿದ್ದಾರೆ. ಸರ್ಕಾರದ ಅವನತಿಗೆ ನಾಂದಿ ಹಾಡುವಲ್ಲಿ ಕಾರಣವಾಗಿದ್ದು, ಇದರ ಮುಂದಿನ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.



ಜೈಲ್ ಭರೋ ಚಳುವಳಿ: 2019 ರ ಪೂರ್ವದಲ್ಲಿಯೇ ತೇರದಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿ 900 ಕ್ಕೂ ಅಧಿಕ ಎಕರೆಯಷ್ಟು ವಕ್ಫ್ ಆಸ್ತಿಯನ್ನಾಗಿಸಿದೆ. ಇದೀಗ 1300 ಎಕರೆ ಹೇಗೆ ನಮೂದಾಗಿದೆ ಎಂಬುದು ಯಾರಿಗೂ ಅರಿವಿಲ್ಲ. ಮರಳಿ ಆಯಾ ರೈತರ ಜಮೀನಿನ ಹಕ್ಕು ನೀಡಬೇಕು ಇಲ್ಲವಾದಲ್ಲಿ ಸಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕುವ ಮೂಲಕ ಜೈಲ್ ಭರೋ ಚಳುವಳಿ ನಡೆಸಲಾಗುವದೆಂದು ಬಿಜೆಪಿ ಮುಖಂಡ ನಂದು ಗಾಯಕವಾಡ ಹೇಳಿದರು.

**ಕೆಲ ಕಾಲ ಉದ್ವಿಗ್ನ:** ಪ್ರತಿಭಟನಾ ರ್‍ಯಾಲಿ ನಂತರ ಗ್ರೇಡ್-2 ತಹಶೀಲ್ದಾರ ಸತೀಶಕುಮಾರ ಜಿ. ಅವರಿಗೆ ಮನವಿ ಪತ್ರ ನೀಡುವ ಸಂದರ್ಭ ತಾಪಂ ಸದಸ್ಯ ಗುರು ಮರಡಿಮಠ ಆಕ್ರೋಶಭರಿತ ಮಾತುಗಳನ್ನಾಡಿ ಸರ್ಕಾರದ ಗುಲಾಮಗಿರಿಯಾಗಿ ಯಾಕೆ ಕಾರ್ಯ ನಡೆಸುತ್ತಿದ್ದೀರಿ? ನಿಮಗೆ ರೈತರ ಮೇಲೆ ಅನುಕಂಪವಿಲ್ಲವೇ ಎಂದು ಮಾತನಾಡುತ್ತಿದ್ದಂತೆ ಕೆಲ ಕಾಲ ಉದ್ವಿಗ್ನ ವಾತಾವರಣ ಸೃಷ್ಟಿಯಾಯಿತು.

ನಗರದ ಈಶ್ವರಲಿಂಗ ಮೈದಾನದಿಂದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ರ್‍ಯಾಲಿ ನಡೆದು ಎಂ.ಎಂ.ಬಂಗ್ಲೆ ಎದುರು ಮಾನವ ಸರಪಳಿ ನಿರ್ಮಿಸಿದರು.ಶ್ರೀಶೈಲ ಬೀಳಗಿ, ನಗರಾಧ್ಯಕ್ಷೆ ವಿದ್ಯಾ ದಭಾಡಿ, ಸುರೇಶ ಅಕ್ಕಿವಾಟ, ಬಸನಗೌಡ ಪಾಟೀಲ, ಶಂಕರ ಪಾಟೀಲ, ಮುಂಡಲೀಕ ಪಾಲಭಾಂವಿ, ಧರೆಪ್ಪ ಉಳ್ಳಾಗಡ್ಡಿ, ಲಕ್ಕಪ್ಪ ಪಾಟೀಲ, ಮನೋಹರ ಶಿರೋಳ, ಪ್ರಭು ಬಾಗಿ, ಮಹಾದೇವ ಕೋಟ್ಯಾಳ, ಜಿ.ಎಸ್. ಗೊಂಬಿ, ಸಂಜು ತೆಗ್ಗಿ, ಪ್ರಭು ಪೂಜಾರಿ, ಸುಭಾಸ ಚೋಳಿ, ಸುನೀಲ ವಜ್ಜರಮಟ್ಟಿ, ಸವಿತಾ ಹೊಸೂರ, ಪವಿತ್ರಾ ತುಕ್ಕಣ್ಣವರ, ಸುವರ್ಣ ಕೊಪ್ಪದ, ಗೌರಿ ಮಿಳ್ಳಿ, ಅನುರಾಧಾ ಹೊರಟ್ಟಿ, ಸುವರ್ಣ ಸೋಳಂಕಿ, ರೇಖಾ ಕಾಂತಿ, ಆನಂದ ಕಂಪು, ಶಿವು ಕಾಗಿ ಸೇರಿದಂತೆ ಅನೇಕರಿದ್ದರು.

# ಜಿಲ್ಲೆಯಲ್ಲಿ ಮಾದರಿ ಅಂಗನವಾಡಿಗಳ ಅಭಿವೃದ್ಧಿ

**ವಿಜಯಪುರ:** ಜಿಲ್ಲೆಯಲ್ಲಿ ಮಾದರಿ ಅಂಗನವಾಡಿಗಳನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜಿಲ್ಲಾ ಪಂಚಾಯತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ 34 ಅಂಗನವಾಡಿಗಳನ್ನು ಮಾದರಿ ಹಾಗೂ ಆಕರ್ಷಕ ಅಂಗನವಾಡಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ಗ್ರಾಮೀಣ ಮಟ್ಟದ ಮಕ್ಕಳ ಶೈಕ್ಷಣಿಕ ಜೀವನದ ಅಡಿಪಾಯವು ಅತ್ಯಂತ ಸದೃಢವಾಗುವುದರ ಜೊತೆಗೆ ಮಕ್ಕಳ ಹಾಜರಾತಿಯ ನಿರಂತರತೆಯನ್ನು ಕಾಯ್ದುಕೊಂಡು ಮಕ್ಕಳ ಸ್ನೇಹಿ ಕೇಂದ್ರಗಳನ್ನಾಗಿಸುವುದಾಗಿದೆ. ಆಟೋಟಗಳಲ್ಲಿ ಪ್ರೋತ್ಸಾಹ ದೊರೆತು ದೈಹಿಕ ಹಾಗೂ ಮಾನಸಿಕ ಸದೃಢತೆ ಬೆಳೆಸುವುದಾಗಿದೆ. ಈಗಾಗಲೇ ದುರಸ್ತಿ ಕಾರ್ಯ ಪೂರ್ಣಗೊಂಡಿದ್ದು, ಎಲ್ಲಾ 34 ಅಂಗನವಾಡಿ ಕೇಂದ್ರಗಳಿಗೆ ಕಡ್ಡಾಯವಾಗಿ ಬಾಲ ಸ್ನೇಹಿ ಪೇಂಟಿಂಗ್, ಬಯೋಫೆನ್ಸಿಂಗ್, ಪೌಷ್ಟಿಕ ಕೈತೋಟ ಹಾಗೂ ಶುದ್ಧ ಕುಡಿಯುವ



ನೀರಿನ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ 2,755 ಅಂಗನವಾಡಿ ಕೇಂದ್ರಗಳಿದ್ದು, ಅದರಲ್ಲಿ 1,425 ಸ್ವಂತ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. 2022-23ನೇ ಸಾಲಿನಲ್ಲಿ ಒಟ್ಟು 100 ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ 66 ಅಂಗನವಾಡಿ ಕೇಂದ್ರಗಳು ಈಗಾಗಲೇ ಪೂರ್ಣಗೊಂಡಿದ್ದು, ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣಕ್ಕಾಗಿ ಬಾಲಸ್ನೇಹಿ ಪೇಂಟಿಂಗ್‌ನಿಂದ ಕೂಡಿರುವ ಸುಂದರವಾದ ಕೊಠಡಿ, ಪ್ರತ್ಯೇಕವಾದ ಮತ್ತು ವ್ಯವಸ್ಥಿತವಾದ ಅಡುಗೆ ಕೊಠಡಿ ನಿರ್ಮಾಣ, ದಾಸ್ತಾನು ಕೊಠಡಿ ಹಾಗೂ ಶೌಚಾಲಯ, ಮಕ್ಕಳಿಗೆ ಪ್ರತ್ಯೇಕ ಕೈತೊಳೆಯುವ ಸ್ಥಳ, ಕೇಂದ್ರದ ಒಳ-ಹೊರಗೂ ಅತ್ಯಾಕರ್ಷಕ ಬಾಲಸ್ನೇಹಿ ಪೇಂಟಿಂಗ್, ಅಂಗನವಾಡಿ ಕೇಂದ್ರಗಳಿಗೆ ಅವಶ್ಯಕವಾದ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕೇಂದ್ರದ ಆವರಣದಲ್ಲಿ ಕಿಚನ್ ಗಾರ್ಡನ್ ಹಾಗೂ ಜೈವಿಕ ಬೇಲಿ ನಿರ್ಮಾಣ ಮಾಡಲಾಗಿದೆ. ಹೆಚ್ಚಿನ ಸ್ಥಳಾವಕಾಶ ಇರುವ ಅಂಗನವಾಡಿ ಕೇಂದ್ರಗಳಿಗೆ ಕಂಪೌಂಡ ನಿರ್ಮಾಣವೂ ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚೂರು-ಪಾರು

### ಕೋಜಾಗಿರಿ ಗಾನ ಸುಧಾ ಕಾರ್ಯಕ್ರಮ




ಬೆಳಗಾವಿ: ಪಂ.ಬಿ.ವಿ. ಕಡ್ಲಸ್ಕರಬುವಾ ಮೆಮೊರೀಯಲ್ ಟ್ರಸ್ಟದವರು ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಇತ್ತೀಚೆಗೆ "ಕೋಜಾಗಿರಿ ಗಾನ ಸುಧಾ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.ಬೆಳಗಾವಿಯ ತಮ್ಮಣ್ಣ ಗುರವ, ಪಂ. ಆರ ಕೆ ಬಿಜಾಪುರೆ ಹಾಗೂ ಪಂ. ಬಿ ವಿ ಕಡ್ಲಸ್ಕರಬುವಾ ಅವರ ಬಳಿ ಭಜನೆ ಅಭ್ಯಾಸ ಮಾಡಿದ ಬೆಳಗಾವಿಯ ಶ್ರೀ ಸುರೇಶ ಸರದೇಸಾಯಿವರು ಹಾರ್ಮೋನಿಯಂ ವಾದನವನ್ನು ರಾಗ ಹಂಸಧ್ವನಿಯೊಂದಿಗೆ ಪ್ರಾರಂಭಿಸಿ ರಾಗದಲ್ಲಿ ಮಧ್ಯ ಲಯ ಹಾಗೂ ಧ್ರುತ ತಿನತಾಳದ "ವಾತಾಪಿ ಗಣಪತಿಂ ಭಜೆ" ಪ್ರಸ್ತುತಪಡಿಸಿದರು. ಮರಾಠಿಯ " ಮಧುಕರ ವನನ ಪಿರತಕರಿ" ಹಾಗೂ ಪುರಂದರದಾಸರ "ನಿನ್ನ ನೋಡಿ ಧನ್ಯನಾದೇನೊ" ಎಂಬ ದಾಸರ ಪದವನ್ನು ನುಡಿಸಿದರು. ಸಂಗೀತ ದಿಗ್ಗಜರಾದ ಭಾರತೀ ವೈಶಂಪಾಯನ ಹಾಗೂ ಪಂ ಶ್ರೀನಿವಾಸ ಜೋಶೀ ಇವರಲ್ಲಿ ಸಂಗೀತ ಅಭ್ಯಾಸ ಮಾಡಿದ ಧಾರವಾಡದ ಶ್ರೀಮತಿ ಗೀತಾ ಆಲೂರ ಅವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯನವನ್ನು ರಾಗ ಗೋರಕ ಕಲ್ಯಾಣದೊಂದಿಗೆ ಪ್ರಾರಂಭಿಸಿ ರಾಗದಲ್ಲಿ ವಿಲಂಬಿತ ಎಕತಾಲದ ರೈನ ಭಯಿ ಹಾಗೂ ಧ್ರುತ ತಿನತಾಳದ ಭರಸನ ಕೈಸೆ ಭಿನ ಭರನ ಹಾಗೂ ರಾಗ ಶ್ರೀಯಲ್ಲಿ ವಿಲಂಬಿತ ಝುಪತಾಲದ "ಹರಿಕೆ ಚರಣ ಕಮಲ" ಧ್ರುತ ತಿನತಾಳದ "ಉಡತ ಜಾರಿ" ಮತ್ತು ಪುರಂದರದಾಸರ "ನೀನೇ ಅನಾಥ ಬಂಧು" ರಚನೆಯನ್ನು ಹಾಡಿದರು.ತಬಲಾ ನಾರಾಯಣ ಗಣಾಚಾರಿ ಹಾಗೂ ಹಾರ್ಮೋನಿಯಂ ಸುರೇಶ ಸರದೇಸಾಯಿ ಸಾಥ ನಿಡುವುದರು. ಟ್ರಸ್ಟಿನ ಅಧ್ಯಕ್ಷರಾದ ಗುರುರಾಜ ಕುಲಕರ್ಣಿಯವರು ವಂದಿಸಿದರು.

### ಕುನ್ನಾಳ ಪಿಎಂಶ್ರೀ ಶಾಲೆಯಲ್ಲಿ ಕರ್ನಾಟಕ ಸಮಗ್ರ ಶಿಕ್ಷಣ ಯೋಜನಾ ತಂಡದಿಂದ ಮೌಲ್ಯಮಾಪನ



**ರಾಮದುರ್ಗ:** ಜೆಪಾಲ್ ಸಂಶೋಧನಾ ಸಂಸ್ಥೆ ಹಾಗೂ ಕೀ ಎಜ್ಯುಕೇಶನ್ ಸಹಭಾಗಿತ್ವದಲ್ಲಿ ರಾಜ್ಯದ 6 ಜಿಲ್ಲೆಗಳ 104 ಶಾಲೆಗಳ ಪೂರ್ವ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ವೈಯಕ್ತಿಕ ಮೌಲ್ಯಮಾಪನ ನಡೆಸಿ ಮೇಲ್ವಿಚಾರಣೆ ಮಾಡುವ ಯೋಜನೆಗೆ ಕರ್ನಾಟಕ ಸಮಗ್ರ ಶಿಕ್ಷಣ ಯೋಜನೆಯಲ್ಲಿ ಅನುಮತಿಸಲಾಗಿದೆ.ಯೋಜನಾ ವ್ಯವಸ್ಥಾಪಕ ಯಲ್ಲಪ್ಪ ನೇತೃತ್ವದ ಮೌಲ್ಯಮಾಪಕರ ತಂಡ ತಾಲೂಕಿನ ಕುನ್ನಾಳ ಗ್ರಾಮದ ಪಿಎಂಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಬೇಸಲೈನ್ ಮೌಲ್ಯಮಾಪನ ನಡೆಸಿತು.ಮೌಲ್ಯಮಾಪಕರ ತಂಡವು ಎಲ್.ಕೆ.ಜಿ. ಹಾಗೂ ಯು.ಕೆ.ಜಿ. ತರಗತಿಗಳ ಪ್ರತಿಯೊಂದು ಮಗುವನ್ನು ವೈಯಕ್ತಿಕವಾಗಿ ವಿವಿಧ ಆಯಾಮಗಳಲ್ಲಿ ಮೌಲ್ಯಮಾಪನ ನಡೆಸಿದರು. ತಂಡದಲ್ಲಿ ಮೇಲ್ವಿಚಾರಕಿ ಅರ್ಪಿತಾ, ಮೌಲ್ಯಮಾಪಕರಾದ ಪೂಜಾ, ಶೃತಿ, ದೇವೇಂದ್ರ, ಮಲ್ಲಿಕಾರ್ಜುನ, ಅಭಿಷೇಕ, ಶಿಕ್ಷಕರಾದ ಕೆ.ಬಿ. ಮಾಳಪ್ಪನವರ, ಉಮೇಶ್ವರ ಮರಗಾಲ, ಸಂಗಮೇಶ ಸೊಗಲದ, ವಿ.ಆರ್. ಅಣ್ಣಿಗೇರಿ, ಕೃಷ್ಣಾ ಮಳಲಿ ಶಿಕ್ಷಕಿಯರಾದ ಅನ್ನಪೂರ್ಣ ಸಕ್ರೆಪ್ಪಗೋಳ, ಭಾರತಿ ಸಿದ್ನಾಳ ಸೇರಿದಂತೆ ಇತರರಿದ್ದರು.

# ಅನಧಿಕೃತ ಶೆಡ್‌ಗಳ ತೆರವಿಗೆ ಪುರಸಭೆ ನಿರ್ಧಾರ

## ಪುರಸಭೆ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ಠರಾವು ಪಾಸ್

ಮಹಾಲಿಂಗಪುರ: ಕಾಮಗಾರಿ ಪ್ರಗತಿಯಲ್ಲಿರುವ ಬಸವ ವೃತ್ತದಿಂದ ಎಪಿಎಂಸಿ ದ್ವಾರ ಬಾಗಿಲುವರೆಗಿನ ರಸ್ತೆ ಬದಿಯ ಅನಧಿಕೃತ ಕಟ್ಟಡ ತೆರವುಗೊಳಿಸಿ ಚರಂಡಿ ನಿರ್ಮಾಣ, ಚನ್ನಮ್ಮ ವೃತ್ತದಿಂದ ರಬಕವಿ ರಸ್ತೆಯ ದ್ವಾರ ಬಾಗಿಲು, ಗೋಕಾಕ ರಸ್ತೆಯ ಸರ್ಕಾರಿ ಕಾಲೇಜಿನ ರಸ್ತೆಯಲ್ಲಿರುವ ಹಾಗೂ ಡಬಲರಸ್ತೆಯ ಸಜನಸಾಬ ಪೆಂಡಾರಿ ಅಡ್ಡೆಯಿಂದ ಸಣ್ಣಕ್ಕಿ ಅಡ್ಡೆವರೆಗಿನ ಅತಿಕ್ರಮಣ ಒಳ ರಸ್ತೆಗಳಲ್ಲಿನ ಎಲ್ಲಾ ಶೆಡ್‌ಗಳನ್ನು ತೆರವುಗೊಳಿಸಲು ಸರ್ವಾನುಮತದ ಠರಾವು ಪಾಸ ಮಾಡಲಾಯಿತು.

ಪುರಸಭೆಯ ಸಭಾಭವನದಲ್ಲಿ ಅಧ್ಯಕ್ಷ ಯಲ್ಲನಗೌಡ ಪಾಟೀಲ್ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಮಾತನಾಡಿ, ಕರಕುಶಲ ಕಾರ್ಮಿಕರಿಗೆ ವಸತಿ ಯೋಜನೆಯಲ್ಲಿ ನೇಕಾರರಿಗೆ ಮಂಜೂರಾದ 100 ಮನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ಶಾಸಕ ಮತ್ತು ಬೆಂಬಲಿಗರು ಲಂಚಪಡೆದು ನೇಕಾರರಲ್ಲದ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ನೇಕಾರರಿಗೆ ಅನ್ಯಾಯ ಮಾಡಿದ್ದಾರೆ. ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿ ಅರ್ಹ ನೇಕಾರ ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರವೇ ಮನೆ ಆದೇಶಪತ್ರ ವಿತರಿಸಬೇಕೆಂದು ಆಗ್ರಹಿಸಿದರು.

ಚನ್ನಮ್ಮ ಸರ್ಕಲ್, ಡಬಲ್ ರಸ್ತೆಯ ವಾರದ ಸಂತೆ ಮಾರುಕಟ್ಟೆ ಸರ್ಕಲ್‌ನಲ್ಲಿ ಇರುವ ಅನಧಿಕೃತ ಶೆಡ್‌ಗಳ ತೆರವುಗೊಳಿಸಿ ವಾಣಿಜ್ಯ ಮಳಿಗೆ ನಿರ್ಮಾಣ ಹಾಗೂ ಮಹಾಲಿಂಗೇಶ್ವರ ದೇವಸ್ಥಾನದಿಂದ ಬಡಲ್ ರಸ್ತೆವರೆಗಿನ ಅತಿಕ್ರಮಣ ಅಂಗಡಿಗಳನ್ನು ತೆರವುಗೊಳಿಸಿ ಡಬಲ್ ರಸ್ತೆ ನಿರ್ಮಾಣ ಮಾಡಲು ಠರಾವು ಪಾಸ ಮಾಡಲಾಯಿತು. ಇದಕ್ಕೆ ಸದಸ್ಯರಾದ ಬಸವರಾಜ ಚಮಕೇರಿ, ಬಸವರಾಜ ಹಿಟ್ಟಿನಮಠ ಈಗಾಗಲೇ ಇಲ್ಲಿನ ವ್ಯಾಪಾರ ವಹಿವಾಟು



ಕುಸಿದಿದೆ. ಇದರಿಂದ ಜನಾಕ್ರೋಶಕ್ಕೆ ಕಾರಣವಾಗುತ್ತದೆ ಎಂದು ವಿರೋಧ ವ್ಯಕ್ತಪಡಿಸಿದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಮುಖ್ಯಾಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಸರ್ವೇ ಮಾಡಿಸಿ ಪುರಸಭೆಯ ಅತಿಕ್ರಮಣ ಜಾಗೆಗಳನ್ನು ಮಾತ್ರ ತೆರವುಗೊಳಿಸಲಾಗುವದು. ಮಾಲೀಕತ್ವದ ಯಾವುದೇ ಜಾಗೆಯನ್ನು ನಾವು ಅತಿಕ್ರಮಣ ಮಾಡುವದಿಲ್ಲ. ಈ ಡಬಲ್ ರಸ್ತೆಯ ನಿರ್ಮಾಣದಿಂದ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಹಾಗೂ ಪಟ್ಟಣದ ಸೌಂದರ್ಯವು ಹೆಚ್ಚಲಿದೆ ಜೊತೆಗೆ ಟ್ರಾಫಿಕ್ ಸಮಸ್ಯೆಯ ನಿವಾರಣೆಯು ಆಗಲಿದೆ. ಪಟ್ಟಣದ ಸಾರ್ವಜನಿಕರು ಇದಕ್ಕೆ ಸಹಕಾರ ನೀಡಬೇಕು ಎಂದರು.

**ವಿವಿಧ ವೃತ್ತಗಳ ನಿರ್ಮಾಣಕ್ಕೆ ಅಸ್ತು :** ಪಟ್ಟಣದ ಬುದ್ನಿಪಿಡಿಯಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತ, ಹೇಮರಡ್ಡಿ ಮಲ್ಲಮ್ಮ ವೃತ್ತ, ರಬಕವಿ ರಸ್ತೆಯ ಶಾಂತಿನಿಕೇತನ ಕಾಲನಿಯಲ್ಲಿ ದೇವರ ದಾಸಿಮಯ್ಯ ವೃತ್ತಗಳ ನಿರ್ಮಾಣಕ್ಕೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು.

**80 ಲಕ್ಷ ವೆಚ್ಚದ ವಾಣಿಜ್ಯ ಮಳಿಗೆ ನಿರ್ಮಾಣ:** ವಾರದ ಮಾರುಕಟ್ಟೆ ಪಶ್ಚಿಮ ಭಾಗದಲ್ಲಿನ ಅನಧಿಕೃತ ಶೆಡ್ ತೆರವುಗೊಳಿಸಿ ಪುರಸಭೆಯ ಉದ್ಯಮ ನಿಧಿಯಲ್ಲಿ 80 ವೆಚ್ಚದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ಸರ್ವಾನುಮತದ ಠರಾವು ಪಾಸ ಮಾಡಲಾಯಿತು.

ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ, ಸದಸ್ಯ ರವಿ ಜವಳಗಿ ಮಾತನಾಡಿ ಡಬಲ್ ರಸ್ತೆಯ ವೃತ್ತಕ್ಕೆ ಅರ್ಜುನಗೌಡ ಪಾಟೀಲ ಅವರು ಅಧ್ಯಕ್ಷತೆಯ ಅವಧಿಯಲ್ಲಿ ಸ್ವಾಮಿ ವಿವೇಕಾನಂದ ವೃತ್ತ ಎಂದು ನಾಮಕರಣ ಮಾಡಿ ಠರಾವು ಪಾಸ ಮಾಡಲಾಗಿದೆ. ಈಗ ಮತ್ತೇ ಪುರಸಭೆಯ ಸಾಮಾನ್ಯ ಸಭೆಯ ಸೂಚನಾಪತ್ರದಲ್ಲಿ ಪೆಂಡಾರಿ ಸರ್ಕಲ್ ಎಂದು ಬಳಸಿದನ್ನು ಖಂಡಿಸಿ, ಹಿಂದಿನ ಠರಾವಿನಂತೆ ಸ್ವಾಮಿ ವಿವೇಕಾನಂದ ವೃತ್ತ ಎಂದು ನಮೂದಿಸಲು ಒತ್ತಾಯಿಸಿದರು.

ಸದಸ್ಯೆ ಸರಸ್ವತಿ ರಾಮೋಜಿ, ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಚಾಂದನಿ ನಾಯಕ್, ಡಾ.ಸವಿತಾ ಕೋಳಿಗುಡ್ಡ, ಶೇಖರ ಅಂಗಡಿ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ಬಾಗವಾನ ಮಾತನಾಡಿದರು.

**ಪ್ರಮುಖ ಠರಾವು ಪಾಸ್ :**

2020-21, 2022-23ನೇ ಸಾಲಿನ 15ನೇ ಹಣಕಾಸು ಹಾಗೂ ಎಸ್‌ಎಫ್‌ಸಿ ಮುಕ್ತನಿಧಿ ಯೋಜನೆಯಲ್ಲಿ ಮಂಜೂರಿಯಾದ ಕಾಮಗಾರಿಗಳ ಬದಲಾವಣೆ ಕ್ರೀಯಾಯೋಜನೆಗೆ ಮಂಜೂರಿ, ಆರೋಗ್ಯ ಮತ್ತು ತಾಂತ್ರೀಕ ವಿಭಾಗದ ವಿವಿಧ ಯೋಜನೆಯಲ್ಲಿ ಕರೆದ ಟೆಂಡರ್‌ಗಳಿಗೆ ಮಂಜೂರಾತಿ, ಚನ್ನಮ್ಮ ವೃತ್ತದ ವಾಣಿಜ್ಯ ಮಳಿಗೆ ಹಿಂಭಾಗದಲ್ಲಿರುವ ಖಾಲಿ ಜಾಗೆಯಲ್ಲಿ ಮೇಘಾ ಮಾರ್ಕೇಟ್ ನಿರ್ಮಾಣ ಸೇರಿದಂತೆ ಹಲವು ವಿಷಯಗಳಿಗೆ ಸರ್ವಾನುಮತದ ಒಪ್ಪಿಗೆ ನೀಡಿದರೆ, 15ನೇ ಹಣಕಾಸಿನ ಯೋಜನೆಯ ಉಳಿಕೆಯ 60 ಲಕ್ಷ ವೆಚ್ಚದ ಕ್ರೀಯಾಯೋಜನೆಯ ಕಾಮಗಾರಿಗಳ ಮಂಜೂರಾತಿಗೆ ತಡೆನೀಡಿ, ಮುಂದಿನ ಸಾಮಾನ್ಯ ಸಭೆವರೆಗೆ ಮುಂದೂಡಲಾಯಿತು.

ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ಬಾಗವಾನ, ಸದಸ್ಯರಾದ ಬಸವರಾಜ ಯರಗಟ್ಟಿ, ಸಜನಸಾಬ ಪೆಂಡಾರಿ, ಬಸವರಾಜ ಬುರುಡ, ಸ್ನೇಹಲ್ ಅಂಗಡಿ, ಭಾವನಾ ಪಾಟೀಲ, ಹೆಸ್ಕಾಂ ಅಧಿಕಾರಿ ರಾಜೇಶ ಬಾಗೋಜಿ, ನಗರ ಭೂಮಾಪನ ಅಧಿಕಾರಿ ಬಸರಿಗಿಡದ, ಪುರಸಭೆ ವ್ಯವಸ್ಥಾಪಕ ಎಸ್.ಎನ್.ಪಾಟೀಲ, ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ, ಕಂದಾಯ ಅಧಿಕಾರಿ ಆರ್.ವೈ.ಸೊನ್ನದ, ಹಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ. ಮುಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕರಾದ ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಸಿಬ್ಬಂದಿ ವಿಕ್ರಂ ಹವಾಲ್ದಾರ, ರಾಜೇಶ್ವರಿ ಸೋರಗಾಂವಿ, ರಾಮು ಮಾಂಗ, ಮಹಾಲಿಂಗ ಮಾಂಗ ಇದ್ದರು.

### 9ರಂದು ಬೆಳಗಾವಿಯಲ್ಲಿ ಚೆಸ್ ಟೂರ್ನಾಮೆಂಟ್

ಬೆಳಗಾವಿ: ಇದೇ ತಿಂಗಳ ಶನಿವಾರ ದಿನಾಂಕ 9 ರಂದು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಆವರಣದಲ್ಲಿರುವ ಶ್ರೀ ಪ್ರಭುದೇವ ಇಂಡಿಪೆಂಡೆಂಟ್ ಸೈನ್ಸ್ ಪಿಯು ಕಾಲೇಜಿನಲ್ಲಿ ಒಂದು ದಿನದ ಚೆಸ್ ಟೂರ್ನಾಮೆಂಟ್ ನಡೆಯಲಿದೆ ಎಂದು ಕಾಲೇಜಿನ ಪ್ರಾಚಾರ್ಯ ಶ್ರೀಮತಿ ಸ್ವಪ್ನಾ ಜೋಶಿ ತಿಳಿಸಿದ್ದಾರೆ.

ನಾಲ್ಕು ವಿಭಾಗಗಳಲ್ಲಿ (ಕೆಟಗರಿ) ಪಂದ್ಯಾವಳಿಯನ್ನು ಜರುಗಿಸಲಾಗುತ್ತಿದೆ , ಒಂದರಿಂದ ನಾಲ್ಕನೇ ತರಗತಿಯವರೆಗಿನ ವಿದ್ಯಾರ್ಥಿಗಳದ್ದು ಎ ಕೆಟಗರಿ, ಐದರಿಂದ ಏಳನೇ ತರಗತಿಯವರೆಗಿನದ್ದು ಬಿ ಕೆಟಗರಿ, 8-10ನೇ ತರಗತಿಯವರೆಗೆ ಸಿ ಕೆಟಗರಿ ಮತ್ತು ಪಿಯುಸಿ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿದ್ದು ಡಿ ಕೆಟಗರಿ ಎಂದು ವಿಭಾಗಿಸಲಾಗಿದೆ ನಾಲ್ಕೂ ವಿಭಾಗಗಳಲ್ಲಿನ ವಿಜೇತರಿಗೆ ಪ್ರತ್ಯೇಕ ಬಹುಮಾನ ನೀಡಲಾಗುತ್ತಿದೆ. ಪ್ರಥಮ ಬಹುಮಾನ 1500 ರೂ, ಎರಡನೇ ಬಹುಮಾನ 1,000 ರೂ. ಮೂರನೇ ಬಹುಮಾನ 500 ರೂ. ಮತ್ತು ಟ್ರೋಫಿ ನೀಡಲಾಗುತ್ತಿದೆ. ಎಲ್ಲ ನಾಲ್ಕೂ ವಿಭಾಗಗಳಲ್ಲಿ ನಾಲ್ಕನೇ ಯಾಂಕಿನಿಂದ 10ನೇ ರ್‍ಯಾಂಕವರೆಗೆ ವಿಜೇತರಾಗುವ ಕ್ರೀಡಾಳುಗಳಿಗೆ ವಿಶೇಷ ಟ್ರೋಪಿ ನೀಡಿ ಸತ್ಕರಿಸಲಾಗುತ್ತಿದೆ. ಯಾವ ಅಕಾಡೆಮಿಯಿಂದ ಅತಿ ಹೆಚ್ಚು ಕ್ರೀಡಾಳುಗಳು ಭಾಗವಹಿಸುತ್ತಾರೋ ಅಂತಹ ಅಕ್ಯಾಡಮಿಗೆ ಪ್ರಥಮ ಪ್ರಶಸ್ತಿ ನಗದು 1500 ಮತ್ತು ಟ್ರೋಫಿ, ಅದೇ ರೀತಿ ದ್ವಿತೀಯ ಪ್ರಶಸ್ತಿ ನಗದು ರೂ 1,000 ಮತ್ತು ಟ್ರೋಫಿ ಈ ರೀತಿ ವಿಶೇಷ ಬಹುಮಾನವನ್ನು ಕೂಡ ಇಲ್ಲಿ ಘೋಷಿಸಲಾಗಿದೆ. ಟೂರ್ನಾಮೆಂಟಿನಲ್ಲಿ ಭಾಗವಹಿಸುವ ಕ್ರೀಡಾಳುಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ಟೂರ್ನಾಮೆಂಟ್ ನಲ್ಲಿ ಭಾಗವಹಿಸುವ ಕ್ರೀಡಾಳುಗಳು ಕಡ್ಡಾಯವಾಗಿ ತಮ್ಮ ಶಾಲಾ ಸಮವಸ್ತ್ರದಲ್ಲಿ ತಮ್ಮ ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು.

# ಸಮಾನತೆಯ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣ

## ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ ಜಗದೀಶ ಮುಗಳಿ ಅಭಿಮತ

**ಬೆಳಗಾವಿ;** ಅಧಿಕಾರವಿದ್ದಲ್ಲಿ ಆದರ್ಶವಿರುವದಿಲ್ಲ, ಆದರ್ಶವಿರುವಲ್ಲಿ ಅಧಿಕಾರ ಇರುವದಿಲ್ಲ ಎಂಬುದು ನಾಣ್ಣುಡಿ.ಆದರೆ ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರು ಈ ವಿಷಯದಲ್ಲಿ ಇದನ್ನು ಮೀರಿ ಆದರ್ಶದ ಅಧಿಕಾರ ವಹಿಸಿಕೊಂಡು, ಸರ್ವರಿಗೂ ಸಮಬಾಳು ಹಾಗೂ ಸಮಪಾಲು ಎಂಬ ಪರಿಕಲ್ಪನೆಯ ಕಾಯಕ ದಾಸೋಹ ತತ್ವ ಸಿದ್ಧಾಂತಗಳ ಭದ್ರ ಅಡಿಪಾಯದ ಬದುಕನ್ನು ಹೇಗೆ ಬದುಕಬೇಕೆಂದನ್ನು ತಾವೂ ಬದುಕಿ, ನಾವು ಹೇಗೆ ಬದುಕ ಬೇಕೆಂಬುದನ್ನು ಕಲಿಸಿದವರು ಎಂದು ಡಾ ಜಗದೀಶ ಮುಗಳಿ ಹೇಳಿದರು.

ಪ್ರತಿಕೂಲ ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿದ ಬಸವಣ್ಣನವರ ಬದುಕಿನ ವಿಕಾಸ ಶೀಲ ವಿಚಾರ ಧಾರೆಯನ್ನು ಪ್ರಭುತ್ವದ ಅಂಕುಶದ ಆಚೆಯಿರುವ ಅವರ ನಿಲುವು ಅವರ್ಣನೀಯ ಎಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಮಲ್ಲಸಂದ್ರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಸಹ ಶಿಕ್ಷರಾದ ಡಾ. ಜಗದೀಶ ಮುಗಳಿ ಅವರು ಇಲ್ಲಿ ಮಹಾಂತೇಶ ನಗರದ ಮಹಾಂತ ಭವನದಲ್ಲಿ ಜರುಗಿದ ಜಾಗತಿಕ ಲಿಂಗಾಯತ ಮಹಾಸಭಾ ಬೆಳಗಾವಿ ಜಿಲ್ಲಾ ಘಟಕ ಆಯೋಜಿಸಿದ ಮಾಸಿಕ ಅನುಭಾವ ಗೋಷ್ಠಿಯಲ್ಲಿ ಆಧುನಿಕ ಮಹಾಕಾವ್ಯ ಗಳಲ್ಲಿ ಬಸವಣ್ಣ ಎಂಬ ವಿಷಯದ ಕುರಿತ ತಮ್ಮ ಉಪನ್ಯಾಸದಲ್ಲಿ ಮೇಲಿನಂತೆ ಹೇಳಿದರು.

ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಕುರಿತು ಆರು ಮಹಾ ಕಾವ್ಯಗಳು ರಚಿಸಲ್ಪಟ್ಟಿದೆ. ಆಧುನಿಕ ಸಂದರ್ಭದಲ್ಲಿ ಶರಣರ ಕುರಿತು ಹುಟ್ಟಿದ ಕಥೆ, ಕಾವ್ಯ,ನಾಟಕ ಮಹಾಕಾವ್ಯಗಳಿಗೆ ಮೂಲ ಆಧಾರ ವಚನ ಸಾಹಿತ್ಯವೇ. ಅನುಭವ ಮಂಟಪದಲ್ಲಿ ಶರಣರು ತಮ್ಮ ಅನುಭಾವದ ಮೇಲೆ ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸಿ, ಚರ್ಚಿಸಿ, ವಿಚಾರಗಳ ಚಿಂತನ ಮಂಥನ ಮಾಡಿದ ಮೇಲೆ ಸ್ವತಂತ್ರವಾಗಿ ರಚನೆಯಾದುವು ವಚನಗಳು. ವಚನಗಳ ರಚನೆಗೆ ಶರಣರ ಅನುಭಾವವೇ ಮೂಲ, ವಿನಹಃ ಯಾವುದೇ ವೇದ ಉಪನಿಷತ್ತುಗಳ ಪ್ರಭಾವ ಇಲ್ಲಾ ಅಂತಾ ಖಂಡಿತವಾಗಿಯೂ ಹೇಳಬಹುದು.

ಬಸವೇಶ್ವರ ತುಪ್ಪದ ಅವರು ಬಸವ ದರ್ಶನಮ್ ಅನ್ನುವ ಮಹಾಕಾವ್ಯವನ್ನು ರಚನೆ ಮಾಡಿದ್ದಾರೆ.ಕಂಬಾಳು ಸಿದ್ದಗಂಗಯ್ಯನವರು ಬಸವ ವಚನ ದರ್ಶನ ಎಂಬ ಮಹಾಕಾವ್ಯ ರಚಿಸಿದ್ದಾರೆ. ಡಾ.ಆರ್.ಸಿ.ಮುದ್ದೇಬಿಹಾಳ ಅವರು "ಬಸವ ಬೆಳಗು" ಎಂಬ ಮಹಾಕಾವ್ಯ ರಚನೆ



> **ಅನುಭವ ಮಂಟಪದಲ್ಲಿ ಶರಣರು ತಮ್ಮ ಅನುಭಾವದ ಮೇಲೆ ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸಿ, ಚರ್ಚಿಸಿ, ವಿಚಾರಗಳ ಚಿಂತನ ಮಂಥನ ಮಾಡಿದ ಮೇಲೆ ಸ್ವತಂತ್ರವಾಗಿ ರಚನೆಯಾದುವು ವಚನಗಳು. ವಚನಗಳ ರಚನೆಗೆ ಶರಣರ ಅನುಭಾವವೇ ಮೂಲ, ವಿನಹಃ ಯಾವುದೇ ವೇದ ಉಪನಿಷತ್ತುಗಳ ಪ್ರಭಾವ ಅಲ್ಲ**
> **-ಡಾ.ಜಗದೀಶ ಮುಗಳಿ** ಶಿಕ್ಷಕರು

ಮಾಡಿದ್ದಾರೆ.ಪೂಜ್ಯ ನಿರುಪಾದೀಶ್ವರ ಸ್ವಾಮಿಗಳು "ಮಹಾ ಮಾನವತಾವಾದಿ ಸಂಗನಬಸವ ವಿಜಯ" ಎಂಬ ಮಹಾಕಾವ್ಯ ರಚಿಸಿದ್ದಾರೆ. ಅದರಂತೆ ಡಾ. ಪ್ರದೀಪಕುಮಾರ ಹೆಬ್ರಿ ಅವರು "ಯುಗಾವತಾರಿ ಬಸವಣ್ಣ "ಎಂಬ ಮಹಾಕಾವ್ಯ ರಚನೆ ಮಾಡಿದ್ದಾರೆಂದು ಹೇಳಿದರು. ಮಹಾಕಾವ್ಯಗಳ ಆಶಯ ಬಸವಣ್ಣನವರ ಕರ್ತೃತ್ವ ಶಕ್ತಿ, ವ್ಯಕ್ತಿತ್ವ, ಸಾಧನೆ,ಸಿದ್ದಿ, ಆದ್ಯಾತ್ಮಿಕ ಸಾಧನೆ, ಸ್ತ್ರೀ ಸ್ವಾತಂತ್ರ್ಯ, ವರ್ಣಬೇದ,ವರ್ಗಭೇದಗಳ ತಾರತಮ್ಯದ ಅವರ ಹೋರಾಟಗಳ ಕುರಿತು ಮಹಾಕಾವ್ಯಗಳು ರಚಿಸಲ್ಪಟ್ಟಿವೆ.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷರಾದ ಶರಣ ಬಸವರಾಜ ರೊಟ್ಟಿ ನ್ಯಾಯವಾದಿಗಳು ಇತ್ತೀಚಿನ ದಿನಗಳಲ್ಲಿ ಕೆಲವು ವ್ಯಕ್ತಿ ಮತ್ತು ಸಂಘಟನೆಗಳು ಬಸವಾದಿ ಶರಣರ ವಚನಗಳ ಮೂಲ ಆಶಯಗಳ ವಿರುದ್ಧವಾಗಿ ಇಲ್ಲಸಲ್ಲದ ವಿಚಾರಗಳನ್ನು ಹೇಳುತಿದ್ದು ,ಜಾಗತಿಕ ಲಿಂಗಾಯತ ಮಹಾಸಭಾ ಇದನ್ನು ಉಗ್ರವಾಗಿ ಖಂಡಿಸುತ್ತದೆ.ಅಲ್ಲದೇ ಯಾವುದೇ ಹೋರಾಟಕ್ಕೂ ಸಿದ್ಧ, ಅಲ್ಲದೆ ಬಸವ ಅನುಯಾಯಿಗಳು ಇಂತಹ ದುಷ್ಟ ಶಕ್ತಿಗಳ ವಿರುದ್ಧ ಜಾಗೃತರಾಗಿರಲು ಕರೆಕೊಟ್ಟರು.ಲಿಂಗಾಯತ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ಸಿಗುವ ವರೆಗೂ ನಿರಂತರ ಹೋರಾಟ ಮುಂದುವರೆಯುತ್ತದೆ, ಅಂತಾ ಹೇಳಿದರು.

ಇದೇ ಸಂದರ್ಭದಲ್ಲಿ ಚೆನ್ನ ಬಸವಣ್ಣನವರ ವಚನಗಳ ಶಾಸ್ತ್ರೀಯ ಅದ್ಯಯನ " ಕುರಿತು ಮಹಾ ಪ್ರಬಂಧವನ್ನು ಮಂಡಿಸಿ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ದಿಂದ ಪಿ.ಎಚ್.ಡಿ. ಪದವಿಯನ್ನು ಪಡೆದ ಡಾ.ಮಹಾಂತೇಶ ಬ ನರಸನ್ನವರ ಅವರನ್ನು ಸನ್ಮಾನಿಸಲಾಯಿತು.

ಇಂದಿನ ಪ್ರಸಾದ ದಾಸೋಹಿಗಳಾದ ಶರಣೆ ಶೋಭಾ ಮತ್ತು ಶರಣ ಶಿವರಾಯಿ ಹುಲಕುಂದ ದಂಪತಿ ಷಟ್ ಸ್ಥಲ ಧ್ವಜಾರೋಹಣ ನೆರವೇರಿಸಿದರು. ಶರಣೆ ಮಹಾದೇವಿ ಚಂದ್ರಪ್ಪ ಬೂದಿಹಾಳ ಅವರು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಶರಣೆ ರತ್ನಕ್ಕ ಬೆಣಚಮರ್ಡಿ ಶರಣು ಸಮರ್ಪಿಸಿದರು. ಶರಣೆ ಸುಧಾ ರೊಟ್ಟಿ ಕಾರ್ಯಕ್ರಮ ನಿರೂಪಿಸಿದರು.ಜಾಗತಿಕ ಲಿಂಗಾಯತ ಮಹಾಸಭಾದ ಶರಣೆಯರು ಮೊದಲಿಗೆ ವಚನ ಪ್ರಾರ್ಥನೆ ನಡೆಸಿಕೊಟ್ಟರು.

ಬಾಗೇವಾಡಿಯ ಬಿ.ಜಿ.ವಾಲಿಇಟಗಿ, ಆನಂದ ಕೊಂಡಗುಳಿ,ಎಸ್.ಜಿ.ಸಿದ್ನಾಳ,ಅರವಿಂದ ಪರುಶೆಟ್ಟಿ,ಮಹಾನಂದಾ ಪರುಶೆಟ್ಟಿ,ಶಂಕರ ಗುಡಗನಟ್ಟಿ,ಬಿ.ಡಿ.ಪಾಟೀಲ, ಅನುಸೂಯಾ ಬಶೆಟ್ಟಿ,ಸದಾನಂದ ಬಶೆಟ್ಟಿ,ಸುಜಾತಾ ಮತ್ತಿಕಟ್ಟಿ,ಚಂದ್ರಪ್ಪ ಬೂದಿಹಾಳ, ಈರಣ್ಣ ಚಿನಗುಡಿ,ಮೋಹನ ಗುಂಡ್ಲೂರ,ಮುರಿಗೆಪ್ಪ ಬಾಳಿ,ವಾಣಿ ಪಾಟೀಲ, ಕಮಲಾ ಗಣಾಚಾರಿ,ಪ್ರೇಮಾ ಕೊಂಗಿ, ಕಟ್ಟೀಮನಿ,ವಿವಿಧ ಬಡಾವಣೆಯ ಬವಸವಾನುಯಾಯಿಗಳು ಉಪಸ್ಥಿತರಿದ್ದರು.

# ಬ.ಸಾಲವಾಡಗಿ ಗ್ರಾಪಂ ಮತ್ತೆ ಜೆಡಿಎಸ್ ತೆಕ್ಕೆಗೆ

## ನೂತನ ಅಧ್ಯಕ್ಷೆಯಾಗಿ ಕಸ್ತೂರಿಬಾಯಿ ಅವಿರೋಧ ಆಯ್ಕೆ

**ತಾಳಿಕೋಟೆ:** ತಾಲೂಕಿನ ಬ.ಸಾಲವಾಡಗಿ ಗ್ರಾಮದ ಗ್ರಾಂ ಪಂಚಾಯ್ತಿಯ ಅಧ್ಯಕ್ಷ ಆಯ್ಕೆ ಕುರಿತು ಇಂದು ಮಂಗಳವಾರರಂದು ನಡೆದ ಚುನಾವಣೆಯಲ್ಲಿ ಶ್ರೀಮತಿ ಕಸ್ತೂರಿಬಾಯಿ ದೇ. ಬಿದರಕುಂದಿ ಅವರು ಅವಿರೋಧವಾಗಿ ಆಯ್ಕೆಗೊಳ್ಳುವ ಮೂಲಕ ಬ.ಸಾಲವಾಡಗಿ ಗ್ರಾಂಪಂ ಮತ್ತೋಮ್ಮೆ ಜೆಡಿಎಸ್ ತೆಕ್ಕೆಗೆ ಸಿಕ್ಕಿದೆ.

ಈ ಹಿಂದೆ ಅಧ್ಯಕ್ಷರಾಗಿದ್ದ ಶ್ರೀಮತಿ ಸಂಗೀತಾ ಶಾಂ ಬರದೇನಾಳ ಅವರ ರಾಜೀನಾಮೆಯಿಂದ ತೆರವಾಗಿದ್ದ ಈ ಅಧ್ಯಕ್ಷ ಸ್ಥಾನದ ಚುನಾವಣೆಗೆ ಶ್ರೀಮತಿ ಕಸ್ತೂರಿಬಾಯಿ ದೇ ಬಿದರಕುಂದಿ ಅವರೊಬ್ಬರೇ ನಾಮ ಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆಂದು ಚುನಾವಣಾಧಿಕಾರಿಗಳು ಘೋಷಿಸಿದರು.

ಚುನಾವಣೆ ಪ್ರಕ್ರೀಯೇಯಂತೆ ನಾಮ ಪತ್ರ ಸಲ್ಲಿಕೆಗೆ ಹಾಗೂ ಪರಿಶೀಲನೆ ನಂತರ ಅವಿರೋಧವಾಗಿ ಆಯ್ಕೆ ಘೋಷಣೆಯೂ ಜರುಗಿತು.ಈ ಚುನಾವಣಾ ಪ್ರಕ್ರೀಯೇಯಲ್ಲಿ ಸದಸ್ಯರುಗಳಾದ ಗೌಡಪ್ಪಗೌಡ ರಾರಡ್ಡಿ, ಗುರುನಾಥ ಬಿಳೇಭಾವಿ, ವಿಶ್ವನಾಥ ಜಹಾಗೀರದಾರ,



ಬಸ್ಸಮ್ಮ ಗುಜ್ಜಲ, ಮಲ್ಲನಗೌಡ ಹೋಸಮನಿ, ಅನೀತಾ ಪಾಟೀಲ, ಕಾಶಪ್ಪ ಚಲವಾದಿ, ಮಲ್ಲಣ್ಣ ಕೇಸಾಪೂರ, ಭೋರಮ್ಮ ಪೂಜಾರಿ, ಮಲಕಾಜಪ್ಪ ತಿಂಥಣಿ, ಸಂಗೀತಾ ಬರದೇನಾಳ, ಕಾಶಿಬಾಯಿ ಹಳ್ಳಿ, ಲಕ್ಷ್ಮೀಂಬಾಯಿ ಕೇಂಚಾಗೋಳ, ಯಮನಪ್ಪ ಹೊರಗಿನಮನಿ, ಅವರು ಪಾಲ್ಗೊಂಡಿದ್ದರು. ಚುನಾವಣಾ ಪ್ರಕ್ರೀಯೇಯಲ್ಲಿ ಪಿಡಿಓ ಸಿ.ಎಸ್. ಮಠ, ಕಾರ್ಯದರ್ಶಿ ಎಸ್.ಜಿ.ಅಲ್ಲಾಪೂರ, ಅವರು ಕಾರ್ಯನಿರ್ವಹಿಸಿದರು.

**ವಿಜಯೋತ್ಸವ:** ಬ.ಸಾಲವಾಡಗಿ ಗ್ರಾಂಪಂ ನೂತನ ಅಧ್ಯಕ್ಷೆಯಾಗಿ ಶ್ರೀಮತಿ ಕಸ್ತೂರಿಬಾಯಿ ಬಿದರಕುಂದಿ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದರಿಂದ ಮುಖಂಡರುಗಳು ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಪಟಾಕ್ಷೀ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಮುಖಂಡರುಗಳಾದ ಎಂ.ಎಂ.ಪಾಟೀಲ, ರಾಜುಗೌಡ ಕೊಳೂರ, ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ, ಗುರುಗೌಡ ಗುರಡ್ಡಿ, ರಾಜುಗೌಡ ಯಾಳಗಿ, ಕುಮಾರ ಅನಂತರಡ್ಡಿ, ಸಾಹೇಬಗೌಡ ರಾರಡ್ಡಿ, ಮಲ್ಲನಗೌಡ ಯಾಳಗಿ, ಮಲ್ಲನಗೌಡ ಕಾರಲಕುಂಟಿ, ನಿಂಗಣ್ಣ ಕೇಸರಟ್ಟಿ, ಶಿವು ಕಡಕಲ್ಲ, ನಿಂಗಣ್ಣ ಕುಳಗೇರಿ, ಒಳಗೊಂಡು ಬಿಳೇಭಾವಿ, ಬ.ಸಾಲವಾಡಗಿ, ಗುಂಡಕನಾಳ ಗ್ರಾಮದ ಮುಖಂಡರು, ಕಾರ್ಯಕರ್ತರು ಇದ್ದರು.

## ಗ್ರಾ.ಪಂ.ಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ /ಖಾಲಿ ಉಳಿದಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ : ವೇಳಾ ಪಟ್ಟಿ ಪ್ರಕಟ

ಗದಗ : ರಾಜ್ಯ ಚುನಾವಣಾ ಆಯೋಗದ ಆದೇಶದನ್ವಯ ಗದಗ ಜಿಲ್ಲೆಯ ಲಕ್ಕುಂಡಿ–2, ಕೊಂಚಿಗೇರಿ, ರಣತೂರ, ವಡವಿ, ಇಟಗಿ, ಡಂಬಳ, ಕದಾಂಪೂರ, ಕೊತಬಾಳ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ / ಖಾಲಿ ಉಳಿದಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ಜರುಗಿಸಲು ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದೆ.

ಚುನಾವಣಾ ಅಧಿಸೂಚನೆ ಹೊರಡಿಸುವ ದಿನಾಂಕ ನವೆಂಬರ್ 6 ಆಗಿದ್ದು ನವೆಂಬರ್ 12 ರೊಳಗೆ ನಾಮಪತ್ರಗಳನ್ನು ಸಲ್ಲಿಸಬಹುದಾಗಿದೆ. ನಾಮಪತ್ರಗಳನ್ನು ನವೆಂಬರ್ 13 ರಂದು ಪರಿಶೀಲಿಸಲಾಗುವುದು. ನವೆಂಬರ್ 15 ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನವಾಗಿದ್ದು ಮತದಾನವನ್ನು ನವೆಂಬರ್ 23 ರಂದು ಬೆ. 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಮತಗಳ ಎಣಿಕೆಯು ನವೆಂಬರ್ 26 ರಂದು ಬೆ 8 ಗಂಟೆಯಿಂದ ನಡೆಯಲಿದ್ದು ಅದೇ ದಿನ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ.

ಚುನಾವಣೆ ನಡೆಯುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಚುನಾವಣಾ ನೀತಿ ಸಂಹಿತೆಯು ನವೆಂಬರ್ 6 ರಿಂದ ಜಾರಿಯಲ್ಲಿ ಬರಲಿದ್ದು ನವೆಂಬರ್ 26 ರವರೆಗೆ ಜಾರಿಯಲ್ಲಿರುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದ್ದಾರೆ.

# 15 ರಂದು ಪರಿಶಿಷ್ಟರ ಕಲ್ಯಾಣ ಸಮಿತಿ ಸಭೆ : ಡಿಸಿ ಜಾನಕಿ



ಬಾಗಲಕೋಟೆ : ಕರ್ನಾಟಕ ರಾಜ್ಯ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಹಾಗೂ ಸದಸ್ಯರು ನ.15 ರಂದು ಜಿಲ್ಲೆಗೆ ಭೇಟಿ ನೀಡಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನೆ ನಡೆಸಲಿದ್ದು, ಎಲ್ಲಾ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ದತೆಯಲ್ಲಿರಬೇಕು ಎಂದು ಜಿಲ್ಲಾಧಿಕಾರಿ ಜಾನಕಿ ಕೆ. ಎಂ.ಸೂಚಿಸಿದರು.

ಜಿಲ್ಲಾ ಪಂಚಾಯತ್ ಹಳೆಯ ಸಭಾಂಗಣದಲ್ಲಿ ಮಂಗಳವಾರ ಸಂಜೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯ ಪೂರ್ವಸಿದ್ದತೆ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಜಿಲ್ಲೆಯಲ್ಲಿರುವ ಎಲ್ಲಾ ಇಲಾಖೆಗಳಲ್ಲಿನ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ ಕಾರ್ಯಕ್ರಮಗಳು ಮತ್ತು ಎಸ್ಸಿಪಿ ಹಾಗೂ ಟಿಎಸ್‌ಪಿ ಯೋಜನೆಗಳಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳು, ವಿವಿಧ ಯೋಜನೆಗಳ ಕುರಿತು ಪ್ರಶ್ನಾವಳಿಗಳ ರೀತಿಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಲಿದ್ದು, ಎಲ್ಲಾ ಇಲಾಖೆಯ ಅಧಿಕಾರಿಗಳು ನಿಖರವಾದ ಮಾಹಿತಿಯನ್ನು ಮತಕ್ಷೇತ್ರವಾರು ರೀತಿಯಲ್ಲಿ ತಯಾರಿ ಹೊಂದಿರಬೇಕು ಎಂದು ಹೇಳಿದರು.

ಪರಿಶಿಷ್ಟರ ಕಲ್ಯಾಣ ಸಮಿತಿಯ ಸಭೆಗೆ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಕಟ್ಟಾಯವಾಗಿ ಹಾಜರಾಗಿ ಸಮಿತಿಯು ಕೇಳುವ ಎಲ್ಲ ಮಾಹಿತಿಯನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು.

ಸಮಿತಿಯ ಸಭೆ ನಡೆಸಲು ಸೂಕ್ತ ವ್ಯವಸ್ಥೆ ಮಾಡುವುದರ ಜೊತೆಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಲು ಅವಶ್ಯವಿರುವ ಎಲ್ಲಾ ರೀತಿಯ ಶಿಷ್ಟಾಚಾರ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶರಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಮಾತನಾಡಿ ಆಯಾ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದವರಿಗೆ ಇರುವ ಸೌಲಭ್ಯಗಳು ಯಾವವು, ಅನುದಾನ ಬಂದಿದ್ದು ಎಷ್ಟು ಹಾಗೂ ಬಳಕೆಯಾದ ಮತ್ತು ಉಳಿದಿರುವ ಅನುದಾನ ಮತ್ತು ಅಂಕಿ ಅಂಶಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಇಟ್ಟುಕೊಂಡಿರಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಮಾತನಾಡಿ ಸುಳ್ಳು ಜಾತಿ ಪ್ರಕರಣಗಳು, ದಲಿತ ಸಮುದಾಯದವರ ಮೇಲೆ ಹಲ್ಲೆ ಅಥವಾ ಬಹಿಷ್ಕಾರ ಮಾಡಿರುವ ಪ್ರಕರಣಗಳ ಕುರಿತು ಮಾಹಿತಿ ಕೇಳುವದರಿಂದ ಪೂರ್ವಸಿದ್ದತೆ ಸರಿಯಾಗಿ ಮಾಡಿಕೊಳ್ಳಿ ಅನಗತ್ಯವಾದ ಗೊಂದಲವನ್ನು ಸೃಷ್ಟಿಸಿಕೊಳ್ಳದೆ ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರುತ್ರೇನ ಪಿ. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಚೂರು–ಪಾರು

## ಮಕ್ಕಳ ದಿನಾಚರಣೆಯ ಪ್ರಯುಕ್ತ ವಿವಿಧ ಸ್ಪರ್ಧೆ

ಕಾರವಾರ – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸೊಸೈಟಿಯ ಸಹಯೋಗದಲ್ಲಿ 2024–25 ನೇ ಸಾಲಿನ ಮಕ್ಕಳ ದಿನಾಚರಣೆಯ ನಿಮಿತ್ತ 5 ರಿಂದ 16 ವರ್ಷದ ವಯೋಮಾನದ ಮಕ್ಕಳಿಗಾಗಿ ಸೃಜನಾತ್ಮಕ ಪ್ರದರ್ಶನ ಕಲೆಗಳಾದ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಸ್ಪರ್ಧೆ, ವಾದ್ಯ ಸಂಗೀತ, ತಬಲಾ, ಮೃದಂಗ, ಕೀಬೋರ್ಡ್, ಕೊಳಲು, ಡೊಳ್ಳು ಮತ್ತು ನಗಾರಿ ಸ್ಪರ್ಧೆ, ವಿಜ್ಞಾನದಲ್ಲಿ ಸೃಜನಾತ್ಮಕ ಅವಿಷ್ಕಾರ, ಚಿತ್ರಕಲಾ ಸ್ಪರ್ಧೆ ಹಾಗೂ ವಿಶೇಷ ಮಕ್ಕಳಿಗಾಗಿ ಸ್ಪರ್ಧೆಗಳನ್ನು ನ.8 ರಂದು ಬೆಳಿಗ್ಗೆ 10 ಗಂಟೆಗೆ ಸ್ತ್ರೀಶಕ್ತಿ ಭವನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರವಾರದಲ್ಲಿ ಆಯೋಜಿಸಲಾಗಿದೆ.

ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವ ಮಕ್ಕಳು ತಮ್ಮ ಅರ್ಜಿಯನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ನ.6 ರೊಳಗಾಗಿ ಸಲ್ಲಿಸಬೇಕು.

ಅರ್ಜಿಯ ಜೊತೆಗೆ ಜನ್ಮ ದಿನಾಂಕ ದೃಢೀಕರಣ ಪ್ರಮಾಣ ಪತ್ರ ಲಗತ್ತಿಸುವುದು ಹಾಗೂ ಭಾಗವಹಿಸುವ ಸ್ಪರ್ಧಾ ಕ್ಷೇತ್ರದ ಹೆಸರನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆ ತಿಳಿಸಿದ್ದಾರೆ.

# ಪಂಚಾಯತ್ ರಾಜ್ ಇಲಾಖೆಯಲ್ಲಿ ಸಲ್ಲಿಸಿದ ಗಣನೀಯ ಸೇವೆಗೆ ಜಿಲ್ಲಾ ಮಟ್ಟದ ಪ್ರಶಸಿ




ಕಾರವಾರ – ಉತ್ತರ ಕನ್ನಡ ಜಿಲ್ಲೆಯ ಪಂಚಾಯತ್ ರಾಜ್ ಇಲಾಖೆಯಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಜಿಲ್ಲಾ ಪಂಚಾಯತ್ ಯೋಜನ ವಿಭಾಗದ ಮುಖ್ಯ ಯೋಜನಾಧಿಕಾರಿ ವಿನೋದ ವಾಮನ್ ಅನ್ವೇಕರ ಮತ್ತು ಜಿ.ಪಂ. ಆಡಳಿತ ಶಾಖೆಯ ಸಹಾಯಕ ನಿರ್ದೇಶಕ ಸುನೀಲ ಡಿ. ನಾಯ್ಕ ಅವರಿಗೆ ನ.1 ರಂದು ಕಾರವಾರದ ಪೊಲೀಸ್ ಪೆರೇಡ್ ಮೈದಾನದಲ್ಲಿ ನಡೆದ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿನೋದ ವಾಮನ್ ಅನ್ವೇಕರ ಮುಖ್ಯ ಯೋಜನಾಧಿಕಾರಿ ಯೋಜನಾ ವಿಭಾಗ ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ ಇವರು ದಿನಾಂಕ 31/10/1989 ರಂದು ಸಹಾಯಕ ಸಾಂಖ್ಯಿಕ ಅಧಿಕಾರಿ ಆಗಿ ಸರ್ಕಾರಿ ಸೇವೆಗೆ ಸೇರ್ಪಡೆಗೊಂಡಿರುತ್ತಾರೆ. ಪ್ರಸ್ತುತ ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಮುಖ್ಯ ಯೋಜನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಪಂಚಾಯತದ ವಾರ್ಷಿಕ ಕರುಡು ಯೋಜನೆ ಹಾಗೂ ಎಲ್ಲಾ ಇಲಾಖೆಯ ಕ್ರೀಯಾ ಯೋಜನೆಗಳು ಸಿದ್ಧಪಡಿಸಿಕೊಂಡು ಅವುಗಳ ಅನುಮೋದನೆ ನೀಡುವ ಕರ್ತವ್ಯ ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ವಸತಿ ಯೋಜನೆಯ ನೋಡಲ್ ಅಧಿಕಾರಿ ಹಾಗೂ ಹೊನ್ನಾವರ ತಾಲೂಕಾ ಪಂಚಾಯತದ ಆಡಳಿತಾಧಿಕಾರಿಯಾಗಿಯೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮುಂಡಗೋಡ ಮತ್ತು ಜೋಯಿಡಾ ತಾಲೂಕುಗಳು ಕ್ರೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯ ಯೋಜನೆ ಅಡಿಯಲ್ಲಿ ಆಯ್ಕೆಯಾಗಿದ್ದು ಅದರ ಮೇಲ್ವಿಚಾರಣೆ ಸಹ ಮಾಡುತ್ತಿದ್ದಾರೆ. ಸದ್ರಿಯವರಿಗೆ 2022–23 ನೇ ಸಾಲಿನ ಚಿಕ್ಕಬಳ್ಳಾಪುರ ಜಿಲ್ಲೆಯವರು ನೀಡುತ್ತಿರುವ ಕಾಯಕ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸದ್ರಿಯವರು ಹಲವು ಜನರಿಗೆ ಸಹಾಯ ಹಸ್ತ ನೀಡಿ ಇತರರಿಗೆ ಸ್ಫೂರ್ತಿಯಾಗಿರುತ್ತಾರೆ.

ಸುನೀಲ ಡಿ. ನಾಯ್ಕ ಸಹಾಯಕ ನಿರ್ದೇಶಕರು (ಆಡಳಿತ) ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ ರವರು ದಿನಾಂಕ: 06/10/1995 ರಂದು ಸರ್ಕಾರಿ ಸೇವೆಗೆ ಸೇರ್ಪಡೆಗೊಂಡಿರುತ್ತಾರೆ. ಆಡಳಿತಾತ್ಮಕ ವಿಷಯಗಳ ಬಗ್ಗೆ ಉತ್ತಮವಾದ ಜ್ಞಾನವನ್ನು ಹೊಂದಿರುತ್ತಾರೆ. ಸ್ವಚ್ಛ ಭಾರತ ಮಿಷನ್ ಯೋಜನೆಯ ಮೇಲುಸ್ತುವಾರಿ ಜೊತೆಗೆ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಗೊಳಿಸಲು ಪ್ರಮುಖ ಪಾತ್ರವಹಿಸಿರುತ್ತಾರೆ. ವಿಧಾನ ಸಭೆ / ಲೋಕ ಸಭೆ ಚುನಾವಣಾ ಸಂದರ್ಭದಲ್ಲಿ ವಿನೂತನ ಮತದಾನ ಜಾಗೃತಿ ಕಾರ್ಯಕ್ರಮಗಳ ರೋಪರೇಷಗಳನ್ನು ಸಿದ್ಧಪಡಿಸಿ ಕಾರ್ಯಕ್ರಮ ಆಯೋಜನೆ ಮಾಡಿರುತ್ತಾರೆ. ಇದರ ಫಲವಾಗಿ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಃಜಣ ಖತಜಜಣ ಂತಿಚಿಡಿಜ ಪ್ರಶಸ್ತಿ ದೊರೆತಿರುತ್ತದೆ. ಸದ್ರಿಯವರು 30/09/2020 ರಿಂದ 24/02/2021 ರ ವರೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ಆಪ್ತ ಸಹಾಯಕರಾಗಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಪ್ರಸ್ತುತ ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಸಹಾಯಕ ನಿರ್ದೇಶಕರು (ಆಡಳಿತ) ಹಾಗೂ ಹೆಚ್ಚುವರಿಯಾಗಿ ಸಹಾಯಕ ಕಾರ್ಯದರ್ಶಿ (ಆಡಳಿತ) ವಿಭಾಗದಲ್ಲಿ ಪ್ರಭಾರವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

## ಶಿರಸಿಯ ಅಂಚೆ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಕಾರವಾರ – ಶಿರಸಿಯ ಅಂಚೆ ವಿಭಾಗದ ವ್ಯಾಪ್ತಿಯಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆಯ ಏಜೆಂಟ್/ಫಿಲ್ಡ್ ಆಫೀಸರ ಸಂದರ್ಶನ ಆಯ್ಕೆ ಪ್ರಕ್ರಿಯೆಯು ನ.13 ರಂದು ನಡೆಯಲಿದೆ.

ಆಸಕ್ತ ಅಭ್ಯರ್ಥಿಗಳು ಸ್ವವಿವರ, ಇತ್ತೀಚಿನ ಭಾವಚಿತ್ರ, ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯೊಂದಿಗೆ ನ.13 ರಂದು ಬೆಳಗ್ಗೆ 11 ಗಂಟೆಗೆ ಹೊಸ ಮಾರುಕಟ್ಟೆ ಆವರಣದಲ್ಲಿರುವ ಶಿರಸಿ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಹಾಜರಿರತಕ್ಕದ್ದು.

ಡೈರೆಕ್ಸ್ ಏಜೆಂಟ್: ಅಭ್ಯರ್ಥಿಗಳು 10 ನೇ ತರಗತಿ ಉತ್ತೀರ್ಣರಾಗಿದ್ದು, ಕಡ್ಡಾಯವಾಗಿ 18 ವರ್ಷ ಮೇಲ್ಪಟ್ಟವರಾಗಿರಬೇಕು. ನಿರುದ್ಯೋಗಿ ಹಾಗೂ ಸ್ವಯಂ ಉದ್ಯೋಗ ನಿರತ ಯುವಕರು, ವಿಮಾ ಕಂಪನಿಗಳ ಮಾಜಿ ಏಜೆಂಟ್‌ರು ಹಾಗೂ ಸಲಹೆಗಾರರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ಮಾಜಿ ಸೈನಿಕರು, ನಿವೃತ್ತ ಪ್ರಧಾನ ಮತ್ತು ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡುಬಂದ ಯಾವುದೇ ಅಭ್ಯರ್ಥಿಗಳಿಗೆ ಆಯ್ಕೆಯಾದ ಪಕ್ಷದಲ್ಲಿ ಅವಕಾಶ ನೀಡಲಾಗುವುದು.

ಫೀಲ್ಡ್ ಆಫೀಸರ್ : ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿವೃತ್ತ ನೌಕರರಾಗಿರಬೇಕು. ಅಯ್ಕೆಯಾದ ಅಭ್ಯರ್ಥಿಗಳು ರೂ.5000/–ಗಳನ್ನು ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಕಿಸಾನ ವಿಕಾಸ ಪತ್ರದ ರೂಪದಲ್ಲಿ ಭದ್ರತಾ ಠೇವಣಿಯನ್ನು ಇಡಬೇಕಾಗುತ್ತದೆ. ಆಯ್ಕೆಯಾದ ನೇರ ಪ್ರತಿನಿಧಿಗಳಿಗೆ ಅವರು ಮಾಡಿದ ವ್ಯವಹಾರಕ್ಕೆ ತಕ್ಕಂತೆ ಇಲಾಖೆಯು ಕಾಲ ಕಾಲಕ್ಕೆ ನಿಗದಿಪಡಿಸಿದಂತೆ ಸೂಕ್ತ ಕಮೀಶನ ನೀಡಲಾಗುವುದು. ನಿಗದಿತ ವೇತನವು ಇರುವುದಿಲ್ಲ. ಅಭ್ಯರ್ಥಿಗಳು ಬೇರೆ ಯಾವುದೇ ವಿಮಾ ಕಂಪನಿ/ಸಂಸ್ಥೆ/ಸಂಘಗಳ ಏಜೆಂಟ್ ಆಗಿರಬಾರದು.

ಹೆಚ್ಚಿನ ಮಾಹಿತಿಗಾಗಿ PLI Development Officer, Sirsi 6362609961 ಕಛೇರಿಯನ್ನು ಹಾಗೂ ವೆಬ್ ಸೈಟ್ www.postalllfeinsurance.gov.in ನ್ನು ಸಂಪರ್ಕಿಸುವಂತೆ ಶಿರಸಿ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಜೇಂದ್ರಗಡ ತಹಶೀಲ್ದಾರಗೆ ನಿಂದನೆ, ಕರ್ತವ್ಯಕ್ಕೆ ಅಡ್ಡಿ



ಗದಗ: ಸೋಮವಾರ (ನ.4) ಗಜೇಂದ್ರಗಡದಲ್ಲಿ ನಡೆದ ಬಿಜೆಪಿ ಪ್ರತಿಭಟನೆ ವೇಳೆ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಲು ಆಗಮಿಸಿದ ತಾಲ್ಲೂಕು ದಂಡಾಧಿಕಾರಿಗಳೂ ಆಗಿರುವ ತಹಶೀಲ್ದಾರ ಕಿರಣಕುಮಾರ ಕುಲಕರ್ಣಿ ಅವರನ್ನು ಸಾರ್ವಜನಿಕವಾಗಿಯೇ ವೈಯಕ್ತಿಕವಾಗಿ ಏಕವಚನದಿಂದ ನಿಂದಿಸಿದ ಮಾಜಿ ಶಾಸಕ ಕಳಕಪ್ಪ ಬಂಡಿ ಅವರ ನಡೆಯನ್ನು ಕರ್ನಾಟಕ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘದ ಗದಗ ಜಿಲ್ಲಾ ಘಟಕ ತೀವ್ರವಾಗಿ ಖಂಡಿಸಿದೆ.

ಈ ಕುರಿತು ಸಂಘದ ಜಿಲ್ಲಾಧ್ಯಕ್ಷ ಡಿ.ಟಿ. ವಾಲ್ಮೀಕಿ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ವಕ್ಫ್ ನಡೆ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗೆ ಕರೆ ನೀಡಿತ್ತು. ಇದರ ಭಾಗವಾಗಿ ಗಜೇಂದ್ರಗಡದಲ್ಲೂ ಪ್ರತಿಭಟನೆ ನಡೆದಿದೆ.

ಆದರೆ, ಪ್ರತಿಭಟನೆ ನಂತರ ಮನವಿ ಸ್ವೀಕರಿಸಲು ಆಗಮಿಸಿದ ತಾಲ್ಲೂಕು ದಂಡಾಧಿಕಾರಿಗಳೂ ಆಗಿರುವ ತಹಶೀಲ್ದಾರ ಕಿರಣಕುಮಾರ ಕುಲಕರ್ಣಿ ಅವರನ್ನು ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಾಜಿ ಶಾಸಕ ಕಳಕಪ್ಪ ಬಂಡಿ ಅವರು ಸಾರ್ವಜನಿಕವಾಗಿಯೇ ವೈಯಕ್ತಿಕವಾಗಿ ಏಕವಚನದಿಂದ ನಿಂದಿಸಿದ್ದಾರೆ. ಅಷ್ಟೇ ಅಲ್ಲ, ಈ ಮೂಲಕ ಕಂದಾಯ ಇಲಾಖೆಯ ಅಧಿಕಾರಿ/ನೌಕರರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ತೊಂದರೆಯುಂಟು ಮಾಡಿದ್ದಾರೆ.

ಕಂದಾಯ ಇಲಾಖೆ ನೌಕರರು ನಿತ್ಯ ಸಾರ್ವಜನಿಕರ ಮಧ್ಯೆಯೇ ಕರ್ತವ್ಯ ನಿರ್ವಹಿಸುತ್ತಾರೆ. ಒಂದು ಜವಾಬ್ದಾರಿಯುತ ವ್ಯಕ್ತಿ ಈ ರೀತಿ ನಡೆದುಕೊಂಡಿದ್ದು ದುರ್ದೈವದ ಸಂಗತಿ. ಈ ಘಟನೆಯಿಂದ ಕಂದಾಯ ಇಲಾಖೆ ನೌಕರರಿಗೆ ಒಂದು ರೀತಿಯ ಭಯ ಶುರುವಾಗಿದೆ.

ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಅಧಿಕಾರಿ/ನೌಕರರಿಗೆ ತೊಂದರೆ ನೀಡಿ, ನಿಷ್ಪಕ್ಷಪಾತವಾಗಿ ಸರ್ಕಾರಿ ಕರ್ತವ್ಯ ನಿರ್ವಹಿಸಲು ಮಾನಸಿಕವಾಗಿ ಮತ್ತು ನೈತಿಕವಾಗಿ ಕುಗ್ಗಿಸುವ ರೀತಿಯಲ್ಲಿ ನಡೆದುಕೊಂಡಿದ್ದು ಖೇದಕರ. ಪ್ರತಿದಿನ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವ ಇಲಾಖೆಯ ಅಧಿಕಾರಿ ಹಾಗೂ ನೌಕರರಿಗೆ ಸೂಕ್ತ ರಕ್ಷಣೆಯನ್ನು ಒದಗಿಸಬೇಕು. ಜೊತೆಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ತೊಂದರೆಯುಂಟು ಮಾಡಿದ ಮಾಜಿ ಶಾಸಕ ಕಳಕಪ್ಪ ಬಂಡಿ ಅವರ ವಿರುದ್ಧ ಸಕಾರದ ನಿಯಮದನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ

ಮನವಿಯನ್ನು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಗದಗ ತಹಶೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಕರ್ನಾಟಕ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘದ ಗದಗ ಜಿಲ್ಲಾ ಘಟಕದ ಗೌರವ ಅಧ್ಯಕ್ಷ ಎಸ್. ಎಂ. ಹಿರೇಮಠ, ಪ್ರಧಾನ ಕಾರ್ಯದರ್ಶಿ ಎಫ್. ಎಸ್. ಗೌಡರ, ಉಪಾಧ್ಯಕ್ಷರಾದ ಬಿ. ಎಸ್. ಕನ್ನೂರ, ಎಂ.ಎ. ನದಾಫ, ಖಜಾಂಚಿ ಕೆ. ಎಚ್. ಓಲೇಕಾರ, ಸಲಹಾ ಸಮಿತಿ ಅಧ್ಯಕ್ಷ ಎನ್. ಐ. ದೊಡ್ಡಮನಿ, ರಾಜ್ಯ ಪರಿಷತ್ ಸದಸ್ಯರಾದ ಎಸ್. ಎಸ್. ಕಡಗದ, ಬಿ. ವಿ. ಕಾಸಾರ, ಜಂಟಿ ಕಾರ್ಯದರ್ಶಿ ಎಂ. ವಿ. ಪೊಲೀಸಪಾಟೀಲ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್. ಸಿ. ಹೊಸಕೋಟಿ, ಮಹಿಳಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಜಿ. ಬಿ.ಆನಂದಪ್ಪನವರ, ಸಾಂಸ್ಕೃತಿಕ ಕಾರ್ಯದರ್ಶಿ ಜೆ. ಪಿ. ಪಾಟೀಲ, ಕ್ರೀಡಾ ಕಾರ್ಯದರ್ಶಿ ಜೆ. ಎಚ್. ಭಜಂತ್ರಿ, ಆರ್. ವಾಯ್. ವಿಕ್ರಂ, ಸಹ–ಕಾರ್ಯದರ್ಶಿಗಳಾದ ವಿವೇಕ ಎಸ್. ಡಿಸ್ಲೆ, ಶ್ರೀಮತಿ ಎಸ್. ಎ. ಪಾಟೀಲ, ಅರುಣಗೌಡ ಬಿ. ಮಂಟೂರ ಸೇರಿ ಅನೇಕರು ಇದ್ದರು.

## ಬ್ಯಾಟರಿ ಚಾಲಿತ ವ್ಹೀಲ್ ಚೇರ್ ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನ

ಕೊಪ್ಪಳ : 2024–25ನೇ ಸಾಲಿನಲ್ಲಿ ಜಿಲ್ಲಾ ವ್ಯಾಪ್ತಿಯ ದೈಹಿಕ ವಿಕಲಚೇತನರಿಗೆ ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ನೀಡಲಾಗುತ್ತಿದ್ದು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಫಲಾನುಭವಿಗಳು ಶೇ.75 ಮತ್ತು ಅದಕ್ಕಿಂತ ಹೆಚ್ಚಿನ ದೈಹಿಕ ವಿಕಲತೆ ಹೊಂದಿದ್ದು, ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಸಾಮರ್ಥ್ಯ ಹೊಂದಿರದ ಹಾಗೂ ಕನಿಷ್ಠ ಒಂದು ಕೈ, ಒಂದು ಕಣ್ಣು ಸಾಧೀನದಲ್ಲಿದ್ದು ಹಾಗೂ ಬ್ಯಾಟರಿಚಾಲಿತ ವ್ಹೀಲ್ ಚೇರ್ ಚಲಾಯಿಸಲು ಇತರೇ ಎಲ್ಲಾ ರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು.

ದೈಹಿಕ ವಿಕಲಚೇತನರಿಗೆ ಜೀವಿತ ಕಾಲದಲ್ಲಿ ಒಂದು ಬಾರಿ ಇಲಾಖೆಯಿಂದ ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ನೀಡಲಾಗುತ್ತದೆ. ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2 ಲಕ್ಷದ ಒಳಗಿರಬೇಕು. ಸರ್ಕಾರದಿಂದ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಪಡೆದಿರಬಾರದು. ಇತರೆ ಇಲಾಖೆಗಳಿಂದ ಅಥವಾ ಸಂಘ ಸಂಸ್ಥೆಗಳಿಂದ ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ಪಡೆದಿರಬಾರದು.

ಅರ್ಹ ಫಲಾನುಭವಿಗಳು ಯು.ಡಿ.ಐ.ಡಿ ಕಾರ್ಡ್, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ (ಕನಿಷ್ಟ 10 ವರ್ಷ), 2 ಭಾವಚಿತ್ರಗಳು, ಈ ಹಿಂದೆ ಇತರೆ ಇಲಾಖೆಗಳಲ್ಲಿ ಅಥವಾ ಸಂಘ ಸಂಸ್ಥೆಗಳಿಂದ ಬ್ಯಾಟರಿ ಚಾಲಿತ ವ್ಹೀಲ್ ಚೇರ್ ಹಾಗೂ ಯಂತ್ರಚಾಲಿತ ದ್ವಿಚಕ್ರ ವಾಹನ ಪಡೆದಿಲ್ಲವೆಂದು ರೂ.100 ಛಾಪಾ ಕಾಗದ ನೋಟರಿ ದೃಢೀಕರಣ ಪ್ರಾಮಾಣ ಪತ್ರ, ಆದಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬಿಪಿಎಲ್ ಕಾರ್ಡ್ಗಳೊಂದಿಗೆ ನವೆಂಬರ್ 22 ರೊಳಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಕೊಪ್ಪಳ ಇವರ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ತಾಲೂಕು ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂ.ಆರ್.ಡಬ್ಲ್ಯೂಗಳನ್ನು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಆರ್.ಡಬ್ಲ್ಯೂಗಳನ್ನು ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿ.ಆರ್.ಡಬ್ಲ್ಯೂಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.14ರಿಂದ 16ರವರೆಗೆ ಕರ್ನಾಟಕ ವಿಧಾನಮಂಡಲದ ಸಮಿತಿಯಿಂದ ಅಧ್ಯಯನ ಪ್ರವಾಸ
## ಎಸ್ಸಿ-ಎಸ್ಟಿ ಸಮುದಾಯದ ಅಭಿವೃದ್ಧಿಗೆ ಹಮ್ಮಿಕೊಂಡ ಯೋಜನೆ-ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ




ವಿಜಯಪುರ : ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಇದೇ ನ.14ರಿಂದ 16ರವರೆಗೆ ಬೆಳಗಾವಿ ವಿಭಾಗದ ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ಕೈಗೊಂಡು ಈ ಜಿಲ್ಲೆಗಳಲ್ಲಿ ಎಸ್ಸಿ–ಎಸ್ಟಿ ಸಮುದಾಯದವರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆ–ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲಿದೆ.

ಪಿ.ಎಂ.ನರೇಂದ್ರಸ್ವಾಮಿಯವರ ಅಧ್ಯಕ್ಷತೆಯಲ್ಲಿರುವ ಸಮಿತಿಯಲ್ಲಿ ಸದಸ್ಯರುಗಳಾದ ರಮೇಶ ಜಾರಕಿಹೊಳಿ, ಡಾ.ಎಂ.ಚಂದ್ರಪ್ಪ, ದುರ್ಯೋಧನ ಐಹೊಳೆ, ಜಿ.ಹಂಪಯ್ಯ ನಾಯಕ್ ಬಲ್ಲಟಗಿ, ಎಸ್.ಎಸ್.ಸುಬ್ಬಾರೆಡ್ಡಿ, ಬಸನಗೌಡ ತುರುವಿಹಾಳ್, ಅಬ್ಬಯ್ಯ ಪ್ರಸಾದ್, ಬಸವರಾಜ್ ಮತ್ತಿಮುಡ, ನೇಮಿರಾಜ್ ನಾಯ್ಕ, ಎನ್.ಶ್ರೀನಿವಾಸಯ್ಯ, ಬಿ.ದೇವೇಂದ್ರಪ್ಪ, ಕೆ.ಸಿ.ವಿರೇಂದ್ರ ಪಪ್ಪಿ, ಕೃಷ್ಣಾ ನಾಯ್ಕ ಕೆ., ಕೆ.ಎಸ್.ಬಸವಂತಪ್ಪ, ಎನ್.ರವಿಕುಮಾರ, ಡಾ.ಡಿ.ತಿಮ್ಮಯ್ಯ, ರಾಜೇಂದ್ರ ರಾಜಣ್ಣ, ಸಿ.ಎನ್.ಮಂಜೇಗೌಡ, ಶ್ರೀಮತಿ ಹೇಮಲತಾ ನಾಯಕ್ ಸೇರಿದಂತೆ ಅಧಿಕಾರಿಗಳನ್ನೊಳಗೊಂಡ ತಂಡ, ನ.14ರಂದು ಧಾರವಾಡ ಜಿಲ್ಲೆಗೆ ಭೇಟಿ ನೀಡಿ, ಅಂದು ಬೆಳಿಗ್ಗೆ 10–30ಕ್ಕೆ ಗದಗ ಜಿಲ್ಲೆಯ ಹಾಗೂ ಮಧ್ಯಾಹ್ನ 2–30 ಗಂಟೆಗೆ ಧಾರವಾಡ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ನ.15ರಂದು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿ ಬಾಗಲಕೋಟೆ ಜಿಲ್ಲೆಯಲ್ಲಿ ಬೆಳಿಗ್ಗೆ 10–30ಕ್ಕೆ ವಿಜಯಪುರ ಜಿಲ್ಲೆಯ ಹಾಗೂ ಮಧ್ಯಾಹ್ನ 2–30ಕ್ಕೆ ಬಾಗಲಕೋಟೆ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ನ.16ರಂದು ಬೆಳಗಾವಿಗೆ ಭೇಟಿ ನೀಡಲಿರುವ ತಂಡ, ಬೆಳಿಗ್ಗೆ 10–30ರಿಂದ 1–30ರವರೆಗೆ ಹಾಗೂ ಮಧ್ಯಾಹ್ನ 2–30ಗಂಟೆ ಸುವರ್ಣ ವಿಧಾನಸೌಧದ 3ನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಲಿದೆ.

ಸಮಿತಿಯು ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯ ಎಲ್ಲಾ ಇಲಾಖೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ ಕಾರ್ಯಕ್ರಮಗಳು ಹಾಗೂ ಎಸ್‌ಸಿಪಿ–ಟಿಎಸ್‌ಪಿ ಯೋಜನೆಗಳಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳು ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ನಡೆಸಲಿದೆ.

## ಅನುಸೂಚಿತ ಜಾತಿ ಮತ್ತು ಪಂಗಡ ಉಪ ಹಂಚಿಕೆ ಯೋಜನೆಯಲ್ಲಿ 100% ಗುರಿ ಸಾಧಿಸಿ : ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ



ಕಾರವಾರ – ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲಾ ಇಲಾಖೆಗಳಲ್ಲಿ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಅನುಸೂಚಿತ ಪಂಗಡ ಉಪ ಹಂಚಿಕೆ ಯೋಜನೆಯಡಿ ಮೀಸಲಿಟ್ಟಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡುವುದರ ಮೂಲಕ, ಯೋಜನೆಯಲ್ಲಿ ಸಂಪೂರ್ಣ ಗುರಿ ಸಾಧಿಸಿ, ಈ ಯೋಜನೆಯ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ, ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಅನುಸೂಚಿತ ಪಂಗಡ ಉಪ ಹಂಚಿಕೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲಾ ಇಲಾಖೆಗಳು ಈ ಯೋಜನೆಯಡಿ ಮೀಸಲಿಟ್ಟಿರುವ ಅನುದಾನದಲ್ಲಿ ಪ.ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರ ಅಭಿವೃದ್ಧಿಗೆ ನೆರವು ನೀಡಬೇಕು. ಫಲಾನುಭವಿ ಆಧಾರಿತ ಯೋಜನೆಗಳು ಮತ್ತು ಸಮುದಾಯದ ಹಂತದಲ್ಲಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಯಾವುದೇ ದೂರುಗಳು ಬಾರದಂತೆ ಪಾರದರ್ಶಕವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ನಿಗಧಿತ ಅವಧಿಯೊಳಗೆ ಸೌಲಭ್ಯಗಳನ್ನು ದೊರಕಿಸುವಂತೆ ಸೂಚಿಸಿದರು.

ಯೋಜನೆಯಡಿ ಇದುವರೆಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಶೇ.100 ಗುರಿ ಸಾಧಿಸುವಂತೆ ಹಾಗೂ ಮತ್ತು ಯಾವುದೇ ಕಾರಣಕ್ಕೂ ಅನುದಾನವನ್ನು ವ್ಯರ್ಥ ಮಾಡದಂತೆ ತಿಳಿಸಿದ ಅವರು, ಇಂಜಿನಿಯರಿಂಗ್ ವಿಭಾಗಗಳಲ್ಲಿ ಕಳೆದ ಸಾಲಿನಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಮುಕ್ತಾಯಗೊಳಿಸಬೇಕು.

ಯೋಜನೆಯ ಪ್ರಗತಿ ಕುರಿತಂತೆ ಪ್ರತೀ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುವುದು ಎಂದರು.

# ನೋಡಿ ಈ ಸಿಂಪಲ್ ಫೇಸ್ ಮಾಸ್ಕ್ ಪ್ರಯತ್ನಿಸಿ–ಮುಖ ಬೆಳ್ಳಗಾಗುವುದು!



ನಿಮಗೆ ಸಾಮಾನ್ಯವಾಗಿ ಎದುರಾಗುವ ತ್ವಚೆಯ ವಿವಿಧ ತೊಂದರೆಗಳಿಂದ ಮುಕ್ತಿ ಪಡೆಯಲು ಸಂಪೂರ್ಣ ಪರಿಹಾರವನ್ನು ಹುಡುಕುತ್ತಿರುವಿರಾ? ಹಾಗಾದರೆ ಈ ಲೇಖನ ನಿಮಗೆ ಅತಿ ಸೂಕ್ತವಾಗಿದ್ದು ನಿಮ್ಮ ಅಡುಗೆ ಮನೆಯಲ್ಲಿ ಲಭ್ಯವಿರುವ ಸುಲಭ ಸಾಮಾಗ್ರಿಗಳನ್ನು ಬಳಸಿ ತಯಾರಿಸುವ ಮುಖಲೇಪದ ಬಳಕೆಯಿಂದ ಬಹುತೇಕ ಎಲ್ಲಾ ತ್ವಚೆಯ ತೊಂದರೆಗಳನ್ನು ಪರಿಹರಿಸಿಕೊಳ್ಳಬಹುದು. ಕಪ್ಪುತಲೆ, ಎಣ್ಣೆಚರ್ಮ, ಮೊಡವೆ, ವಯಸ್ಸಿನ ಪ್ರಭಾವ ತೋರುವ ಸೂಕ್ಷ್ಮ ಗೆರೆಗಳು ಇತ್ಯಾದಿಗಳೆಲ್ಲವೂ ಈ ಮುಖಲೇಪದ ಬಳಕೆಯಿಂದ ಶೀಘ್ರವೇ ಪರಿಹಾರಗೊಳ್ಳಲಿವೆ.

ವಾತಾವರಣದ ಪ್ರದೂಷಣೆ, ಪ್ರಬಲ ಮತ್ತು ಹಾನಿಕರವಾದ ಸೂರ್ಯನ ಅತಿನೇರಳೆ ಕಿರಣಗಳು, ಅತಿಯಾದ ಧೂಮಪಾನ, ಮದ್ಯಪಾನ, ಆರಾಮದಾಯಕ ಜೀವನಶೈಲಿ ಮೊದಲಾದ ಹಲವಾರು ಅಂಶಗಳು ತ್ವಚೆ ಕಳೆಗುಂದಲು ಕಾರಣವಾಗುತ್ತವೆ.

ಇದರ ಪರಿಹಾರಕ್ಕಾಗಿ ಒಂದು ಸುಲಭ ಮುಖಲೇಪವನ್ನು ಇಂದು ಪ್ರಸ್ತುತಪಡಿಸಲಾಗುತ್ತಿದ್ದು ಇದಕ್ಕೆ ಕೇವಲ ಎರಡೇ ಸಾಮಾಗ್ರಿಗಳನ್ನು ಬಳಸಿದರೆ ಸಾಕು. ನೀವು ಸರಿಯಾಗಿಯೇ ಓದಿದಿರಿ, ಕೇವಲ ಎರಡೇ ಸಾಮಾಗ್ರಿಗಳು, ಅದೂ ಎಲ್ಲೆಡೆ ಸುಲಭವಾಗಿ ದೊರಕುವಂತಹದ್ದೇ ಆಗಿದ್ದು ಇದರ ಸರಿಯಾದ ಬಳಕೆಯಿಂದ ನಿಮ್ಮ ತ್ವಚೆಯ ತೊಂದರೆಗಳೆಲ್ಲವೂ ಇಲ್ಲವಾಗಿ ಕಾಂತಿಯುಕ್ತ ಮತ್ತು ಆರೋಗ್ಯಕರ ತ್ವಚೆಯನ್ನು ಪಡೆಯುವಿರಿ.

**ಬನ್ನಿ, ಇವು ಯಾವುವು ಎಂಬುದನ್ನು ನೋಡೋಣ:**

1. ಒಂದೇ ರಾತ್ರಿಯಲ್ಲಿ ತ್ವಚೆಯ ಕಾಂತಿಯನ್ನು ಹೆಚ್ಚಿಸಲು

ಟೊಮಾಟೋದಲ್ಲಿ ವಿಟಮಿನ್ ಎ, ಬಿ.ಮತ್ತು ಸಿ ವಿಪುಲವಾಗಿದೆ. ಇದರಲ್ಲಿ ವಿಟಮಿನ್ ಎ ತ್ವಚೆಯಲ್ಲಿರುವ ಕಲೆಗಳನ್ನು ನಿವಾರಿಸಲು ನೆರವಾಗುವ ಮೂಲಕ ತ್ವಚೆಯ ಕಾಂತಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಹಸಿ ತೆಂಗಿನ ಹಾಲು ತ್ವಚೆಯನ್ನು ಸೌಮ್ಯ ಮತ್ತು ನುಣುಪಾಗಿಸುತ್ತದೆ.

ಈ ತರಕಾರಿಗಳನ್ನು ಹಸಿಯಾಗಿ ಇನ್ನಲೇಬೇಡಿ; ತಿಂದೇ ತಿಂತೀನಿ ಅಂದ್ರೆ ಅನುಭವಿಸಿ! ।

**ಈ ಸಾಮಾಗ್ರಿಗಳ ಪ್ರಮಾಣ:**

ಎರಡು ದೊಡ್ಡ ಚಮಚ ಹಸಿ ತೆಂಗಿನ ಹಾಲು (ತಾಜಾ ತೆಂಗಿನ ತುರಿಯನ್ನು ಕಡೆದು ಹಿಂಡಿ ತೆಗೆದ ಹಾಲು)

ಒಂದು ದೊಡ್ಡ ಚಮಚ ಟೊಮಾಟೋ ರಸ

ಈ 5 ರಾಶಿಯವರು ಫಿಟ್ ನೆಸ್ ಗೆ ಪ್ರಾಮುಖ್ಯತೆ ಕೊಡ್ತಾರೆ! ಈ 5 ರಾಶಿಯವರು ಫಿಟ್ ನೆಸ್ ಗೆ ಪ್ರಾಮುಖ್ಯತೆ ಕೊಡ್ತಾರೆ!

**ತಯಾರಿಕಾ ವಿಧಾನ:**

ಒಂದು ಮಧ್ಯಮ ಗಾತ್ರದ ಚೆನ್ನಾಗಿ ಹಣ್ಣಾದ ಟೊಮಾಟೋ ಹಣ್ಣನ್ನು ಕತ್ತರಿಸಿ ಚಿಕ್ಕಚಿಕ್ಕ ತುಂಡುಗಳನ್ನಾಗಿಸಿ ಬ್ಲೆಂಡರಿನಲ್ಲಿ ನುಣ್ಣಗೆ ಅರೆಯಿರಿ. ಬಳಿಕ ಸ್ವಚ್ಛ ಬೋಗುಣಿಯೊಂದರಲ್ಲಿ ಹಸಿ ತೆಂಗಿನ ಹಾಲಿನೊಂದಿಗೆ ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿ.

ಈ ಲೇಪವನ್ನು ಈಗತಾನೇ ತೊಳೆದು ಒತ್ತಿ ಒರೆಸಿಕೊಂಡ ಮುಖ ಮತ್ತು ಕುತ್ತಿಗೆಯ ತ್ವಚೆಯ ಮೇಲೆ ದಪ್ಪನಾಗಿ, ಕಣ್ಣುಗಳನ್ನು ಮುಚ್ಚಿ ಕಣ್ಣುಗಳ ರೆಪ್ಪೆಗಳ ಮೇಲೆ ತೆಳುವಾಗಿ ಹಚ್ಚಿಕೊಂಡು ಹತ್ತು ನಿಮಿಷ ಕಣ್ಣು ಮುಚ್ಚಿ ಒಣಗಲು ಬಿಡಿ. ಬಳಿಕ ಕೇವಲ ತಣ್ಣೀರಿನಿಂದ ತೊಳೆದುಕೊಳ್ಳಿ.

**2. ಕಪ್ಪುತಲೆಗಳನ್ನು ನಿವಾರಿಸಲು:**

ಮೊಟ್ಟೆಯ ಬಿಳಿಭಾಗ ತ್ವಚೆಯ ಅಡಿಯಲ್ಲಿ ಸಂಗ್ರಹವಾಗಿದ್ದ ಕೀವನ್ನು ನಿವಾರಿಸಿ ಸೂಕ್ಷ್ಮರಂಧ್ರಗಳನ್ನು ಸ್ವಚ್ಚಗೊಳಿಸಿ ತ್ವಚೆ ಉಸಿರಾಡಲು ನೆರವಾಗುತ್ತದೆ. ಪರಿಣಾಮವಾಗಿ ಕಪ್ಪುತಲೆಗಳು ತಾನಾಗಿಯೇ ಸಡಿಲಗೊಂಡು ಸುಲಭವಾಗಿ ನಿವಾರಣೆಯಾಗುತ್ತವೆ.

ಪಿರಿಯಡ್ಸ್ ರ?ಯಾಶಸ್‌ಗೆ ಪರಿಣಾಮಕಾರಿ ಮನೆಮದ್ದುಗಳಿವುಪಿ–ರಿಯಡ್ಸ್ ರ?ಯಾಶಸ್‌ಗೆ ಪರಿಣಾಮಕಾರಿ ಮನೆಮದ್ದುಗಳಿವು

ಅಗತ್ಯವಿರುವ ಸಾಮಾಗ್ರಿಗಳು:

ಒಂದು ದೊಡ್ಡ ಚಮಚ ಮೊಟ್ಟೆಯ ಬಿಳಿಭಾಗ

ಒಂದು ಚಿಕ್ಕ ಚಮಚ ತಾಜಾ ಲಿಂಬೆಯ ರಸ

**ತಯಾರಿಕಾ ವಿಧಾನ:**

ಮೊಟ್ಟೆಯ ಬಿಳಿಭಾಗವನ್ನು ಪ್ರತ್ಯೇಕಿಸಿ ಚೆನ್ನಾಗಿ ಗೊಟಾಯಿಸಿಕೊಳ್ಳಿ. ಇದಕ್ಕೆ ಲಿಂಬೆರಸವನ್ನು ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಈ ಲೇಪವನ್ನು ಈಗತಾನೇ ತಣ್ಣೀರಿನಿಂದ ತೊಳೆದುಕೊಂಡು ಒತ್ತಿ ಒರೆಸಿಕೊಂಡ ಮುಖ ಮತ್ತು ಕುತ್ತಿಗೆಯ ತ್ವಚೆಗೆ ಹಚ್ಚಿಕೊಳ್ಳಿ. ಸುಮಾರು ಹದಿನೈದ–ರಿಂದ ಇಪ್ಪತ್ತು ನಿಮಿಷ ಕಳೆದ ಬಳಿಕ ಉಗುರುಬೆಚ್ಚನೆಯ ನೀರಿನಿಂದ ತೊಳೆದುಕೊಳ್ಳಿ.

3. ಎಣ್ಣೆಚರ್ಮದಿಂದ ಮುಕ್ತಿ ಪಡೆಯಲು

ಲೋಳೆಸರ ಹಲವು ವಿಧದಲ್ಲಿ ಆರೋಗ್ಯವನ್ನು ಉತ್ತಮಗೊಳಿಸುವ ನೈಸರ್ಗಿಕ ಸಸ್ಯವಾಗಿದ್ದು ತ್ವಚೆಗೂ ಹಲವು ರೀತಿಯಲ್ಲಿ ನೆರವಾಗುತ್ತದೆ. ಇದರ ರಸ ತ್ವಚೆಯ ಅಳಕ್ಕಿಳಿದು ಹೆಚ್ಚುವರಿ ಕೀವು ಮತ್ತು ಎಣ್ಣೆಯಂಶವನ್ನು ನಿವಾರಿಸುತ್ತದೆ. ಅರಿಶಿನದಲ್ಲಿಯೂ ಗುಣಪಡಿಸುವ ಹಲವಾರು ಗುಣಗಳಿದ್ದು ತ್ವಚೆಯ ಆರೋಗ್ಯವನ್ನು ಉತ್ತಮಗೊಳಿಸುತ್ತದೆ.

**ಅಗತ್ಯವಿರುವ ಸಾಮಾಗ್ರಿಗಳು:**

ಎರಡು ದೊಡ್ಡ ಚಮಚ ಲೋಳೆಸರದ ತಿರುಳು

ಒಂದು ಚಿಕ್ಕ ಚಮಚ ಅರಿಶಿನ ಪುಡಿ

**ತಯಾರಿಕಾ ವಿಧಾನ:**

ಈಗ ತಾನೇ ಕೊಯ್ದ ಲೋಳೆಸರದ ಒಂದು ಕೋಡನ್ನು ಬಿಡಿಸಿ ಒಳಗಿನ ತಿರುಳನ್ನು ಚಮಚದಿಂದ ಪ್ರತ್ಯೇಕಿಸಿ. ಒಂದು ಬೋಗುಣಿಯಲ್ಲಿ ಅರಿಶಿನ ಪುಡಿಯೊಂದಿಗೆ ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿ. ಈಗತಾನೇ ತಣ್ಣೀ–ರಿನಿಂದ ತೊಳೆದುಕೊಂಡು ಒತ್ತಿ ಒರೆಸಿಕೊಂಡ ಮುಖ ಮತ್ತು ಕುತ್ತಿಗೆಯ ತ್ವಚೆಗೆ ಹಚ್ಚಿಕೊಂಡು ಸುಮಾರು ಇಪ್ಪತ್ತು ನಿಮಿಷ ಒಣಗಲುಬಿಡಿ.







ಬಳಿಕ ಉಗುರುಬೆಚ್ಚನೆಯ ನೀರಿನಿಂದ ತೊಳೆದುಕೊಳ್ಳಿ.

**4. ಅರೋಗ್ಯಕರ ತ್ವಚೆಗೆ:**

ತೆಂಗಿನ ಹಾಲಿನಲ್ಲಿರುವ ಹಿತಕರ ಭಾವನೆ ನೀಡುವ ಗುಣ ವಿಶೇಷವಾಗಿ ಒಣಚರ್ಮಕ್ಕೆ ಹೆಚ್ಚಿನ ಆರೈಕೆ ನೀಡುತ್ತದೆ ಹಾಗೂ ಆರೋಗ್ಯಕರ ಮತ್ತು ಕಾಂತಿಯುಕ್ತ ತ್ವಚೆ ಪಡೆಯಲು ನೆರವಾಗುತ್ತದೆ.

ಅಗತ್ಯವಿರುವ ಸಾಮಾಗ್ರಿಗಳು:

ಒಂದು ದೊಡ್ಡ ಚಮಚ ತಾಜಾ ತೆಂಗಿನ ಹಾಲು

ಒಂದು ಚಿಕ್ಕ ಚಮಚ ಅರಿಶಿನ ಪುಡಿ

**ತಯಾರಿಕಾ ವಿಧಾನ:**

ಸ್ವಚ್ಛವಾದ ಬೋಗುಣಿಯೊಂದರಲ್ಲಿ ಎರಡೂ ಸಾಮಾಗ್ರಿಗಳನ್ನು ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿ. ಈಗತಾನೇ ತಣ್ಣೀರಿನಿಂದ ತೊಳೆದು ಒತ್ತಿ ಒರೆಸಿಕೊಂಡ ಮುಖ ಮತ್ತು ಕುತ್ತಿಗೆಯ ಮೇಲೆ ತೆಳುವಾಗಿ ಹಚ್ಚಿ ವೃತ್ತಾಕಾರದಲ್ಲಿ ಬೆರಳುಗಳ ತುದಿಯಿಂದ ಮಸಾಜ್ ಮಾಡಿ. ಸುಮಾರು ಹದಿನೈದು ನಿಮಿಷಗಳ ಬಳಿಕ ಕೇವಲ ತಣ್ಣೀರಿನಿಂದ ತೊಳೆದುಕೊಳ್ಳಿ.

**5. ತ್ವಚೆಯ ಸೆಳೆತ ಹೆಚ್ಚಿಸಲು:**

ಜೇನಿನಲ್ಲಿರುವ ಆಂಟಿ ಆಕ್ಸಿಡೆಂಟ್, ಗುಣಪಡಿಸುವ ಹಾಗೂ ನೆರಿಗೆಯನ್ನು ನಿವಾರಿಸುವ ಗುಣ ತ್ವಚೆಯ ಸೆಳೆತವನ್ನು ಹೆಚ್ಚಿಸಲು ನೆರವಾಗುತ್ತದೆ. ಕಾಫಿಪುಡಿಯಲ್ಲಿರುವ ಕೆಫೀನ್ ತ್ವಚೆಯ ಅಡಿಯ ಪದರದಲ್ಲಿ ರಕ್ತಪ–ರಿಚಲನೆಯನ್ನು ಹೆಚ್ಚಿಸಿ ಚರ್ಮದ ಸೆಳೆತ ಹೆಚ್ಚಿಸಲು ನೆರವಾಗುತ್ತದೆ.

ಅಗತ್ಯವಿರುವ ಸಾಮಾಗ್ರಿಗಳು

ಎರಡು ದೊಡ್ಡ ಚಮಚ ಜೇನು

ಎರಡು ದೊಡ್ಡ ಚಮಚ ಕಾಫಿ ಪುಡಿ (ಹುರಿದು ಪುಡಿ ಮಾಡಿದ ಚಿಕ್ಕಮಗಳೂರು ಕಾಫಿ ಪುಡಿ, ಇನ್ಸ್ಟಂಟ್ ಕಾಫಿಪುಡಿ ಅಷ್ಟು ಪರಿಣಾಮಕಾರಿಯಲ್ಲ)

**ತಯಾರಿಕಾ ವಿಧಾನ:**

ಎರಡೂ ಸಾಮಾಗ್ರಿಗಳನ್ನು ಚೆನ್ನಾಗಿ ಬೆರೆಸಿ ಮಿಶ್ರಣ ಮಾಡಿ. ಈ ಲೇಪನವನ್ನು ಈಗತಾನೇ ತಣ್ಣೀರಿನಿಂದ ತೊಳೆದುಕೊಂಡ ತ್ವಚೆಯ ಮೇಲೆ ಹಚ್ಚಿ. ಹಚ್ಚಿಕೊಳ್ಳಲು ಮೃದು ರೋಮಗಳಿರುವ ಬ್ರಶ್ ಬಳಸಬಹುದು. ಬಳಿಕ ಸುಮಾರು ಹತ್ತರಿಂದ ಹದಿನೈದು ನಿಮಿಷ ಒಣಗಲು ಬಿಡಿ. ನಂತರ ಉಗುರುಬೆಚ್ಚನೆಯ ನೀರಿನಿಂದ ತೊಳೆದುಕೊಳ್ಳಿ.

**6. ಕಾಂತಿಯುಕ್ತ ತ್ವಚೆ ಪಡೆಯಲು:**

ಲಿಂಬೆರಸ ಮತ್ತು ಮೊಸರು ಎರಡೂ ತ್ವಚೆಯ ಕಾಂತಿಯನ್ನು ಹೆಚ್ಚಿಸಲು ಉತ್ತಮವಾಗಿವೆ ಹಾಗೂ ತ್ವಚೆಯಲ್ಲಿರುವ ಕಪ್ಪು ಕಲೆಗಳು ಮತ್ತು ಸೂಕ್ಷ್ಮಗೀರುಗಳನ್ನು ನಿವಾರಿಸಿ ಆರೋಗ್ಯಕರ ಹಾಗೂ ಕಲೆಯಿಲ್ಲದ ಕಾಂತಿಯುಕ್ತ ತ್ವಚೆ ಪಡೆಯಲು ನೆರವಾಗುತ್ತದೆ.

ಅಗತ್ಯವಿರುವ ಸಾಮಾಗ್ರಿಗಳು:

ಎರಡು ಚಿಕ್ಕ ಚಮಚ ತಾಜಾ ಲಿಂಬೆಯ ರಸ

ಎರಡು ದೊಡ್ಡ ಚಮಚ ಮೊಸರು

**ತಯಾರಿಕಾ ವಿಧಾನ:**

ಒಂದು ಬೋಗುಣಿಯಲ್ಲಿ ಎರಡೂ ಸಾಮಾಗ್ರಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಈಗತಾನೇ ತಣ್ಣೀ–ರಿನಲ್ಲಿ ತೊಳೆದು ಒತ್ತಿ ಒರೆಸಿಕೊಂಡ ಮುಖ ಮತ್ತು ಕುತ್ತಿಗೆಯ ತ್ವಚೆಯ ಈ ಲೇಪನವನ್ನು ತೆಳುವಾಗಿ ಹಚ್ಚಿ ಸುಮಾರು ಅರ್ಧ ಘಂಟೆ ಹಾಗೇ ಬಿಡಿ. ಬಳಿಕ ಕೇವಲ ತಣ್ಣೀರಿನಿಂದ ತೊಳೆದುಕೊಳ್ಳಿ.

**7. ಮೊಡವೆಗಳನ್ನು ನಿವಾರಿಸಲು:**

ಜೇನು ಮತ್ತು ದಾಲ್ಚಿನ್ನಿಪುಡಿಯ ಜೋಡಿಯಲ್ಲಿರುವ ಪ್ರತಿಜೀವಕ ಮತ್ತು ಸೂಕ್ಷ್ಮಜೀವಿ ನಿವಾರಕ ಗುಣಗಳು ಮೊಡವೆಯನ್ನು ನಿವಾ–ರಿಸಲು ನೆರವಾಗುವ ಮೂಲಕ ಸಹಜ ಸೌಂದರ್ಯವನ್ನು ಪಡೆಯಲು ನೆರವಾಗುತ್ತದೆ.

**ಅಗತ್ಯವಿರುವ ಸಾಮಾಗ್ರಿಗಳು:**

೪ ಚಿಕ್ಕ ಚಮಚ ದಾಲ್ಚಿನ್ನಿ ಪುಡಿ

ಎರಡು ದೊಡ್ಡ ಚಮಚ ಜೇನು

**ತಯಾರಿಕಾ ವಿಧಾನ:**

ಎರಡೂ ಸಾಮಾಗ್ರಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಈಗತಾನೇ ತೊಳೆದುಕೊಂಡ ಮುಖಕ್ಕೆ ಹಚ್ಚಿ ಐದು ನಿಮಿಷಗಳ ಬಳಿಕ ತಣ್ಣೀ–ರಿನಿಂದ ತೊಳೆದುಕೊಳ್ಳಿ.

ಎಚ್ಚರಿಕೆ:ಒಂದು ವೇಳೆ ನಿಮ್ಮ ತ್ವಚೆ ಸೂಕ್ಷ್ಮಸಂವೇದಿಯಾಗಿದ್ದರೆ ದಾಲ್ಚಿನ್ನಿ ಪುಡಿ ನಿಮಗೆ ಅಲರ್ಜಿ ತರಿಸಬಹುದು. ಹಾಗಾಗಿ ಈ ವಿಧಾನವನ್ನು ಅನುಸ–ರಿಸುವ ಮುನ್ನ ಇದು ನಿಮ್ಮ ತ್ವಚೆಗೆ ಅಲರ್ಜಿಕಾರಕವಲ್ಲ ಎಂಬುದನ್ನು ಖಚಿತಪಡಿಸಲು ಪ್ಯಾಚ್ ಟೆಸ್ಟ್ ಅಥ–'ವಾ ಮೊಣಕೈ ಭಾಗಕ್ಕೆ ಕೊಂಚ ಪ್ರಮಾಣವನ್ನು ಹಚ್ಚಿ ಒಂದು ಘಂಟೆಯವರೆಗಾದರೂ ಬಿಟ್ಟು ಬಳಿಕ ಈ ಭಾಗದಲ್ಲಿ ಯಾವುದೇ ಚಿಕ್ಕ ಗುಳ್ಳೆಗಳು ಅಥವಾ ಉರಿ ಕಾಣಿಸಿಕೊಳ್ಳಲಿಲ್ಲ ಎಂದು ಖಾತ್ರಿ ಪಡಿಸಿಕೊಳ್ಳಿ.

8. ವಯಸ್ಸಿನ ಪ್ರಭಾವವನ್ನು **ನಿಧಾನವಾಗಿಸಲು:**

ಲೋಳೆಸರ ಮತ್ತು ಮೊಟ್ಟೆಯ ಬಿಳಿಭಾಗ ಎರಡೂ ಚರ್ಮದಲ್ಲಿ ಕೊಲ್ಯಾಜೆನ್ ಪ್ರಮಾಣವನ್ನು ಹೆಚ್ಚಿಸುವ ಗುಣವಿದೆ ಹಾಗೂ ಚರ್ಮದ ಸೆಳೆತದ ಗುಣವನ್ನು ಹೆಚ್ಚಿಸುತ್ತದೆ. ಪರಿಣಾಮವಾಗಿ ತ್ವಚೆಯಲ್ಲಿ ಮೂಡಿರುವ ನೆರಿಗೆಗಳು ಇಲ್ಲವಾಗಿ ವೃದ್ದಾಪ್ಯದ ಪ್ರಭಾವ ನಿಧಾನವಾಗುತ್ತದೆ.

ಅಗತ್ಯವಿರುವ ಸಾಮಾಗ್ರಿಗಳು

ಎರಡು ದೊಡ್ಡ ಚಮಚ ಲೋಳೆಸರ

ಒಂದು ದೊಡ್ಡ ಚಮಚ ಮೊಟ್ಟೆಯ ಬಿಳಿಭಾಗ

**ಯಾರಿಕಾ ವಿಧಾನ:**

ಎರಡೂ ಸಾಮಾಗ್ರಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಈ ಲೇಪವನ್ನು ಈಗತಾನೇ ತಣ್ಣೀರಿನಿಂದ ತೊಳೆದುಕೊಂಡ ಮುಖಕ್ಕೆ ತೆಳುವಾಗಿ ಹಚ್ಚಿ ಸುಮಾರು ಇಪ್ಪತ್ತು ನಿಮಿಷ ಒಣಗಲು ಬಿಡಿ. ಬಳಿಕ ಕೇವಲ ತಣ್ಣೀ–ರಿನಿಂದ ತೊಳೆದುಕೊಳ್ಳಿ.

********

# ಚಳಿಗಾಲದಲ್ಲಿ ಮಕ್ಕಳನ್ನು ಕಾಡುವ ಅನಾರೋಗ್ಯ ಯಾವಾಗ ವೈದ್ಯರ ಸಂಪರ್ಕಿಸಬೇಕು? ಇಲ್ಲಿದೆ ಮಾಹಿತಿ

ಚಳಿಗಾಲ ಶುರುವಾಗಿದ್ದು, ಎಲ್ಲರೂ ತಮ್ಮ ಆರೋಗ್ಯದ ಬಗ್ಗೆ ನಿಗಾ ವಹಿಸಿಬೇಕು. ವಿಶೇಷವಾಗಿ ಮಕ್ಕಳ ಆರೋಗ್ಯದ ಮೇಲೆ ಹೆಚ್ಚಾಗಿ ನಿಗಾವಹಿಸಬೇಕು. ಚಳಿಗಾಲ ಶುರುವಾದಂತೆ ಮಕ್ಕಳನ್ನು ಒಂದಲ್ಲ ಒಂದು ಆರೋಗ್ಯ ಸಮಸ್ಯೆಗಳು ಕಾಡುತ್ತಲೇ ಇರುತ್ತವೆ.

ಚಳಿಗಾಲದಲ್ಲಿ ಮಕ್ಕಳು ಸೋಂಕುಗಳಿಗೆ ತುತ್ತಾಗುವುದು ಸಾಮಾನ್ಯ. ಫ್ಲೂ, ನೆಗಡಿ, ಗಂಟಲು ನೋವು ಮತ್ತು ಸೈನುಸೈಟಿಸ್‌ನಂತಹ ಉಸಿರಾಟದ ಸೋಂಕುಗಳು ಈ ಸಮಯದಲ್ಲಿ ಕಾಣಿಸಿಕೊಳ್ಳುತ್ತವೆ. ಈ ಸೋಂಕುಗಳು ಹೆಚ್ಚು ಸಾಂಕ್ರಾಮಿಕವಾಗಿರುವುದರಿಂದ ಆರಂಭಿಕ ರೋಗಲಕ್ಷಣಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ತಡೆಗಟ್ಟುವುದು ಬಹಳ ಮುಖ್ಯ.

ಈ ಋತುವಿನಲ್ಲಿ ಕೆಮ್ಮು, ಸೀನುವಿಕೆ, ಗಂಟಲು ನೋವು, ಮೂಗು ಸೋರಿಕೆ ಮತ್ತು ಜ್ವರವು ಲಕ್ಷಣಗಳು ಸಾಮಾನ್ಯವಾಗಿರುತ್ತವೆ. ಇದಲ್ಲದೆ ಮಕ್ಕಳಲ್ಲಿ ತೀವ್ರ ಆಯಾಸ, ದೇಹದ ನೋವು ಮತ್ತು ಅಸ್ವಸ್ಥತೆ ಕೂಡ ಕಂಡು ಬರುತ್ತವೆ.

ವೈದ್ಯರನ್ನು ಯಾವಾಗ ಸಂಪರ್ಕಿಸಬೇಕು...

ಜ್ವರ 5 ದಿನಕ್ಕಿಂತಲೂ ಹೆಚ್ಚು ಕಾಲ ಇದ್ದಾಗ

ಊಟ, ನೀರು ಸೇವನೆ ನಿಲ್ಲಿಸುವುದು, ಅತೀವ್ರ ವಾಂತಿ, ಭೇದಿಯಾದಾಗ

ಸಡಿಲವಾದ ಮಲ ಒಂದು ವಾರಕ್ಕಿಂತ ಹೆಚ್ಚು ಕಾಲ ಇದ್ದಾಗ

ಉಸಿರಾಟ ಸಮಸ್ಯೆ

ದೇಹದಲ್ಲಿ ದದ್ದುಗಳು ಕಂಡು ಬಂದರೆ

ಚಳಿಗಾಲದಲ್ಲಿ ಅನಾರೋಗ್ಯದಿಂದ ದೂರ ಇರುವುದು ಹೇಗೆ?

ಲಸಿಕೆ

ಜ್ವರದ ಲಸಿಕೆ ಪ್ರಮುಖವಾಗಿದ್ದು, ಮಕ್ಕಳಿಗೆ ಕಾಲಕಾಲಕ್ಕೆ ಸರಿಯಾಗಿ ಲಸಿಕೆಗಳನ್ನು ಹಾಕಿಸಿ.

ನೈರ್ಮಲ್ಯ ಕಾಪಾಡಿ

ನಿಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರುವಂತೆ ನೋಡಿಕೊಳ್ಳಿ. ಮಕ್ಕಳ ಆಟಿಕೆಗಳನ್ನು ಸ್ವಚ್ಛಗೊಳಿಸಿ. ಕೈಗಳನ್ನು ಆಗಾಗ್ಗೆ ತೊಳೆಯುತ್ತಿರಿ.

ಸಾಮಾಜಿಕ ಅಂತರ

ಮಕ್ಕಳು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಅಭ್ಯಾಸ ಮಾಡಿಸಿ.



ರೋಗಲಕ್ಷಣಗಳನ್ನು ಹೊಂದಿರುವವರಿಂದ ದೂರ ಇರುವಂತೆ ಮಾಡಿ.

ಆರೋಗ್ಯಕರ ಆಹಾರ ಸೇವನೆ

ಪ್ರೋಟೀನ್, ಫೈಬರ್, ಧಾನ್ಯಗಳು, ಹಣ್ಣುಗಳು,

ತರಕಾರಿಗಳಿರುವ ಆಹಾರವನ್ನು ಸೇವನೆ ಮಾಡುವಂತೆ ಮಾಡಿ. ಸಂಸ್ಕರಿಸಿದ ಆಹಾರಗಳು ಮತ್ತು ಜಂಕ್ ಫುಡ್ ಅನ್ನು ತಪ್ಪಿಸಿ.

ನೀರು

ಅನಾರೋಗ್ಯದ ಸಂದರ್ಭದಲ್ಲಿ ಹೆಚ್ಚೆಚ್ಚು ನೀರು ಕುಡಿಯುವುದು ಅಗತ್ಯ. ತಂಪಾದ ವಾತಾವರಣದಲ್ಲಿಯೂ ಕನಿಷ್ಟ 6 ಲೋಟ ನೀರು ಕುಡಿಯುವುದು ಮುಖ್ಯವಾಗುತ್ತದೆ.

ಮಾಸ್ಕ್ ಧಾರಣೆ

ಮಾಸ್ಕ್ ಧರಿಸಿ. ಕೆಮ್ಮುವಾಗ ಅಥ–'ವಾ ಸೀನುವಾಗ ಕೈಗಳಿಂದ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳುವಂತೆ ತಿಳಿಸಿ. ಇದು ಉಸಿರಾಟದ ಹನಿಗಳ ಪ್ರಸರಣವನ್ನು ಕಡಿಮೆ ಮಾಡುತ್ತದೆ.

ವಿಶ್ರಾಂತಿ

ಅನಾರೋಗ್ಯ ಸಂದರ್ಭದಲ್ಲಿ ದೇಹ ವಿಶ್ರಾಂತಿ ಬಯಸುತ್ತದೆ. ಕನಿಷ್ಟ 7–8 ಗಂಟೆಗಳ ಕಾಲ ನಿದ್ರಿಸುವುದು ಮುಖ್ಯ. ಇದು ರೋಗಪ್ರತಿರೋಧಕ ವ್ಯವಸ್ಥೆಯನ್ನು ಬಲಪಡಿಸುತ್ತದೆ.

ಸೋಂಕಿತ ವ್ಯಕ್ತಿಗಳೊಂದಿಗೆ ಸಂಪರ್ಕ ತಪ್ಪಿಸುವುದು

ಶಾಲೆಗಳು ಮತ್ತು ಆಟದ ಮೈದಾನಕ್ಕೆ ಹೋದಾಗ ಸೋಂಕಿತ ಮಕ್ಕಳೊಂದಿಗಿನ ಸಂಪರ್ಕವು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಮಕ್ಕಳು ಸೋಂಕಿತ ವ್ಯಕ್ತಿಗಳಿಂದ ದೂರ ಇರುವಂತೆ ನೋಡಿಕೊಳ್ಳಿ. ಮಾಸ್ಕ್ ಧರಿಸುವಂತೆ ಮಾಡಿ,

ಇನ್ಫ್ಲುಯೆನ್ಸ್ ಮತ್ತು ಫ್ಲೂ ಮೇಲೆ ಗಮನವಿರಲಿ

ಚಳಿಗಾಲದಲ್ಲಿ ಮಕ್ಕಳಲ್ಲಿ ವೈರಲ್ ಜ್ವರಗಳು ಕಾಣಿಸಿಕೊಳ್ಳುವುದು ಹೆಚ್ಚು. ಇದನ್ನು ನಿಯಂತ್ರಿಸಲು ಲಸಿಕೆಗಳನ್ನು ಸಮಯಕ್ಕೆ ಸರಿಯಾಗಿ ಕೊಡಿಸುವುದು ಮುಖ್ಯವಾಗುತ್ತದೆ.

ವೈದ್ಯರ ಸಮಾಲೋಚನೆ

ಮಗುವಿನಲ್ಲಿ ಅನಾರೋಗ್ಯದ ಲಕ್ಷಣಗಳನ್ನು ಕಂಡು ಬಂದಾಕ ಆರಂಭಿಕ ಹಂತದಲ್ಲಿಯೇ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

ಇದರಿಂದ ರೋಗ ಉಲ್ಬಣಗೊಳ್ಳುವುದನ್ನು ತಡೆಯಬಹುದು.



# ಬಸವಾದಿ ಶರಣರ ವಚನಗಳಲ್ಲಿ ಜೀವನ ಮೌಲ್ಯಗಳಿವೆ

**ಬಸವನಬಾಗೇವಾಡಿ:** 12 ನೇ ಶತಮಾನದ ಬಸವಾದಿ ಶರಣ-ರ ಸಂದೇಶಗಳನ್ನು ನಾಡಿನಲ್ಲಿ ಶರಣ ಸಾಹಿತ್ಯ ಪರಿಷತ್ತು ದತ್ತಿ ಉಪನ್ಯಾಸ, ಸಮ್ಮೇಳನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಪ್ರಸಾರ ಮಾಡುತ್ತಿರುವುದು ಶ್ಲಾಘನೀಯ ಎಂದು ನಿವೃತ್ತ ಪ್ರಾಧ್ಯಾಪಕ ಪಿ.ಎಲ್.ಹಿರೇಮಠ ಹೇಳಿದರು.

ಪಟ್ಟಣದ ಶಿವಾನಂದ ಪೂಜಾರಿ ಅವರ ನಿವಾಸದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು ಲಿಂ. ಮಹಾದೇವಪ್ಪ ಶಿವಪ್ಪ ಪೂಜಾರಿ ಸ್ಮರಣಾರ್ಥ ಸೋಮವಾರ ಸಂಜೆ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಾದಿ ಶರಣರು ರಚಿಸಿರುವ ವಚನಗಳಲ್ಲಿ ಮಾನವೀಯ ಮೌಲ್ಯಗಳಿವೆ. ವಚನಗಳಲ್ಲಿರುವ ಜೀವನ ಮೌಲ್ಯಗಳನ್ನು ಅರಿತು ನಡೆದರೆ ಸಮಾಜದಲ್ಲಿ ಸನ್ಮಾರ್ಗದಲ್ಲಿ ನಡೆಯಲು ಪೂರಕವಾಗಿದೆ. ಇಂತಹ ವಚನ ಸಂದೇಶವನ್ನು ಶರಣ ಸಾಹಿತ್ಯ ಪರಿಷತ್ತು ಶಾಲೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಜನಮಾಸನಕ್ಕೆ ಮುಟ್ಟಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ ಎಂದರು.

ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ವಿರೇಶ ಕುಂಟೋಜಿ ಮಾತನಾಡಿ, ವಿಶ್ವಗುರು ಬಸವೇಶ್ವರರು ಬಯಸಿದ ಉದಾತ್ತ ಸಮಾಜ ಕಟ್ಟುವ ಕಾರ್ಯವನ್ನು ಮತ್ತು ಧಾರ್ಮಿಕ ಪ್ರಪಂಚದಲ್ಲಿ ಉಂಟು ಮಾಡಿದ ಕ್ರಾಂತಿಯನ್ನು ಪುಷ್ಠಿಕರಿಸಲು ಅವರ ಸಮಕಾಲೀನ ಅನೇಕ ಶರಣ-ರು ಅವರೊಂದಿಗೆ ಇದ್ದರು ಎಂಬುವದನ್ನು ನಾವು ನೋಡುತ್ತೇವೆ. ಶರಣರು ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳುವ ಮೂಲಕ ಸ್ವರ್ಗ-ನರಕಗಳ ಕಲ್ಪನೆಯ ಬಗ್ಗೆ ನಾವು ಮಾಡುವ ಕಾಯಕಗಳ ಮೂಲಕ ಸ್ವರ್ಗ-ನರಕ ಇರುವಾಗಲೇ ಪಡೆಯಬಹುದು ಎಂದು ಹೇಳಿದರು. ಬದುಕಿನ ಕಲೆಯನ್ನು ಬಸವಾದಿ ಶರಣರು ನುಡಿದಂತೆ ನಡೆಯುವ ಮೂಲಕ ನಮಗೆ ತೋರಿಸಿಕೊಟ್ಟಿದ್ದಾರೆ. ಬಸವಾದಿ ಶರಣರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಮರ್ತುರ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್.ಕೆ.ಸೋಮನಕಟ್ಟಿ, ಶಿವಾನಂದ ಪೂಜಾರಿ ಇತರರು ಇದ್ದರು. ಸಾವಿತ್ರಿ ಕಲ್ಯಾಣಶೆಟ್ಟಿ ಪ್ರಾರ್ಥಿಸಿದರು. ಆರ್.ಜಿ.ಅಳ್ಳಗಿ ಸ್ವಾಗತಿಸಿ,ನಿರೂಪಿಸಿ, ವಂದಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಜನಪದ ಗಾಯಕ ಬಸವರಾಜ ಹಾರಿವಾಳ, ಪಿಎಚ್‌ಡಿ ಪದವಿ ಪಡೆದ ಕಿರಣ ನಡಕಟ್ಟಿ ಅವರನ್ನು ಸನ್ಮಾನಿಸಲಾಯಿತು.



ಬಸವನಬಾಗೇವಾಡಿ ತಾಲೂಕು ಶರಣ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ನಿವೃತ್ತ ಪ್ರಾಧ್ಯಾಪಕ ಪಿ.ಎಲ್.ಹಿರೇಮಠ ಉದ್ಘಾಟಿಸಿದರು.

# ಗೋಕಾಕ ಜಿಲ್ಲಾ ರಚನೆಗೆ ಹೋರಾಟ

**ಗೋಕಾಕ:** ಗೋಕಾಕ ಜಿಲ್ಲಾ ಹೋರಾಟ ಸಮಿತಿ ವತಿಯಿಂದ ಜಿಲ್ಲಾ ಹೋರಾಟ ಸಂಘಟಿಸಲು ವಿನಂತಿಸಲಾಗಿದ್ದು, ಅವರು ಹೋರಾಟ ಮುಂದುವರೆಸದಿದ್ದರೆ ಬರುವ ಮಂಗಳವಾರ ಅಥ-'ವಾ ಬುಧವಾರದಂದು ಗೋಕಾಕ ಜಿಲ್ಲಾ ಮಾಡಲು ಒತ್ತಾಯಿಸಿ ಧರಣಿ ಸತ್ಯಾಗ್ರಹ ನಡೆಸಲಾಗುದು ಎಂದು ಕಾಂಗ್ರೆಸ್ ಮುಖಂಡ ಆಶೋಕ ಪೂಜಾರಿ ಹೇಳಿದರು.

ಮಂಗಳವಾರದಂದು ನಗರದಲ್ಲಿ ಕರೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಒಂದು ಸಮಯದಲ್ಲಿ ಗೋಕಾಕ ಜಿಲ್ಲಾ ಹ'ೂೀರಾಟವ'ು ರಾಜ್ಯದ ಗಮನ ಸೆಳೆದಿತ್ತು, ಆದರ ಇತ್ತೀಚೆಗೆ ಅದು ಆಗುತ್ತಿಲ್ಲ, ಜಿಲ್ಲಾ ರಚನೆ ಹೋರಾಟ ಸಮಿತಿ ಮತ್ತು ನ್ಯಾಯವಾದಿಗಳ ಸಂಘ ಸಕ್ರಿಯವಾಗಿ ಹೋರಾಟಕ್ಕೆ ಧುಮುಕಿ ಸರಕಾರಕ್ಕೆ ಚುರುಕು ಮುಟ್ಟಿಸಬೇಕು ಆದರೆ ಇತ್ತೀಚೆಗೆ ಪೂರಕ ಪ್ರಮಾಣದಲ್ಲಿ ಹೋರಾಟ ಆಗುತ್ತಿಲ್ಲ ಎಂಬುದು ವಿಷಾದನೀಯ ಎಂದ ಅವರು ಇದರ ಬಗ್ಗೆ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಜೊತೆಗೆ ಚರ್ಚಿಸಲಾಗಿದ್ದು, ಬರುವ ಸೋಮವಾರದವರೆಗೆ ಹೋರಾಟ ಮಾಡಲು ವಿನಂತಿಸಲಾಗಿದ್ದು, ಅವರು ಹೋರಾಟ ಮಾಡಿದರೆ ಅವರ ಜೊತೆಗೆ ಕೂಡಿ ಹೋರಾಟ ಮಾಡಲಾಗುವುದು. ಅವರು ಮಾಡದಿದ್ದರೆ ನಾವು ಮಂಗಳವಾರವಾರ ಅಥ-'ವಾ ಬುಧವಾರದಂದು ತಹಶೀಲ್ದಾರ್ ಕಛೇರಿ ಎದುರು ಧರಣಿ ಮಾಡಲಾಗುವುದು ಎಂದರು.



ಗೋಕಾಕ ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಜಿಲ್ಲಾ ಸಚಿವರ ಮತ್ತು ಶಾಸಕರು ಸಹಕಾರ ಮುಖ್ಯವಾಗಿದ್ದು, ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ಆದಷ್ಟು ಬೇಗ ಗೋಕಾಕ ನೂತನ ಜಿಲ್ಲೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಜಿಲ್ಲಾ ಉಸ್ತುವಾರಿ ಸಚಿವರಿಗೆ ಮತ್ತು ಮಹಿಳಾ ಮಕ್ಕಳ ಕಲ್ಯಾಣ ಸಚಿವರಿಗೆ ಜಿಲ್ಲೆಯ ಎಲ್ಲ ಶಾಸಕರನ್ನು ಕರೆಯಿಸಿ ಸಭೆ ಮಾಡಿ ಎಂದು ಹೇಳಿದ್ದೆ ಆದರೆ ಅದು ಆಗಿಲ್ಲ ಆದಷ್ಟು ಬೇಗ ಜಿಲ್ಲೆಯ ಎಲ್ಲಾ ಶಾಸಕರ ಸಭೆ ನಡೆಯಿಸಿ ಅವರ ಅಭಿಪ್ರಾಯಗಳನ್ನು ಪಡೆದು ಸರಕಾರದ ಗಮನ ಸೆಳೆಯಬೇಕು. ಜಿಲ್ಲಾ ಉಸ್ತುವಾರಿ ಮಂತ್ರಿ ಸತೀಶ ಜಾರಕಿಹೊಳಿ ಮತ್ತು ತಾಲೂಕಿನ ಶಾಸಕರು ಇದಕ್ಕೆ ಸ್ಪಂದಿಸಬೇಕು. ಇದರ ಜೊತೆಗೆ ಪ್ರಾಮಾಣಿಕ ಹೋರಾಟ ಕೂಡಾ ಆಗಬೇಕು. ಸಚಿವರು ಮತ್ತು ಶಾಸಕರು ನಮ್ಮ ಹೋರಾಟಗಳನ್ನು ಎತ್ತಿ ಹಿಡಿದು ಸರಕಾರಕ್ಕೆ ಒತ್ತಾಯಿಸಬೇಕು ಎಂದು ಅಶೋಕ ಪೂಜಾರಿ ಆಗ್ರಹಿಸಿದರು.

ಪ್ರೊ.ಅರ್ಜುನ್ ಪಂಗನ್ನವರ, ದಸ್ತಗಿರಿ ಪೈಲವಾನ, ಸದಾಕತ ಮಂಕಾದಾರ, ಸಂಜೀವ ಪೂಜಾರಿ, ಡಾ.ಪ್ರವಿಣ ನಾಯಿಕ, ನಿಂಗಪ್ಪ ಅಮ್ಮಿನಬಾವಿ ಇದ್ದರು.

## ಚೂರು-ಪಾರು

### ಡಾ.ವಿಷ್ಣು ಸೇನಾ ಸಮಿತಿಯಿಂದ ಕನ್ನಡ ರಾಜ್ಯೋತ್ಸವ



**ಮುಧೋಳ:** ಕರ್ನಾಟಕ ಡಾ. ವಿಷ್ಣು ಸೇನಾ ಸಮಿತಿ ಮುಧೋಳ ಇವರ ವತಿಯಿಂದ ನಗರದ ಜಡಗಾ-ಬಾಲಣ್ಣ ಇವರ ವೃತ್ತದಲ್ಲಿ 69.ನೇ ಕನ್ನಡ ರಾಜ್ಯೋತ್ಸವವನ್ನು ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ, ಅದ್ದೂರಿಯಾಗಿ ಆಚರಿಸಿದರು. ಇಂಪಾದ ಹಾಡುಗಳು: ತಾಯಿ ಭುವನೇಶ್ವರಿಗೆ ಚಿಕ್ಕ-ಚೊಕ್ಕದಾದ ವೇದಿಕೆ ನಿರ್ಮಾಣ ಮಾಡಿ ಅವರ ಭಾವಚಿತ್ರ ಇಟ್ಟು ಕನ್ನಡ ಧ್ವಜಗಳನ್ನು ರಾರಾಜಿಸುತ್ತ, ಕರ್ನಾಟಕ ಇತಿಹಾಸ ಸಾರುವ, ಕನ್ನಡದ ನೆಲ, ಜಲ, ಮಣ್ಣಿಗಾಗಿ ಹೋರಾಡಿದ ವೀರ-ಧೀರರ ಇಂಪಾದ ಕನ್ನಡ ಹಾಡುಗಳನ್ನು ಹಚ್ಚಿ ಕನ್ನಡಿಗರ ಮನ ಸೆಳೆದರು.ಪ್ರಸಾದ ಹಂಚಿಕೆ: ಕಾರ್ಯಕ್ರಮಕ್ಕೆ ಆಗಮಿಸಿದ್ದ ಹಾಗು ಸುತ್ತಮುತ್ತಲಿನ ವ್ಯಾಪಾರಸ್ಥರಿಗೆ, ಗ್ರಾಹಕರಿಗೆ ಸಿಹಿ ಪ್ರಸಾದ ಹಂಚಿ ಪರಸ್ಪರ ಸಂಭ್ರಮಿಸಿದರು. ಸಮಿತಿಯ ಮುಖ್ಯಸ್ಥ ಗಣಪತಿ ಮೇತ್ರಿ(ಕಮ್ಮಾರ) ಬಿ.ಎಚ್. ಬೀಳಗಿ, ಪ್ರಕಾಶ ಕಾಂಬಳೆ, ಸುರೇಶ ಭಸ್ಮೆ, ನಾಮದೇವ ಕೋಪರ್ಡೆ, ಶ್ರೀಮತಿ ಲಕ್ಷ್ಮಿ, ಅಭಿಷೇಕ ಬಂಡಿವಡ್ಡರ, ಅನೀಲ ಬಾಗಿ, ರಾಹುಲ, ಶಿಕ್ಷಕ ವೃಂದ, ಕನ್ನಡ ಶಾಲಾ ಮಕ್ಕಳು ಇತರರು ಇದ್ದರು.

### ಉಪಚುನಾವಣೆಯಲ್ಲಿ ಕಾಂಗ್ರೇಸ್ ಗೆಲುವು ಗ್ಯಾರಂಟಿ: ಆರ್.ಬಿ.ಟಿ.

**ಮುಧೋಳ:** ರಾಜ್ಯದ ಸಂಡೂರ, ಚನ್ನಪಟ್ಟಣ ಹಾಗು ಶಿಗ್ಗಾಂವಿ ವಿಧಾನಸಭಾಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಈ ಮೂರೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವದು ಗ್ಯಾರಂಟಿ ಎಂದು ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ತಿಳಿಸಿದ್ದಾರೆ. ಶಿಗ್ಗಾಂವಿ ಕ್ಷೇತ್ರದ ಝೂಕೀರ ಅಹ್ಮದ ಪಠಾಣ ಪರ ಬಿರುಸಿನ ಪ್ರಚಾರ ನಡೆಸಿದ ನಂತರ



ಪತ್ರಕರ್ತರ ಜತೆ ಮಾತನಾಡಿದ ಅವರು ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಜನರು ಅಪಾರ ಗೌರವವನ್ನು ಇಟ್ಟುಕೊಂಡಿದ್ದಾರೆ. ಎಲ್ಲ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸುತ್ತಿದೆ, ಸರಕಾರದ ಐದು ಗ್ಯಾರಂಟಿಗಳು ಬಡವರಲ್ಲಿ ಆತ್ಮವಿಶ್ವಾಸ ಮೂಡಿಸಿದೆ ಅವರು ಆತ್ಮಗೌರವ ಮತ್ತು ಘನತೆಯಿಂದ ಬದುಕು ನಡೆಸಲು ಈ ಗ್ಯಾರಂಟಿಗಳು ಸಹಕಾರಿಯಾಗಿವೆ ಎಂದರು. ನಮ್ಮ ಪಕ್ಷದ ನಾಯಕರು ಮೂರೂ ಕ್ಷೇತ್ರದಲ್ಲಿ ಪ್ರಚಾರ ಕೈಗೊಳ್ಳುತ್ತಿದ್ದು ಕಾಂಗ್ರೆಸ್ ಪರ ಒಲವು ಇರುವದನ್ನು ಕಂಡು ವಿರೋಧ ಪಕ್ಷದವರು ಸುಳ್ಳುಗಳನ್ನು ಸೃಷ್ಟಿಸಿ ಮತದಾರರ ಗಮನ ಬೇರೇಡೆ ಸೆಳೆಯುವ ನಾಟಕ ನಡೆಯಲ್ಲ, ಹತಾಶಗೊಂಡಿರುವ ಅವರು ವಕ್ಫ ಆಸ್ತಿಯ ವಿವಾದ ಸೃಷ್ಟಿ ಮಾಡುತ್ತಿದೆ, ನಮ್ಮದು ಒಡೆದು ಆಳುವ ಪಕ್ಷ ಅಲ್ಲ, ಜನ ಸೌಹಾರ್ದಯುತ ಬಾಳಲಿ ಎಂಬ ಮಹದಾಸೆ ಪಕ್ಷದ್ದಾಗಿದೆ. ದೇಶದಲ್ಲಿ ಸೌಹಾರ್ದತೆ, ಸಮಗ್ರತೆ ಕಾಪಾಡಲು ಕಾಂಗ್ರೆಸ್ ಹೋರಾಡುತ್ತಿದೆ ಎಂದರು.

### ಕೊಣ್ಣೂರರಿಗೆ ವಿಶ್ವಮಾನ್ಯ ಪ್ರಶಸ್ತಿ

**ರಬಕವಿ-ಬನಹಟ್ಟಿ:** ಗ್ರಾಮಿಣ ಪ್ರದೇಶದಲ್ಲಿ ಶಿಕ್ಷಣದ ಪ್ರಸರಣಕ್ಕಾಗಿ ಮಾಡಿರುವ



ಗುರುತರ ಸೇವೆ ಪರಿಗಣಿಸಿ ಸಿಂಗಾಪೂರ ಅನಿವಾಸಿ ಕನ್ನಡಿಗರು ಮತ್ತು ಬೆಂಗಳೂರ ಪ್ರೆಸ್ ಕ್ಲಬ್ ಕೊಡ ಮಾಡುವ 'ಅಂತರಾಷ್ಟ್ರೀಯ ಮಟ್ಟದ ವಿಶ್ವಮಾನ್ಯ ಪ್ರಶಸ್ತಿ'ಗೆ ಯಲ್ಲಟ್ಟಿಯ ಕೊಣ್ಣೂರ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಪ್ರೊ.ಬಸವರಾಜ ಕೊಣ್ಣೂರ ಭಾಜನರಾಗಿದ್ದಾರೆ.ಇದೇ ದಿ.9 ರಂದು ಸಿಂಗಾಪೂರನಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರೊ.ಕೊಣ್ಣೂರ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

# ಕೂಡಲೇ ಬೆಳೆಹಾನಿ ಪರಿಹಾರ ಜಮಾ ಮಾಡಿ

## ಅಧಿಕಾರಿಗಳಿಗೆ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಸೂಚನೆ

**ಗೋಕಾಕ:** ಕಳೆದ ಆಗಸ್ಟ್ ತಿಂಗಳಲ್ಲಿ ಸಂಭವಿಸಿದ ಅತಿವೃಷ್ಟಿ ಮತ್ತು ಪ್ರವಾಹದಿಂದ ಹಾನಿಗೀಡಾಗಿರುವ ರೈತರ ಬೆಳೆಗಳಿಗೆ ಪರಿಹಾರ ಮೊತ್ತವನ್ನು ವಿತರಿಸುವ ಕೆಲಸವಾಗಬೇಕು. ಗೋಕಾಕ ಮೂಡಲಗಿ ತಾಲ್ಲೂಕು ಸೇರಿ 6516 ಹೆಕ್ಟೇರ್ ಪ್ರದೇಶವು ಬೆಳೆ ಹಾನಿಯಾಗಿದ್ದು, ಈ ಕೂಡಲೇ ರೈತರ ಖಾತೆಗಳಿಗೆ ಪರಿಹಾರವನ್ನು ಜಮೆ ಮಾಡುವಂತೆ ಅರಭಾವಿ ಶಾಸಕ ಮತ್ತು ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಎಸ್‌ಎಸ್‌ಎಫ್ ಕಛೇರಿಯಲ್ಲಿ ಸೋಮವಾರದಂದು ಗೋಕಾಕ ಮತ್ತು ಮೂಡಲಗಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ರೈತರಿಗೆ ಆಗಿರುವ ಬೆಳೆ ನಷ್ಟದ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಇದುವರೆಗೂ ಪರಿಹಾರ ಧನ ಬಂದಿಲ್ಲವೆಂದು ದೂರಿದರು.

ಅತಿವೃಷ್ಟಿ ಹಾಗೂ ಪ್ರವಾಹದಿಂದ ಸುಮಾರು 9ಕೋಟಿ ರೂ ಗಳಷ್ಟು ಕೃಷಿ ಬೆಳೆಗಳು ನಷ್ಟವಾಗಿವೆ. ಇದರಲ್ಲಿ ಈಗಾಗಲೇ ಸುಮಾರು 7ಕೋ.ರೂ ಗಳ ಬೆಳೆ ಪರಿಹಾರ ಸಂಬಂಧವಾಗಿ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಆದ-'ರೆ ಇದುವರೆಗೂ ರೈತರಿಗೆ ಪರಿಹಾರ ಧನ ಜಮಾ ಆಗಿಲ್ಲವೆಂದು ಬೇಸರ ಹೊರಹಾಕಿದ ಅವರು, ನೀರಾವರಿ ಕ್ಷೇತ್ರಗಳ ಬೆಳೆಗಳಿಗೆ ಪ್ರತಿ ಹೆಕ್ಟೆರ್‌ಗೆ ರೂ. 17 ಸಾವಿರ ಪರಿಹಾರ ನೀಡಲು ಮುಂದಾಗಿದೆ. ಅದರಲ್ಲಿ ಗೋಕಾಕ ತಾಲ್ಲೂಕಿನಲ್ಲಿ 2173 ಮತ್ತು ಮೂಡಲಗಿ ತಾಲ್ಲೂಕಿನಲ್ಲಿ 4343 ಹೆಕ್ಟೇರ್ ಪ್ರದೇಶವು ನೀರು ಪಾಲಾಗಿದೆ. ಜೊತೆಗೆ 50 ಹೆಕ್ಟೆರ್ ತೋಟಗಾರಿಕೆ ಬೆಳೆಗಳು ನಾಶವಾಗಿವೆ ಇದ-ರಿಂದ .ರೈತರು ಚಿಂತಾಜನಕ ಸ್ಥಿತಿಯಲ್ಲಿದ್ದು, ಕೂಡಲೇ ಸರ್ಕಾರವು ಹಾನಿಗೀಡಾದ ರೈತರ ಸಂಕಷ್ಟಕ್ಕೆ ಮುಂದಾಗಿ ಅವರ ಖಾತೆಗಳಿಗೆ ಪರಿಹಾರ ಮೊತ್ತವನ್ನು ನೀಡುವಂತೆ ಅವರು ಆಗ್ರಹಿಸಿದರು.



ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸಲು ತಾಲ್ಲೂಕಾ ಪಂಚಾಯತ್ ಕ್ರೀಯಾ ಯೋಜನೆಯೊಂದನ್ನು ಸಿದ್ಧಪಡಿಸಬೇಕು. ಪ್ರತಿ ಗ್ರಾಮ ಪಂಚಾಯತಿಗಳಿಗೆ ತಲಾ 40 ಲಕ್ಷ ರೂ ತನಕ ರಸ್ತೆಗಳ ನಿರ್ಮಾಣಕ್ಕೆ ಅಗತ್ಯವಿರುವ ಅನುದಾನವನ್ನು ನೀಡಬೇಕು. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅರಭಾವಿ ಕ್ಷೇತ್ರಕ್ಕೆ ವಿವಿಧ ವಸತಿ ಯೋಜನರಗಳಡಿ ಸುಮಾರು ಒಟ್ಟು 1480 ಮನೆಗಳು ಮಂಜೂರಾಗಿವೆ. ಇದರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆಯಡಿ ಅವರಾದಿಗೆ 100, ದುರದುಂಡಿಗೆ 25, ಬಡಿಗವಾಡಗೆ 40, ತುಕ್ಕಾನಟ್ಟಿಗೆ 15, ಯಾದವಾಡಕ್ಕೆ 70, ಕಳ್ಳಿಗುದ್ದಿ, ನಲ್ಲಾನಟ್ಟಿಗೆ ತಲಾ 25, ಬಸವ ವಸತಿ ಯೋಜನೆಯಡಿ ಬಳೋಬಾಳ, ನಲ್ಲಾನಟ್ಟಿಗೆ ತಲಾ 75, ತಪಸಿಗೆ 200, ಹುಣಶಾಳ ಪಿವೈ ಗೆ 100, ಕಾಮನಕಟ್ಟಿಗೆ 130, ಅವರಾದಿಗೆ 200, ಯಾದವಾಡಕ್ಕೆ 150, ಬಡಿಗವಾಡಗೆ 100 ಮತ್ತು ಕಳ್ಳಿಗುದ್ದಿ ಗ್ರಾಮ ಪಂಚಾಯತಿಗೆ 150 ಹೆಚ್ಚುವರಿ ಮನೆಗಳು ಮಂಜೂರಾಗಿವೆ ಎಂದು ಸಭೆಗೆ ವಿವರಿಸಿದ ಅವರು, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಬೇಕು. ಇದರಲ್ಲಿ ಯಾರಾದರೂ ಫಲಾನುಭವಿಗಳಿಂದ ದುಡ್ಡು ಪಡೆದು ಆಯ್ಕೆ ಮಾಡಿದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ನೀಡಿದರು. ಮನೆಗಳ ಹಂಚಿಕೆಯ ವಿಷಯದಲ್ಲಿ ನಿಜವಾದ ಬಡ ಕುಟುಂಬಗಳಿಗೆ ಅನ್ಯಾಯವಾಗಬಾರದು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.ಇದಕ್ಕಾಗಿ ಸರ್ಕಾರವು ಬಸವ ವಸತಿ ಮನೆಗಳ ನಿರ್ಮಾಣಕ್ಕೆ 1.50 ಲಕ್ಷ ರೂ ಅನುದಾನ ಕೊಡಲಿದ್ದು,. ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿಗೆ 2.25 ಲಕ್ಷ ರೂ. ಗಳನ್ನು ಪ್ರತಿ ಕುಟುಂಬದ ಫಲಾನುಭವಿಗಳಿಗೆ ಸರ್ಕಾರ ಅನುದಾನವನ್ನು ನೀಡಲಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಪ್ರತಿ ಗ್ರಾಮ ಪಂಚಾಯತಿಗಳಿಗೂ ತಲಾ 100 ಮನೆಗಳನ್ನು ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

ಮೂಡಲಗಿ ಪುರಸಭೆ, ಅರಭಾವಿ, ಕಲ್ಲೋಳಿ, ನಾಗನೂರ ಪಟ್ಟಣ ಪಂಚಾಯತಿಗಳ ಅಭಿವೃಧಿಗಾಗಿ ತಲಾ 10 ಕೋಟಿ ರೂಪಾಯಿ ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ಅನುದಾನದ ಬಿಡುಗಡೆಗಾಗಿ ಪ್ರಯತ್ನ ಮಾಡುತ್ತೇನೆ. ಸರ್ಕಾರದಿಂದ ಅನುದಾನ ಬಿಡುಗಡೆಯಾದರೆ ಶರವೇಗದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯಲಿವೆ. ಆದ-'ಷ್ಟು ಜನರ ಮೂಲ ಸೌಕರ್ಯಗಳನ್ನು ನೀಗಿಸಲು ಪ್ರಯತ್ನ ಪಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಮೇಶ್ವರ ಏತ ನೀರಾವರಿ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಬರುತ್ತಿಲ್ಲವೆಂಬ ದೂರುಗಳು ಬರುತ್ತಿವೆ. ಕೂಡಲೇ ಇದನ್ನು ಅಧಿಕಾರಿಗಳು ಸರಿಪಡಿಸಬೇಕು. ಲೋಳಸೂರ ಸೇತುವೆ ಕಾಮಗಾರಿಗೆ 50 ಕೋಟಿ ರೂಪಾಯಿ ಅನುದಾನ ಬಂದಿದ್ದು, ಇದರ ಕಾಮಗಾ-ರಿಯನ್ನು ಆರಂಭಿಸಬೇಕು. ತಿಗಡಿ ಮತ್ತು ಸುಣಧೋಳಿ ಜ್ಯಾಕ್ ವೆಲ್ ಬಗ್ಗೆಯೂ ನಿರಂತರ ಕಾಳಜಿ ವಹಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು. ಭೂ-ಮಾಪನ ಇಲಾಖೆಯ ಅಧಿಕಾರಿಗಳ ಬಗ್ಗೆಯೂ ರೈತರಿಂದ ವ್ಯಾಪಕವಾದ ದೂರುಗಳು ಈಗಾಗಲೇ ಬಂದಿವೆ. ಪರಿಸ್ಥಿತಿ ಹೀಗೇಯೇ ಮುಂದುವರೆದರೆ ಯಾವುದೇ ಮುಲಾಜಿಲ್ಲದೇ ಅಧಿಕಾರಿಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ಎಚ್ಚ-ರಿಕೆಯನ್ನು ಶಾಸಕರು ನೀಡಿದರು.

ದೇವಸ್ಥಾನಗಳಿಗೆ ತೆರಳುತ್ತಿರುವ ಭಕ್ತರ ವಾಹನಗಳನ್ನು ಪೋಲಿ ಸರು ನಿಲ್ಲಿಸಿ ದಂಡವನ್ನು ಹಾಕುತ್ತಿರುವ ದೂರು ಗಳು ಬರುತ್ತಿವೆ. ಕಾನೂನು ಪ್ರಕಾರವೇ ದಂಡವನ್ನು ಹಾಕಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಅನವಶ್ಯ ಕವಾಗಿ ಪ್ರಕರಣ ದಾಖಲು ಮಾಡಬೇಡಿ. ಭಕ್ತರಿಗೆ ಕಿರಿಕಿ-ರಿಯಾ ಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳಿಗೂ ಎಚ್ಚರಿಸಿದರು. ಗೋಕಾಕ ತಹಶೀಲ್ದಾರ ಡಾ. ಮೋಹನ ಭಸ್ಮೆ, ಮೂಡಲಗಿ ತಹಶೀಲ್ದಾರ ಶಿವಾನಂದ ಬಬಲಿ, ಗೋಕಾಕ ತಾ. ಪಂ. ಇಓ ಪರಶುರಾಮ ಗಸ್ತೆ, ಮೂಡಲಗಿ ತಾ.ಪಂ. ಇಓ ಫಕೀರಪ್ಪ ಚಿನ್ನನ್ನವರ ಸೇರಿದಂತೆ ಗೋಕಾಕ ಮತ್ತು ಮೂಡಲಗಿ ತಾಲ್ಲೂಕು ಮಟ್ಟದ ವಿವಿಧ ಅಧಿಕಾ-ರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತ ಅಧಿಕಾರಿಗಳು, ಅಭಿಯಂತರರು ಭಾಗವಹಿಸಿದ್ದರು.

# ನಿವೃತ್ತ ನೌಕರರ ಸಂಘದ ಮಾಸಿಕ ಸಭೆ

**ಬಸವನಬಾಗೇವಾಡಿ:** ಪಟ್ಟಣದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸೋಮವಾರ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಮಾಸಿಕ ಸಭೆ ಸಂಘದ ತಾಲೂಕಾಧ್ಯಕ್ಷ ಎಫ್.ಡಿ.ಮೇಟಿ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯಲ್ಲಿ ಪಿಂಚಣಿದಾರರು ಜೀವಿತ ಪ್ರಮಾಣ ಪತ್ರವನ್ನು ಭಾರತೀಯ ಸ್ಟೇಟ್ ಬ್ಯಾಂಕಿಗೆ ಸಲ್ಲಿಸುವದು. ಸೈಬರ್ ಕಳ್ಳರ ಬಗ್ಗೆ ಎಚ್ಚರಿಕೆ ವಹಿಸುವದು. ನಿವೃತ್ತ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಸಿಎಂ ಸಿದ್ದರಾಮಯ್ಯನವರಿಗೆ ಸಂಘದ ಕೇಂದ್ರ ಅಧ್ಯಕ್ಷರು ಭೇಟಿ ಮಾಡಿರುವ ಕು-ರಿತು, ಈಚೆಗೆ ವಿಜಯಪುರದಲ್ಲಿ ಜರುಗಿದ ಜಿಲ್ಲಾ ನಿವೃತ್ತ ನೌಕರರ ಸಮಾವೇಶ ಕು-ರಿತು ಮಾಹಿತಿ ನೀಡಲಾಯಿತು. ಸಭೆಯಲ್ಲಿ ಇತರೇ ವಿಷಯಗಳನ್ನು ಚರ್ಚಿಸಲಾಯಿತು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಸ್ಥಳೀಯ ಜನಪದ ಗಾಯಕ ಬಸವರಾಜ ಹಾರಿವಾಳ ಅವರನ್ನು ಸಂಘದಿಂದ ಸನ್ಮಾನಿಸಲಾಯಿತು. ಇವರ ಕುರಿತು ಎಂ.ಜಿ.ಆದಿಗೊಂಡ,ಸುರೇಶಗೌಡ ಪಾಟೀಲ, ಎಸ್.ಎಸ್.ಝುಳಕಿ, ಎಸ್. ಕೆ.ಸೋಮನಕಟ್ಟಿ, ಎಫ್.ಡಿ.ಮೇಟಿ ಮಾತನಾಡಿದರು. ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಶಾಖೆಯ ಆರ್ಥಿಕ ಸಲಹೆಗಾರ ಚಿಮ್ಮಲಿಗ ಅವರು ಬ್ಯಾಂಕಿನ ಕುರಿತು ಮಾಹಿತಿ ನೀಡಿದರು. ಇದೇ ತಿಂಗಳು ಇವಣಗಿ ಗ್ರಾಮದಲ್ಲಿ ನಡೆಯುವ ತಾಲೂಕು ಹತ್ತನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಿವೃತ್ತ ನೌಕರರರು ಆಗಮಿಸಬೇಕೆಂದು ತಾಲೂಕು ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ, ಗೌರವ ಕಾರ್ಯದರ್ಶಿ ಯಮನಪ್ಪ ಮಿಣಜಗಿ ಮನವಿ ಮಾಡಿಕೊಂಡರು. ಎಂ.ಜಿ.ಆದಿಗೊಂಡ ಸ್ವಾಗತಿಸಿದರು. ಎಸ್. ಕೆ.ಸೋಮನಕಟ್ಟಿ ನಿರೂಪಿಸಿ,ವಂದಿಸಿದರು.




# ಬಡಜಂಗಮ ಕುಟುಂಬದ ಸಾಧಕಿಗೆ ಸನ್ಮಾನ



**ರಬಕವಿ-ಬನಹಟ್ಟಿ:** ತಾಲೂಕಿನ ಹೊಸೂರ ಗ್ರಾಮದ ಜಯಶ್ರೀ ಸಿದ್ರಾಮಯ್ಯ ಮಠಪತಿ ಎಂಬ ಯುವತಿಯು ಕೂಲಿ ಮಾಡುವ ಬಡಜಂಗಮ ತಂದೆ ತಾಯಿಗಳ ದುಡುಮೆಯಲ್ಲಿ ವ್ಯಾಸಾಂಗ ಮಾಡುತ್ತಲೆ ಕರ್ನಾಟಕ ಪ್ರಾಧಿಕಾರ ನಡೆಸಿದ, 545 ಪಿಎಸ್‌ಐ ಹುದ್ದೆಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಸಧ್ಯ ಇಲಾಖೆಯಿಂದ ಹೊರಡಿಸಿದ ತಾತ್ಕಾಲಿಕ ಪಟ್ಟಿಯಲ್ಲಿ ಜಯಶ್ರೀ ಹೆಸರು ಇದ್ದು, ಅವಳಿ ನಗರ ಮತ್ತು ಹೊಸೂರ ಗ್ರಾಮದಲ್ಲಿ ಸಂತಸದ ಸಾಧನೆಯಾಗಿದೆ ಎಂದು ರಬಕವಿ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹಾಗು ವಕೀಲ ಇರಾದ ಗುರುಪಾದಯ್ಯಾ ಅಮ್ಮಣಗಿಮಠ ಹೇಳಿದರು.ಪ್ರತಿ ಬಡಕುಟುಂಬದಲ್ಲಿ ತಂದೆ ತಾಯಿಗಳ ಆಶೆ ನಿರಾಶೆ ಮಾಡದೆ ಸಾಧಿಸುವ ಶಕ್ತಿಯಾಗಿ ವಿದ್ಯಾರ್ಥಿಗಳು ಹೊಮ್ಮಬೇಕು ಇದಕ್ಕೆ ನಿದರ್ಶನವೆ ಹೊಸೂರ ಗ್ರಾಮದ ಜಯಶ್ರೀ ಮಠಪತಿಗೆ ಸನ್ಮಾನಸಿ ತಿಳಿದರು. ಶಿವಾನಂದ ಮಠದ. ವಿವೇಕಾನಂದ ಹಿರೇಮಠ. ಗಂಗಯ್ಯ ಹಿರೇಮಠ. ವಿಧ್ಯಾನಂದ ಬಾಗಲಕೊಟಮಠ. ಚಿದಾನಂದ ಅಮ್ಮಣಗಿಮಠ.ಶಿವಾನಂದ ಚಿಕ್ಕಮಠ. ಸೇರಿದಂತೆ ಅನೇಕರು ಇದ್ದರು.

# ಮಾಜಿ ಸಚಿವ ದಿ.ಎಂ.ಸಿ.ಮನಗೂಳಿ ಅವರ ಪುತ್ಥಳಿ ಅನಾವರಣ



**ಸಿಂದಗಿ:** ನಗರವೊಮ್ಮೆ ಸುತ್ತಿಕೊಂಡು ಬಂದರೆ ಮನಗೂಳಿ ಅವರ ಅಭಿವೃದ್ದಿ ಕಾರ್ಯಗಳು ಮತನಾಡುತ್ತಿವೆ ಎಂದು ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹೇಳಿದರು. ಪಟ್ಟಣದ ತಾಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ಮನಗೂಳಿ ಆಯುರ್ವೇದ ಮಹಾವಿದ್ಯಾಲಯದ ಆವರಣದಲ್ಲಿ ಮಾಜಿ ಸಚಿವ ದಿ.ಎಂ.ಸಿ.ಮನಗೂಳಿ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಸಿಂದಗಿ ಪಟ್ಟಣ-ಕ್ಕೆ ಕುಡಿಯುವ ನೀರಿನ ಸಮಸ್ಯೆ ಎಸ್ಟಿತ್ತೆಂದರೆ ಇಲ್ಲಿನ ಹುಡುಗ-ರಿಗೆ ಮದುವೆಯಾಗಲು ಕನ್ಯಾ ಕೊಡದಂತಹ ಸ್ಥಿತಿಯೊಂದಿತ್ತು. ಇಂತಹ ಹಣೆ ಪಟ್ಟಿಯನ್ನು ಕಾಯಂ ಆಗಿ ಹೋಗಲಾಡಿಸಿ ಶಾಶ್ವತ ಕುಡಿಯುವ ನೀರಿನ ಬವಣೆಯನ್ನು ನೀಗಿಸಿ ಆಧುನಿಕ ಭಗೀರಥ ಎಂಬ ಕೀರ್ತಿಗೆ ಭಾಜನರಾದ ತಂಪ್ಪೊತ್ತಿನಲ್ಲಿ ಸದಾ ಸ್ಮರಿಸುವ ಮಹಾನುಭಾವರೆಂದರೆ ಅದು ಎಂ.ಸಿ.ಮನಗೂಳಿಯವರು ಎಂದು ಗುಣಗಾನ ಮಾಡಿದರು.

ಈ ವೇಳೆ ತಾಶಿಪ್ರ ಮಂಡಳಿಯ ನಿರ್ದೇಶಕ ಶಿವಪ್ಪಗೌಡ ಬಿರಾದಾರ ಮಾತನಾಡಿ, ಈ ಭಾಗದ ನೀರಾವರಿ ಹ-ರಿಕಾರ, ಅಪರೂಪದ ಸರಳ ಸಜ್ಜನಿಕೆಯ ರಾಜಕಾರಣಿಯಾದ ಎಂ.ಸಿ.ಮನಗೂಳಿ ಅವರು ತಮ್ಮೊಡನೆ ಇತರರನ್ನು ಕೈಹಿಡಿದು ಕರೆದೊಯ್ಯುವ ಆತ್ಮೀಯತೆ ಸ್ವಭಾವದರಾಗಿದ್ದರು. ಅವರ ಶಕ್ತಿ ಇದ್ದಾಗ ದುಡಿಬೇಕು, ಧನ ಸಂಪತ್ತಿದ್ದಾಗ ದಾನ-ಧರ್ಮ ಮಾಡಬೇಕು, ಅಧಿಕಾರವಿದ್ದಾಗ ಪ್ರಾಮಾಣಿಕವಾಗಿ ಜನ ಸೇವೆ, ಅಭಿವೃದ್ಧಿ ಕಾರ್ಯ ಮಾಡಬೇಕು ಎನ್ನುವ ಅವರ ಉದಾತ್ತ ಧ್ಯೇಯವನ್ನು ಪರಿಪಾಲಿಸಿಕೊಂಡು ಬಂದಿರುವ ಅವರ ಪುತ್ರ ಅಶೋಕ ಮನಗೂಳಿ ಅವರು ಕೂಡಾ ಅಷ್ಟೇ ಕ್ರಿಯಾಶೀಲ ವ್ಯಕ್ತಿಯಾಗಿದ್ದು, ಕ್ಷೇತ್ರಾದ್ಯಂತ ಆಲಮೇಲ ತೋಟಗಾರಿಕಾ ಕಾಲೇಜು, ಕಡಣಿ ಬ್ಯಾರೇಜ್, ಪಟ್ಟಣದ ಅಲಂಕಾರಿಕ ಬೀದಿ ದೀಪಗಳು, ರಸ್ತೆ ವಿಭಜಕಗಳಲ್ಲಿ ಸಾಲು ಮರಗಳು, ಟ್ರೀ ಪಾರ್ಕ್ ನಿರ್ಮಾಣದಂತಹ ಅನೇಕ ಅಭಿವೃಧ್ಧಿಪರ ಶಾಶ್ವತ ಯೋಜನೆಗಳನ್ನು ಜಾರಿಗೊಳಿಸಿದ ಕೀರ್ತಿ ಪ್ರಸ್ತುತ ಶಾಸಕರಿಗೆ ಸಲ್ಲುತ್ತದೆ ಎಂದರು.

ಈ ವೇಳೆ ಊರನ ಹಿರಿಯ ಮಠದ ಶಿವಾನಂದ ಶಿವಾಚಾರ್ಯರು, ರಾಜ್ಯ ಕೃಷಿ ಇಲಾಖೆಯ ನಿರ್ದೇಶಕ ಪರವೇಜ್ ಬಂಥನಾಳ, ಡಾ.ಅರವಿಂದ ಮನಗೂಳಿ ವೇದಿಕೆಯ ಮೇಲಿದ್ದರು. ಕಾರ್ಯಕ್ರಮದಲ್ಲಿ ಶಾಸಕ ಅಶೋಕ ಮನಗೂಳಿ, ಡಾ.ಶಾಂತವೀರ ಮನಗೂಳಿ, ಡಾ.ಸಂಧ್ಯಾ ಮನಗೂಳಿ, ನಾಗರತ್ನ ಮನಗೂಳಿ, ಡಾ.ಚೆನ್ನವೀರ ಮನಗೂಳಿ, ಭರತ ಮನಗೂಳಿ, ಪುರಸಭೆ ಉಪಾಧ್ಯಕ್ಷ ರಾಜಣ್ಣ ನಾರಾಯಣಕರ, ಎಂ.ಎಂ.ಹಂಗರಗಿ, ಮಹಾನಂದ ಬಮ್ಮಣ್ಣಿ, ಸುನಂದಾ ಯಂಪುರೆ, ಶಶಿಕಲಾ ಅಂಗಡಿ, ಪ್ರತಿಭಾ ಚಳ್ಳಗಿ, ಸಂಗೀತಾ ತಿಕೋಟಿ, ಸಿದ್ದು ಮಲ್ಲೇದ, ಕುಮಾರ ಬಗಲಿ, ಎನ್.ವ್ಹಿ.ಕುಲಕರ್ಣಿ, ಸಂಗು ಬಿರಾದಾರ, ಸತೀಶ ಬಸರಕೋಡ, ಮನಗೂಳಿ ಪರಿವಾರ ಸೇರಿದಂತೆ ಹಲವರು ಇದ್ದರು. ಪ್ರಾಚಾರ್ಯ ಎ.ಆರ್.ಹೆಗ್ಗಣದೊಡ್ಡಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಸಿದ್ದಲಿಂಗ ಕಿಣಗಿ ನಿರೂಪಿಸಿ ವಂದಿಸಿದರು. ಡಾ.ಪ್ರಕಾಶ ಮೂಡಲಗಿ ಪ್ರಾರ್ಥಿಸಿದರು.

# ಮೊಬೈಲ್ ಕಳ್ಳತನ ಪತ್ತೆ: ವಾರಸುದಾರರಿಗೆ ಹಸ್ತಾಂತರ

**ರಬಕವಿ-ಬನಹಟ್ಟಿ:** ಬನಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು, ನಾಪತ್ತೆಯಾಗಿದ್ದ 30 ಮೊಬೈಲ್‌ಗಳನ್ನು ಪತ್ತೆ ಹೆಚ್ಚಿ ಜಮಖಂಡಿ ಡಿವೈಎಸ್ಪಿ ಶಾಂತವೀರ ಈ, ಸಿಪಿಐ ಸಂಜು ಬಳಗಾರ, ಪಿಎಸ್‌ಐ ಶಾಂತಾ ಹಳ್ಳಿ, ವಿಜಯ ಕಾಂಬಳೆ ಅವರ ಸಮ್ಮುಖದಲ್ಲಿ ವಾರಸುದಾರರಿಗೆ ಠಾಣೆಯಲ್ಲಿ ಹಸ್ತಾಂತರಿಸಲಾಯಿತು.

ಕಳವು ಮಾಡಲಾದ ಹಾಗು ನಾಪತ್ತೆಯಾಗಿದ್ದ 8 ಮೊಬೈಲ್‌ಗಳನ್ನು ಸಿಇಐಆರ್(ಕೇಂದ್ರ ಉಪಕರಣ ಗುರುತು ನೋಂದಣಿ) ಪೋರ್ಟಲ್ ಮೂಲಕ ಪತ್ತೆ ಹಚ್ಚಲಾಗಿದೆ.

ಡಿವೈಎಸ್ಪಿ ಶಾಂತವೀರ ಮಾತನಾಡಿ, ಮೊಬೈಲ್ ಪತ್ತೆಗೆ ಪೊಲೀಸರ ನಿರೀಕ್ಷೆಗೆ ಸಿಇಐಆರ್ ಪೋರ್ಟಲ್ ಬಲ ತುಂಬಿದೆ. ಸ್ವಯಂಪ್ರೇರಿತ ಆನ್‌ಲೈನ್‌ದಲ್ಲಿಯೂ ಪೋರ್ಟಲ್ ಭರ್ತಿ ಮಾಡಿ ಮಾಹಿತಿ ಒದಗಿಸಿ ನೊಂದಣಿ ಮಾಡಬಹುದಾಗಿದ್ದು, ಇದರಿಂದ ಮೊಬೈಲ್ ಪತ್ತೆಗೆ ಸಾಕಷ್ಟು ಸಹಾಯ ಮಾಡಲಿದೆ ಎಂದರು.ಸನ್ಮಾನ: ಇದೇ ಸಂದರ್ಭ ಮೊಬೈಲ್‌ಗಳ ಪತ್ತೆಗೆ ಶ್ರಮವಹಿಸಿದ ಪೊಲೀಸ್ ಸಿಬ್ಬಂದಿಗಳಾದ ಧರೆಪ್ಪ ಕುಂಬಾರ, ವಿಠ್ಠಲ ಅಜ್ಜನಗೌಡರ, ಸಂತೋಷ ಕೌಜಲಗಿಯವರನ್ನು ಸನ್ಮಾನಿಸಲಾಯಿತು.



# ಮಲ್ಲಿಕಾರ್ಜುನ ದೇವರ ಕಳಸೋತ್ಸವ



**ರಬಕವಿ–ಬನಹಟ್ಟಿ, :** ಸೋಮವಾರ ಸಂಜೆ ಬನಹಟ್ಟಿಯ ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಕಳಸೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು.

ಕರಡಿ, ಸಂಬಾಳ ವಾದ್ಯಗಳೊಂದಿಗೆ ಕಳಸೋತ್ಸವವು ಸೋಮವಾರ ಪೇಟೆಯಿಂದ ಪ್ರಾರಂಭಗೊಂಡು ನಗರದ ಪ್ರಮುಖ ಬೀದಿಗಳ ಮೂಲಕ ಸಂಚರಿಸಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದವರೆಗೆ ತೆರಳಿ ಕೊನೆಗೆ ಬಾವಲತ್ತಿಯವರ ಮನೆಯವರೆಗೆ ನಡೆಯಿತು.

ಮೂರು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವ ಅತಿ ವಿಜೃಂಭಣೆಯಿಂದ ಜರುಗಿತು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ತುಂಗಳ, ಮಹಾಶಾಂತ ಶೆಟ್ಟಿ, ಶಿವು ಬಾಗೇವಾಡಿ, ಚೆನ್ನಪ್ಪ ಗುಣಕಿ, ಮಲ್ಲಿಕಾರ್ಜುನ ಬಾವಲತ್ತಿ, ಕಿರಣ ಆಳಗಿ, ಪ್ರಶಾಂತ ಕೊಳಕಿ, ಮಲ್ಲಪ್ಪ ಜನವಾಡ, ಚನ್ನಬಸಯ್ಯ ಮಠಪತಿ, ಗಂಗಪ್ಪ ಹಾದಿಮನಿ, ಬಾಳು ಗಣೇಶನವರ, ಸಂಗಣ್ಣ ಬಾವಲತ್ತಿ, ಬಸವರಾಜ ಹೂಗಾರ, ರಾಜು ಲುಕ್ಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


****

# ಬೀದಿ ಭರಮಪ್ಪನ ಪೂಜೆ



**ಮಹಾಲಿಂಗಪುರ :** ಸ್ಥಳೀಯ ನೀಲಕಂಠೇಶ್ವರ ಮಠದಲ್ಲಿ ದೀಪಾವಳಿ ಪಾಡ್ಯ ನಿಮಿತ್ತ ಪ್ರತಿ ವರ್ಷದಂತೆ ಬೀದಿ ಭರಮಪ್ಪನ ಮೂರ್ತಿ ಪ್ರತಿಷ್ಠಾಪಿಸಿ ನಿತ್ಯ ಪೂಜಿಸಿ ಮಂಗಳವಾರ ಮಂಗಳಾರತಿಯೊಂದಿಗೆ ಮುಕ್ತಾಯಗೊಳಿಸಲಾಯಿತು. ಮಹೇಶ ಜಿಡ್ಡಿಮನಿ, ರವಿ ಮುಂಡಗನೂರ, ಬಸಯ್ಯ ಹಿರೇಮಠ, ಶ್ರೀಶೈಲ ಬೀಸನಕೊಪ್ಪ, ಬಸವರಾಜ ಗೊಲಭಾಂವಿ, ಬಸವರಾಜ ಬೀಸನಕೊಪ್ಪ, ನವೀನ ಮುಂಡಗನೂರ, ಮಹಾಂತೇಶ ಗೊಲಭಾಂವಿ, ವಿನಾಯಕ ಬೀಸನಕೊಪ್ಪ, ಶಿವಯ್ಯ ಹಿರೇಮಠ, ಚೇತನ ಜೀರಗಾಳ, ಶಂಕರ ಬೀಸನಕೊಪ್ಪ, ಈರಯ್ಯ ಹಿರೇಮಠ, ಸೋಮು ಗುಣದಾಳ, ರಾಘು ಬರಗಿ, ಪ್ರವೀಣ ಮುಂಡಗನೂರ, ಸುರೇಶ ಗೊಲಭಾಂವಿ, ರೋಹನ ಮುಗಳಖೋಡ, ಶ್ರವಣ ಜಿಡ್ಡಿಮನಿ, ನಿಖಿಲ ಕೊಣ್ಣೂರ, ಸಂತೋಷ ಅವರಾದಿ, ಉದಯ ಗೊಲಭಾಂವಿ, ಬಸಪ್ಪ ಢವಳೇಶ್ವರ, ಬಸವರಾಜ ಗೊಲಭಾಂವಿ, ಮಹೇಶ ಬೀಳಗಿ, ಶಂಕರ ಯಾದವಾಡ, ಶ್ರೀಶೈಲ ಬಾಳಿಗಿಡದ, ಕಿರಣ ಮುಂಡಗನೂರ ಇದ್ದರು.

# ದೀಪಾವಳಿ ಕಡೆಪಾಡ್ಯೆ ನಿಮಿತ್ತ ಪ್ರಭುದೇವರ ಪಲ್ಲಕ್ಕಿ ಉತ್ಸವ



**ತೇರದಾಳ**–ಬೆಳಕಿನ ಹಬ್ಬ ದೀಪಾವಳಿ ಕಡೆಪಾಡ್ಯೆ ನಿಮಿತ್ತ ಬುಧವಾರ ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವ ಸಂಭ್ರಮ ಸಡಗರದಿಂದಜರುಗಿತು.

ಹಬ್ಬದ ನಿಮಿತ್ತ ನಸುಕಿನ ಜಾವ ಪ್ರಭುದೇವರ ಗದ್ದುಗೆಗೆ ರುದ್ರಾಭಿಷೇಕ, ಅಲಂಕಾರಿತ ಪೂಜೆ, ಉದು ನೀಡುವುದು, ಮಂಗಳಾರುತಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಅರ್ಚಕ ಪರಯ್ಯ ಮೇಲಿನಮನಿ ಅವರಿಂದ ನಡೆದವು. ಬಳಿಕ ಸಂಪ್ರದಾಯದಂತೆ ನಾಡಗೌಡರ ಮನೆಯಿಂದ ಆರುತಿ ಬಂದ ಬಳಿಕ ವಿಶೇಷ ಪೂಜೆ ನಡೆಸಿ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದಿಂದ ಹೊರಟ ಉತ್ಸವ ಸಿದ್ದೇಶ್ವರ ಗಲ್ಲಿ, ಜವಳಿ ಬಜಾರ, ಕನ್ನಡ ಶಾಲೆ, ದ್ವಾರ ಬಾಗಿಲು, ಎಸ್‌ಬಿಐ ಮುಖಾಂತರ ತೆರಳಿ ದೇಸಾರ ಬಾವಿ ತಲುಪಿತು. ಅಲ್ಲಿ ಸುಮಾರು ಎರಡು ಗಂಟೆಗೂ ಅಧಿಕ ಕಾಲ ನೂರಾರು ಭಕ್ತರಿಂದ ಸಾಮೂಹಿಕವಾಗಿ ಅಭಿಷೇಕ ಜರುಗಿತು. ಉತ್ಸವದ ದಾರಿಯುದ್ಧಕ್ಕೂ ಭಕ್ತರು ವಚನ ಗೀತೆಗಳನ್ನು ಹಾಡಿದರು. ಬಣ್ಣ ಬಣ್ಣದ ರಂಗೋಲಿ ಉತ್ಸವಕ್ಕೆ ಸ್ವಾಗತ ಕೋ–ರಿದವು. ವಾದ್ಯಮೇಳಗಳು ಕಳೆ ಕಟ್ಟಿದವು. ದೇಸಾರ ಬಾವಿಯಲ್ಲಿ ಸಾಮೂಹಿಕಭಿಷೇಕ ಮುಗಿಗಿಯುವ ವರೆಗೆ ಭಕ್ತರು ಉಪವಾಸ ಇರುವುದು ವಾಡಿಕೆ.

# ಸರ್ಕಾರ ವಿರುದ್ಧ ಅರುಣ ಕಾರಜೋಳ ಆಕ್ರೋಶ



ಮುಧೋಳ: ರಾಜ್ಯಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದ ವಕ್ಫ್ ಆಸ್ತಿಗಾಗಿ ರೈತರ, ಮಠ–ಮಂದಿರಗಳ, ಹಿಂದೂಗಳ ಜಮೀನು ಕಬಳಿಸುವ ಹುನ್ನಾರ ನಡೆದಿದೆ. ಎಂದು ಆರೋಪಿಸಿ, ಸರ್ಕಾರದ ಧೋರಣೆ ಖಂಡಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇವರೆಲ್ಲರ ಜಮೀನುಗಳ ಪಹಣಿಯಲ್ಲಿ ವಕ್ಫ್ ಎಂದು ಉಲ್ಲೇಖಿಸಲಾಗಿದೆ.

ಸದ್ದು ಮಾಡದೆ ರಾಜ್ಯ ಸರ್ಕಾರ ವಕ್ಫ್ ಜತೆ ಸೇರಿಕೊಂಡು ಮುಸ್ಲಿಂರ ತುಷ್ಟೀಕರಣಕ್ಕಾಗಿ ಜನರ ಜಮೀನನ್ನು ಕಬಳಿಸುತ್ತಿದೆ ಎಂದು ಸರ್ಕಾರದ ವಿರುದ್ಧ ಬಿಜೆಪಿ ಯುವ ನಾಯಕ ಅರುಣ ಕಾರಜೋಳ ಆಕ್ರೋಶವ್ಯಕ್ತಪಡಿಸಿದ್ದಾರೆ.

ಕೆಲ ಸಮಯ ತಹಸೀಲ್ದಾರರ ಕಚೇರಿ ಬಂದ ಮಾಡಿ ರಸ್ತೆ ತಡೆ ನಡೆಸಿ ಬಿಜೆಪಿ. ಕಾಯ9ಕತ9ರು ಅಸಮಾಧಾನ ವ್ಯಕ್ತ ಪಡಿಸಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರೀ ಹಗರಣಗಳಲ್ಲೇ ಮುಳುಗಿದೆ. ವಾಲ್ಮೀಕಿ ನಿಗಮ, ಮುಡಾ ಹಗರಣ ಈಗ ವಕ್ಫ್ ವಿವಾದ ಆರಂಭಿಸಿದೆ. ಶಾಸಕರಿಗೆ ಅನುದಾನ ಕೊಡಲಾಗದಷ್ಟು ಸರಕಾರ ದಿವಾಳಿಯಾಗಿದೆ ಎಂದರು.

ಮುಖಂಡ ನಾಗಪ್ಪ ಅಂಬಿ ಮಾತನಾಡಿ, ನೂರಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಬಂದಿದ್ದ ರೈತರ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗುತ್ತಿದೆ. ಸಚಿವ ಜಮೀರ್ ಅಹಮದ್ ಜಿಲ್ಲಾಧಿಕಾರಿಗಳಿಗೆ ಒತ್ತಡ ಹಾಕಿ ಹೀಗೆ ಮಾಡಿಸುತ್ತಿದ್ದಾರೆ. ಮುಖ್ಯಮಂತ್ರಿಗಳ ಗಮನಕ್ಕೆ ಹೇಗೆ ಬರುವುದಿಲ್ಲ ಎಂದು ಪ್ರಶ್ನಿಸಿಸಿದರು.

ಡಾ.ರವಿ ನಂದಗಾಂವ, ಎಸ್.ಎಸ್. ಅಕ್ಕಿಮರಡಿ, ಸುನೀಲ ಕಂಬೋಗಿ, ಶ್ರೀಶೈಲಗೌಡ ಪಾಟೀಲ, ಶಂಕರ ಪಾಟೀಲ, ರಾಜು ಟಂಕಸಾಲಿ, ಕೆ.ಆರ್. ಮಾಚಪ್ಪನವರ, ಆರ್.ಟಿ. ಪಾಟೀಲ, ಶ್ರೀಕಾಂತ ಗುಜ್ಜನ್ನವರ, ರಾಜು ಯಡಹಳ್ಳಿ, , ಸಂಗಣ್ಣ ಕಾತರಕಿ, ಸೊನಾಪ್ಪಿ ಕುಲಕಣಿ9. ಸದಾ ತೇಲಿ, ಕರಬಸಯ್ಯ ಹಿರೇಮಠ, ಕಲ್ಮೇಶ ಗೋಸಾರ, ಲೋಕಣ್ಣ ಕತ್ತಿ, ಗುರುಪಾದ ಕುಳಲಿ, ಚಿನ್ನಣ್ಣವರ, ಇತರರಿದ್ದರು.

## ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ವಿತರಣೆ

ವಿಜಯಪುರ, : ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ (ಬಿ.ಪಿ.ಎಲ್) ನೀಡಲು ಆದೇಶಿಸಿದ್ದು, ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹ ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭವಾಗಿರುತ್ತದೆ.

ಆದ್ದರಿಂದ ಆದ್ಯತಾ ಪಡಿತರ ಚೀಟಿ ಹೊಂದಿಲ್ಲದ ಇ–ಶ್ರಮ್ ನೋಂದಾಯಿತ ಎಲ್ಲಾ ಅರ್ಹ ಕಾರ್ಮಿಕರು ನಿಮ್ಮ ಹತ್ತಿರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ದೂರವಾಣಿ ಸಂಖ್ಯೆ:1800–425–9339 ಅಥವಾ ಸಹಾಯವಾಣಿ 1967ಕ್ಕೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆವಿಗೂ ಸಂಪರ್ಕಿಸುವಂತೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪ್ರವೇಶಾತಿಗಾಗಿ ನವೆಂಬರ್ ೧೫ ಕೊನೆಯ ದಿನ

ವಿಜಯಪುರ, : ವಿಜಯಪುರದ ಪ್ರಾದೇಶಿಕ ಕೇಂದ್ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ವಿವಿಧ ಕೋರ್ಸ‌ಗಳಿಗೆ ಪ್ರವೇಶ ಪಡೆಯಲು ನವೆಂಬರ್ 15 ಕೊನೆಯ ದಿನವಾಗಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9483628267, 9483920065, 7892550053 ಹಾಗೂ 9110256738 ಮತ್ತು ನಗರದ ಆಕಾಶವಾಣಿ ಕೇಂದ್ರದ ಎದುರಿಗೆ, ವಿ.ಎಸ್.ಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಆವರಣದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕಚೇ–ರಿಯನ್ನು ಸಂಪರ್ಕಿಸುವಂತೆ ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಗ್ಗಾಂವ ವಿಧಾನಸಭೆ ಉಪ ಚುನಾವಣೆ: ಮದ್ಯ ಮಾರಾಟ ನಿಷೇಧ

ಹಾವೇರಿ: ಶಿಗ್ಗಾಂವ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ–2024ರ ಅಂಗವಾಗಿ ನವೆಂಬರ್ 13 ರಂದು ಮತದಾನ ನಡೆಯಲಿದ್ದು, ಚುನಾವಣಾ ಆಯೋಗದ ನಿರ್ದೇಶನದಂತೆ ಹಾವೇರಿ ಜಿಲ್ಲಾ ವ್ಯಾಪ್ತಿಯಲ್ಲಿ ನ.11ರ ಸಂಜೆ 6 ಗಂಟೆಯಿಂದ ನ.14ರ ಬೆಳಿಗ್ಗೆ 6 ಗಂಟೆವರೆಗೆ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಮತದಾನ ಮುಕ್ತಾಯಗೊಳ್ಳುವ 48 ಗಂಟೆಯ ಅವಧಿ ಪೂರ್ವದಲ್ಲಿ ಹಾವೇರಿ ಜಿಲ್ಲೆಯ 83–ಶಿಗ್ಗಾಂವ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಿರುವ ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಯ ಗಡಿಭಾಗದ 5 ಕಿ.ಮೀ. ವ್ಯಾಪ್ತಿಯ ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧ ಮಾಡಿ ಆದೇಶ ಹೊರಡಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

ಜಿಲ್ಲಾಧಿಕಾರಿಗಳಿಂದ ಚೆಕ್ ಪೋಸ್ಟ್ ಭೇಟಿ

ಹಾವೇರಿ:ನ.05(ಕರ್ನಾಟಕ ವಾರ್ತೆ): ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ–2024 ರ ಅಂಗವಾಗಿ ಯಲವಿಗಿಯಲ್ಲಿ ಸ್ಥಾಪಿಸಲಾದ ಚೆಕ್ ಪೋಸ್ಟ್‌ಗೆ ಮಂಗಳವಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಭೇಟಿ ನೀಡಿ, ವಾಹನ ತಪಾಸಣೆ ಕಾರ್ಯ ಪರಿಶೀಲನೆ ನಡೆಸಿದರು.

ಕಡ್ಡಾಯವಾಗಿ ಎಲ್ಲ ವಾಹನಗಳ ತಪಾಸಣೆ ನಡೆಸಬೇಕು ಎಂದು ಚೆಕ್ ಪೋಸ್ಟ್ ಕರ್ತವ್ಯಕ್ಕೆ ನಿಯೋಜಿತ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಸವಣೂರಿನಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ್ಕೆ ಭೇಟಿ ನೀಡಿ, ಘನತ್ಯಾಜ್ಯ ನಿರ್ವಹಣೆ ಕುರಿತು ಪರಿಶೀಲನೆ ನಡೆಸಿದರು.

# ಮಾಧವಾನಂದ ಪ್ರಭೂಜಿಯವರ 109 ನೇ ಜಯಂತ್ಯೋತ್ಸವ



**ಯರಗಟ್ಟಿ :** ಮಾಧವಾನಂದ ಪ್ರಭೂಜಿ ಅವರು ಸರ್ವ ಧರ್ಮೀಯರನ್ನು ಸಮಾನ ಭಾವದಿಂದ ಕಾಣುವ ಮೂಲಕ ಸಮಾನತೆಯ ಸಂದೇಶ ಸಾರಿದ್ದಾರೆ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಮಬನೂರ ಗ್ರಾಮದ ಮಾಧವಾನಂದ ಪ್ರಭೂಜಿಯವರ ಆಶ್ರಮದಲ್ಲಿ ಇಚಗೆ ಹಮ್ಮಿಕೊಂಡಿದ್ದ ಮಾಧವಾನಂದ ಪ್ರಭೂಜಿಯವರ 109 ನೇ ಜಯಂತ್ಯೋತ್ಸವ ಹಾಗೂ ಕರೆಪ್ಪ ಮಹಾರಾಜರ 6ನೇ ಪುಣ್ಯಸ್ಮರಣೋತ್ಸವ, ತೊಟ್ಟಿಲು ಪೂಜೆ, ಸಾಮೂಹಿಕ ವಿವಾಹ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ಇಂದಿನ ಯುವಕರು ಮಾಧವಾನಂದ ಪ್ರಭೂಜಿ ಅವರ ತತ್ವ, ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಇಂಚಗೇರಿಮಠದ ಶ್ರೀ ಪ್ರಭುಜಿ ಮಹಾರಾಜರು ಮಾತನಾಡಿ, ಏಕತೆಯಿಂದ ಬದುಕುವ ಮೂಲಕ ಜಗತ್ತು ಅಜರಾಮರವಾಗಿ ಬೆಳೆಯುತ್ತಿದೆ. ಇಂಚಗೇರಿ ಮಾಧವಾನಂದರು ಎಲ್ಲ ಜಾತಿಯವರನ್ನು ಒಗ್ಗೂಡಿಸಿಕೊಂಡು ಮಹಾತ್ಮ ಗಾಂಧೀಜಿ ಹಾಗೂ ಜವಹರಲಾಲ ನೆಹರು ಅವರ ಜತೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕ್ರಾಂತಿಕಾರಿ ಎಂದರು.

ಮುಂಜಾನೆ ಗ್ರಾಮದ ಪ್ರಮುಖ ಬಿದಿಗಳಲ್ಲಿ ಮಾಧವಾನಂದ ಪ್ರಭೂಜೀಯವರ ಭಾವಚಿತ್ರ ಭವ್ಯ ಮೆರವನಿಗೆ, ಸುಮಂಗಲೆಯರಿಂದ ತೊಟ್ಟಿಲ ಪೂಜೆ ಜರುಗಿತು. ಶಾಸಕ ವಿಶ್ವಾಸ ವೈದ್ಯ ಅವರನ್ನು ಗ್ರಾಮಸ್ಥರು, ಕಾರ್ಯಕರ್ತರು ಸನ್ಮಾನಿಸಿದರು.

ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಸಾನ್ನಿದ್ಯ ವಹಿಸಿದ್ದರು, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಪಡಸಲಗಿ ಮಹಾರಾಜರು, ಮಾಜಿ ಗ್ರಾಪಂ ಸದಸ್ಯ ಕರೆಪ್ಪ ಮುರಗೋಡ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಅಧ್ಯಕ್ಷೆ ನಿಂಗವ್ವ ಮೇಟಿ, ಗೋಕಾಕ ಆದ–ತ್ಯಾತ್ಮ ಜ್ಞಾನಮಂದಿರದ ಸುವರ್ಣತಾಯಿ ಹೊಸಮಠ, ಕರ್ನಾಟಕ ರಾಜ್ಯ ಸ.ಮಾ. ಮ ಮಂಡಳಿ ನಿರ್ದೇಶಕ ರವೀಂದ್ರ ಯಲಿಗಾರ, ಕರ್ನಾಟಕ ಪ್ರದೇಶ ಕುರುಬರ ಕಾರ್ಯಧ್ಯಕ್ಷ ಬಸವರಾಜ ಬಸಳಿಗುಂದಿ, ಜಿಪಂ ಮಾಜಿ ಸದಸ್ಯ ಫಕೀರಪ್ಪ ಹದ್ದನ್ನವರ, ಸವದತ್ತಿ ಯಲ್ಲಮ್ಮ ದೇವಸ್ಥಾನ ವ್ಯವಸ್ಥಾಪನ ಸಮಿತಿ ಸದಸ್ಯ ಪುಂಡಲೀಕ ಮೇಟಿ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಮುನವಳ್ಳಿ ಪುರಸಭೆ ಅಧ್ಯಕ್ಷ ಸಿ.ಬಿ.ಬಾಳಿ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ರಾಮಚಂದ್ರ ಪಟಾತ, ಎಚ್. ಕೆ.ಪಟಾತ, ದಾವಲಸಾಬ ಶಿಂದೋಗಿ, ಯಲ್ಲಪ್ಪ ನರಿ, ಲಕ್ಷ್ಮಣ ಮುರಗೋಡ, ಜಡೆಪ್ಪ ಮುರಗೋಡ, ಮಂಜುಳಾ ಮಾದರ, ಬಸವ್ವ ಹಡಪದ, ಪಡೆಪ್ಪ ನರಿ, ಪಿಡಿಒ ರಾಜೇಸಾಬ ಚಿಪ್ಪಲಕಟ್ಟಿ, ಮಂಜು ಮುರಗೋಡ, ಸಂಗಪ್ಪ ಮುರಗೋಡ ಸೇರಿದಂತೆ ಇತರರು ಇದ್ದರು.

# ದೈಹಿಕ ಮಾನಸಿಕ ಬೆಳವಣಿಗೆಗೆ ಯೋಗ ಅವಶ್ಯಕ : . ಜಗದೀಶ ಎಸ್. ಗಸ್ತಿ



**ಮೂಡಲಗಿ :** ಮಕ್ಕಳ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕವಾಗಿ ಬೆಳವಣಿಗೆಗೆ ಯೋಗವು ಪ್ರಮುಖ ಪಾತ್ರ ವಹಿಸುತ್ತದೆ. ಜತೆಗೆ ಭಾವನಾತ್ಮಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಅಂಶಗಳನ್ನು ಒಳಗೊಂಡ ಯೋಗ ಅಧ್ಯಯನ ತುಂಬಾ ಅವಶ್ಯಕವಾಗಿದೆ ಎಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಡಾ. ಜಗದೀಶ ಎಸ್. ಗಸ್ತಿ ನುಡಿದರು.

ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 2024–25 ನೇ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಂತರ್ ಕಾಲೇಜುಗಳ ಏಕವಲಯ ಪುರುಷರ ಹಾಗೂ ಮಹಿಳೆಯರ ಯೋಗಾಸನ ಪಂದ್ಯಾವಳಿ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆಯ ಪ್ರಕ್ರಿಯೆ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಎಲ್ಲ ಕ್ರೀಡೆಗಳಿಗೆ ದೈಹಿಕ ಸಧೃಡತೆ ಮತ್ತು ಏಕಾಗ್ರತೆ ಅವಶ್ಯಕ ಅದನ್ನು ಯೋಗ ನೀಡುತ್ತದೆ. ಯೋಗ ಪಟುಗಳಿಗೆ ದೇಶ ವಿದೇಶಗಳಲ್ಲಿ ಸಾಕಷ್ಟು ಅವಕಾಶಗಳಿವೆ ಎಂದರು. ಎಸ್.ಆರ್.ಇ. ಸಂಸ್ಥೆಯ ಚೇರಮನ್ನ ಬಸನಗೌಡ ಶಿವಗೌಡ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾಡನಾಡಿ, ಯೋಗಾಸನ ಪಂದ್ಯಾವಳಿಯು ಯಶಸ್ವಿಯಾಗಿ ಜರುಗಲಿ ಎಂದು ಶುಭ ಹಾರೈಸಿದರು.

ಬೆಂಗಳೂರಿನ ಅಂತರಾಷ್ಟ್ರೀಯ ಯೋಗಾಸನ ತಾಂತ್ರಿಕ ಮುಖ್ಯಾಧಿಕಾರಿ ಡಾ. ಪ್ರೇಮಕುಮಾರ ಮುದ್ದಿ, ಬಾದಾಮಿ ಪದವಿ ಕಾಲೇಜಿನ ದೈಹಿಕ ನಿರ್ದೇಶಕ ಬಿ.ಎಸ್. ಪಾಟೀಲ, ಶ್ರೀಶೈಲ್ ಗೋಪಶೆಟ್ಟಿ, ಜಿಮ್ ಕೋಚ್ ದೇವರಾಜ ಚೌಗಲೆ, ಬೆನನ್ ಸ್ಮೀತ್ ಕಾಲೇಜಿನ ಪ್ರಾಚಾರ್ಯ ಡೇನಿಯಲ್ ಸ್ಯಾಮ್ಯುಯೆಲ್, ಎಸ್. ಆರ್.ಇ. ಸಂಸ್ಥೆಯ ಉಪಾಧ್ಯಕ್ಷರಾದ ಬಿ.ಆರ್. ಕಡಾಡಿ, ನಿರ್ದೇಶಕರುಗಳಾದ ಬಿ.ಎಸ್.ಗೋರೋಶಿ, ಎಸ್.ಎಂ. ಖಾನಾಪೂರ, ಎಂ.ಎಸ್. ಕಪ್ಪಲಗುದ್ದಿ, ಎಂ.ಡಿ.ಕುರಬೇಟ, ಕಾಲೇಜಿನ ಕ್ರೀಡಾ ಸಂಘಟನಾ ಕಾರ್ಯದರ್ಶಿ ಬಿ.ಕೆ. ಸೊಂಟನವರ, ವಿವಿಧ ಕಾಲೇಜುಗಳಿಂದ ಆಗಮಿಸಿದ ದೈಹಿಕ ನಿರ್ದೇಶಕರುಗಳು, ಯೋಗಪಟುಗಳು ಇನ್ನಿತರರು ಉಪಸ್ಥಿತರಿದ್ದರು ರಾಧಿಕಾ ಕರೆಪ್ಪಗೋಳ ಪ್ರಾರ್ಥಿಸಿದರು, ಡಿ.ಎಸ್. ಹುಗ್ಗಿ ಸ್ವಾಗತಿಸಿದರು, ಡಾ. ಕೆ.ಎಸ್. ಪರವ್ವಗೋಳ ನಿರೂಪಿಸಿದರು, ಬಿ.ಸಿ. ಮಾಳಿ ವಂದಿಸಿದರು.

## ತರಬೇತಿ-ಮಸ್ಟರಿಂಗ್-ಮತಗಟ್ಟೆ ಹಾಗೂ ಮತ ಎಣಿಕೆ ಕೇಂದ್ರಕ್ಕೆ ರಜೆ ಘೋಷಣೆ

**ಹಾವೇರಿ:** ಶಿಗ್ಗಾಂವ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಅಂಗವಾಗಿ ತರಬೇತಿ, ಮಸ್ಟರಿಂಗ್– ಡಿ ಮಸ್ಟರಿಂಗ್, ಮತಗಟ್ಟೆ ಸ್ಥಾಪಿಸುವ ಸರ್ಕಾರಿ ಕಚೇರಿ, ಶಾಲೆಗಳಿಗೆ ಹಾಗೂ ಮತ ಎಣಿಕೆ ಕೇಂದ್ರಕ್ಕೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ತರಬೇತಿ, ಮಸ್ಟರಿಂಗ್–ಡಿ ಮಸ್ಟರಿಂಗ್ ನಡೆಯುವ ಶಿಗ್ಗಾಂವ ಜೆ.ಎಂ.ಜೆ.ಹೈಸ್ಕೂಲಿಗೆ ದಿನಾಂಕ 7–11–2024 ಹಾಗೂ ದಿನಾಂಕ 12–11–2024 ರಿಂದ 13–11–2024ರವರೆಗೆ, ಮತದಾನಕ್ಕೆ ಮತಗಟ್ಟೆಗಳನ್ನು ಸ್ಥಾಪಿಸಿದ ಸರ್ಕಾರಿ ಕಚೇರಿಗಳಿಗೆ ಹಾಗೂ ಶಾಲೆಗಳಿಗೆ ದಿನಾಂಕ 12–11–2024 ರಿಂದ 13–11–2024ರವರೆಗೆ ಹಾಗೂ ಮತ ಎಣಿಕೆ ಕೇಂದ್ರ ಸ್ಥಾಪಿಸಲಾದ ದೇವಗಿರಿ ಸರ್ಕಾರಿ ಇಂಜನೀಯರಿಂಗ್ ಕಾಲೇಜಿಗೆ ದಿನಾಂಕ 23–11–2024 ರಂದು ರಜೆ ಘೋಷಣೆ ಮಾಡಿ ಆದೇಶ ಹೊರಡಿಸಲಾಗಿದೆ. ಈ ಮೇಲಿನ ರಜಾ ದಿನಗಳನ್ನು ಮುಂದಿನ ದಿನ ಸರ್ಕಾರಿ ರಜೆ ದಿನಗಳಲ್ಲಿ ಹೊಂದಾಣಿಕೆ ಮಾಡಿ ತರಗತಿಗಳನ್ನು ನಡೆಸಲು ಕ್ರಮಕೈಗೊಳ್ಳಲು ಸೂಚನೆ ನೀಡಲಾಗಿದೆ.

# ಕೋತಿಗೆ ಚಲ್ಲಾಟ.., ಜನರಿಗೆ ಪ್ರಾಣ ಸಂಕಟ

## ಸಾರ್ವಜನಿಕರಿಗೆ ಹುಚ್ಚ ಕೋತಿಯ ಕಾಟ ನಿಯಂತ್ರಣಕ್ಕೆ ಆಗ್ರಹ


**ವರದಿ, ಸಿದ್ದಯ್ಯ ಹಿರೇಮಠ**

**ಮೋಳೆ ;** ಕಾಗವಾಡ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಲಾಬಾದ ಹಾಗೂ ಬಳ್ಳಿಗೇರಿ ಗ್ರಾಮದಲ್ಲಿ ಹುಚ್ಚ ಕೋತಿಯೊಂದು ಬಂದಿದ್ದು ಅದರ ಉಪಟಳ ಹೆಚ್ಚಾಗಿದ್ದು ಮಕ್ಕಳು, ಮುದುಕರು ಎನ್ನದೆ ಅಂಗಡಿ, ಶಾಲೆ, ಮನೆ, ಎನ್ನದೆ ಎಲ್ಲಿ ಬೇಕೆಂದರಲ್ಲಿ ಹೊಕ್ಕು ದಾಳಿ ಮಾಡಿ ಕಚ್ಚುತಿದೆ. ಇದರಿಂದ ಸಾರ್ವಜನಿಕರು ರೋಷಿ ಹೋಗಿದ್ದಾರೆ.

ಬೆಳಗ್ಗೆಯಾಯಿತೆಂದರೆ ಮಹಿಳೆಯ–ರಿಗೆ, ವ್ಯಾಪಾರಸ್ಥರಿಗೆ ಮತ್ತು ಶಾಲಾ ಮಕ್ಕಳಿಗೆ ಕೋತಿಯ ಕಾಟ ಪ್ರಾರಂಭವಾಗುತ್ತದೆ. ಶಾಲಾ ಮಕ್ಕಳ ಬ್ಯಾಗಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿವೆ. ಹೆದರುವ ಮಕ್ಕಳು ಕಿರುಚಿ ಓಡಿದರೆ ಅವರ ಮೇಲೆ ದಾಳಿ ನಡೆಸುತ್ತವೆ. ಮಹಿಳೆಯರಿಗೆ ಬೆಳಗ್ಗೆಯಾದರೆ ತಮ್ಮ ಮಕ್ಕಳನ್ನು ಶಾಲೆಗೆ ತಂದು ಬಿಡುವುದೇ ಸಮಸ್ಯೆಯಾಗಿದೆ.

ಹಾಲು ಮಾರುವವರು, ತರಕಾರಿ ಹಣ್ಣು ಮಾರಾಟಗಾರರು ಈ ಸಮಸ್ಯೆಯಿಂದ ಹೊರತಾಗಿಲ್ಲ ಬೆಲೆ ಹೆಚ್ಚಳ ಹಾಗೂ ವ್ಯಾಪಾರವಿಲ್ಲದೇ ಕಂಗೆಟ್ಟು ಹಣ್ಣು, ತರಕಾರಿ ವ್ಯಾಪಾರಸ್ಥರಿಗೆ ಅಂಗಡಿ, ಮನೆಗಳಲ್ಲಿ ಹೊಕ್ಕು ಮಲಾಬಾದ, ಹಾಗೂ ಬಳ್ಳಿಗೇರಿ ಗ್ರಾಮ ಸೇರಿ ಸುಮಾರು 30 ಕ್ಕೂ ಅಧಿಕ ಜನರಿಗೆ ಕಚ್ಚಿದೆ.ಅಥಣಿಯ ಸಾರ್ವಜನಿಕ ಆಸ್ಪತ್ರೆತಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದ ಸಾರ್ವಜನಿಕರು ಭಯದ ವಾತಾವರಣ್ದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅರಣ್ಯ ಇಲಾಖೆಯವರು ಈ ಹುಚ್ಚ ಕೋತಿಯನ್ನು ಸೇರೆ ಹಿಡಿಯುವಂತೆ ಆಗ್ರಹಿಸುತ್ತಿದ್ದಾರೆ.

ಈ ಕೋತಿಯಿಂದ ಆಗುವ



ನಷ್ಟ ಅಷ್ಟಿಷ್ಟಲ್ಲ. ಆದರೆ ಇಷ್ಟೆಲ್ಲಾ ಅನಾಹುತವಾಗುತ್ತಿದ್ದರು ಗ್ರಾಮ

> ನನ್ನ ಅಂಗಡಿಗೆ ಹುಚ್ಚ ಹಿಡಿದಿರುವ ಕೋತಿ ನುಗ್ಗಿ ನನ್ನ ಮೇಲೆ ದಾಳಿ ಮಾಡಿ ಮೂಖಕ್ಕೆ ಖಡಿದು, ಮೈಯಲ್ಲಿ ಪರಚಿ ಹೋಗಿದೆ,ನಾನು ಸೇರಿದಂತೆ ಗ್ರಾಮದಲ್ಲಿ 20 ಕ್ಕೂ ಅಧಿಕ ಜನ–ರಿಗೆ ಈ ಕೋತಿ ಗಾಯ ಮಾಡಿದ್ದು, ಅಥಣಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದಿರುತ್ತಾರೆ. ಗ್ರಾಮ ಪಂಚಾಯತಿಯವರು ಹಾಗೂ ಅರಣ್ಯ ಇಲಾಖೆಯವರು ಹುಚ್ಚ ಕೋತಿಯನ್ನು ಹಿಡಿದು ಜನರು ನೆಮ್ಮದಿಯಿಂದ ಇರುವ ವಾತಾವರಣ ನಿಮರ್ಶಣ ಮಾಡಬೇಲು.
>
> **ಖಾಜಾಸಾಬ ಮಿರಜಕರ**
> **ಅಂಗಡಿ ಮಾಲಿಕ ಮಲಾಬಾದ.**

ಪಂಚಾಯತಿಯವರು ಹಾಗೂ ಅರಣ್ಯ ಇಲಾಖೆಯವರು ತಮಗೇನು ತಿಳಿ ಗೊತ್ತೇ ಇಲ್ಲ ಎಂಬಂತೆ ಇರುವುದು ಜನತೆಗೆ ಬೇಸರ ತಂದಿದೆ.

ಜನನಿ ಬೀಡ ಪ್ರದೇಶಗಳ ಮಾತ್ರವಲ್ಲದೇ ಆಹಾರಕ್ಕಾಗಿ ಈ ವಾನರ ಗ್ರಾಮದ ಸುತ್ತಮುತ್ತಲಿನ ತೋಟಗಳಿಗೂ ದಾಳಿ ಇಟ್ಟು ತೆಂಗಿನಕಾಯಿ, ಬಾಳೆ, ಟೊಮೆಟೋ, ಪಪ್ಪಾಯಿ ಸೇರಿದಂತೆ ವಿವಿಧ ತರಕಾರಿಗಳನ್ನು ನಾಶ ಮಾಡಿ ರೈತರಿಗೆ ನಷ್ಟವನ್ನುಂಟು ಮಾಡುತ್ತಿರುವದರಿಂದ ರೋಷಿ ಹೋಗಿದ್ದಾರೆ.

ಮನೆ, ಮಠ ಎನ್ನದೆ ಕೋತಿ ಎಲ್ಲಿ ಬೇಕಾದಲ್ಲಿ ನುಗ್ಗಿ ತನ್ನ ಮನಬಂದಂತೆ ಜಿಗಿದಾಡುತ್ತಿವೆ. ಅಲ್ಲದೆ ತನ್ನ ಜೀವದ ಹಂಗು ತೊರೆದು ವಿದ್ಯುತ್ ತಂತಿಗಳ ಮೇಲೆ ತಮ್ಮ ಕಪಿಚೇಷ್ಟೆಯನ್ನು ಪ್ರದರ್ಶಿಸಿಸುತ್ತಿವೆ.



ಗ್ರಾಮದ ಜನರು ಹಗಲು–ಇರುಳು ಕೋತಿಗೆ ಹೆದರಿ ಬಾಗಿಲು ಮುಚ್ಚಿಕೊಂಡು ಕುರುವ ಅನಿವಾರ್ಯತೆ ಬಂದಿದೆ. ಇಷ್ಟೆಲ್ಲಾ ಆದರೂ ಗ್ರಾಮ ಪಂಚಾಯತಿ. ಇದರ ನಿಯಂತ್ರಣಕ್ಕೆ ಯಾವುದೇ ಕ್ರಮ ಕೈಗೊಳ್ಳದಿರುವುದುಖೇದಕರ ಸಂಗತಿ. ಈ ಗ್ರಾಮದಲ್ಲಿ ಪಂಚಾಯತಿ ಇದೆಯಾ?

> ನಮ್ಮೂರಲ್ಲಿ ಹುಚ್ಚ ಮಂಗವೊಂದು ಬಂದಿದೆ ಎಂದು ಗ್ರಾಮ ಪಂಚಾಯತಿಯವರು ನಮಗೆ ಪತ್ರ ಕೊಡಬೇಕಾಗಿ–ತ್ತು.ನಮಗೆ ಕೊಟ್ಟಿಲ್ಲ, ಯಾರೋ ಒಬ್ಬರು ನಮಗೆ ಫೋನ ಹಾಡಿ ಹೇಳಿದ್ದಾರೆ. ಗುರುವಾರ ರಾಯಬಾಗದಲ್ಲಿರುವ ಮಂಗನನ್ನು ಹಿಡಿಯುವ ಪರಿನಿತರನ್ನು ಕರೆಯಿಸಿ ಹುಚ್ಚು ಹಿಡಿದಿರುವ ಮಂಗನನ್ನು ಹಿಡಿಯುತ್ತೇವೆ.
>
> **ರಾಖೇಶ ಅರ್ಜುನವಾಡ**
> **ಅರಣ್ಯ ಅಧಿಕಾರಿಗಳು ಅಥಣಿ**

ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕೆಲವು ಮನೆಗಳಲ್ಲಿ ಬಿಸಿಲಿಗೆ ಒಣಗಲು ಇಡುವ ಕೊಬ್ಬರಿ, ಕಡಲೆಬೇಳೆ, ಶೇಂಗಾ ಸೇರಿದಂತೆ ಮತ್ತಿತರ ಆಹಾರ ಪದಾರ್ಥಗಳನ್ನು ಕೋತಿ ನಾಶ ಮಾಡುವುದಲ್ಲದೇ ತಟ್ಟೆ, ಪಾತ್ರೆಗಳನ್ನು ಸಹ ಕೊಂಡ್ಯೊಯುತ್ತಿರುವದನ್ನು ಮಹಿಳೆಯರು ಗಾಬರಿಗೊಳಗಾಗಿದ್ದಾರೆ.ಮಂಗಳವಾರ ವಾರದ ಸಂತೆಯಲ್ಲಿ ಹಲವಾರು ಜನರನ್ನು ಕಚ್ಚಿ ಭಯ ಹುಟ್ಟಿಸಿದೆ. ಅರಣ್ಯ ಇಲಾಖೆಯವರಿಗೂ ಕೋತಿಗೂ, ತಮಗೂ ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿದ್ದಾರೆ. ಗ್ರಾ.ಪಂ. ಸಹ ಕೈ ಚೆಲ್ಲಿ ಕುಳಿತಿರುವದ–ರಿಂದ ಜನರು ಪ್ರತಿದಿನ ಕೋತಿಗಳ ಕಾಟ ತಾಳಲಾರದೆ ಹಿಡಿ ಶಾಪ ಹಾಕುತ್ತಿದ್ದಾರೆ.

ಗ್ರಾಮ ಪಂಚಾಯತಿಯವರು ಇನ್ನಾದರೂ ಎಚ್ಚೆತ್ತು ಕೋತಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಜನರ ಆಶೆಯವಾಗಿದೆ.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 228 Postal Reg No. PMG/KA/NK/BM/135/22-24 / POST AT Vantamury Colony Post Office